ಅರ್ಥ–9

ಮೇ, 2026





ಪ್ರಖ್ಯಾತ ಕಲಾವಿದ ಪಾಬ್ಲೊ ಪಿಕಾಸೊ ಅವರ ಯುದ್ಧದ ಪರಿಣಾಮವನ್ನು ಕುರಿತ ಪ್ರಸಿದ್ಧ ಚಿತ್ರ ಗೆರ್ನಿಕಾದ ಒಂದು ಭಾಗ



ಅರ್ಥ–9

ಮೇ, 2026

ಅರ್ಥಶಾಸ್ತ್ರವನ್ನು ಕುರಿತ ಪತ್ರಿಕೆ

ಒಳಪುಟಗಳಲ್ಲಿ

ಆತ್ಮೀಯರೆ,

ಅರ್ಥ ಒಂಬತ್ತನೆಯ ಸಂಚಿಕೆ ಮುಗಿಸಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಗೆಳೆಯರ ಸಲಹೆಗಳ ಮೇರೆಗೆ ಒಂದಿಷ್ಟು ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಸಂಚಿಕೆಯ ಗಾತ್ರವನ್ನು ಕಡಿಮೆ ಮಾಡಿ ಅನ್ನುವ ಸಲಹೆಯನ್ನು ಹಲವರು ನೀಡಿದ್ದರು. ಈಗ 20 ಪುಟಗಳಷ್ಟು ಕಡಿಮೆ ಮಾಡಿದ್ದೇನೆ. ಎರಡು ತಿಂಗಳಿಗೆ ತರುವ ಬದಲು ಸಾಧ್ಯವಾದಷ್ಟು ತಿಂಗಳಿಗೊಮ್ಮೆ ತರಲು ಪ್ರಯತ್ನಿಸುತ್ತೇನೆ. ಲೇಖನಗಳು ಸಾಧ್ಯವಾದಷ್ಟು ಪುಟ್ಟದಾಗಿರಲಿ ಎಂಬುದು ಇನ್ನೊಂದು ಸಲಹೆ. ಅದನ್ನು ಒಪ್ಪಿಕೊಂಡು ಲೇಖನಗಳನ್ನು ಸುಮಾರಾಗಿ 1400 ಪದಗಳಿಗೆ ಸೀಮಿತಗೊಳಿಸಲು ಆದಷ್ಟು ಪ್ರಯತ್ನಿಸಿದ್ದೇನೆ. ಅಮರ್ತ್ಯ ಸೇನ್ ಅವರ ವಿಚಾರಗಳು ಮತ್ತು ಭಾರತೀಯ ಅರ್ಥಶಾಸ್ತಜ್ಞರನ್ನು ಪರಿಚಯಿಸುವ ಲೇಖನಗಳು ಅನಿವಾರ್ಯವಾಗಿ ಸ್ವಲ್ಪ ದೊಡ್ಡದಾಗುತ್ತವೆ. ಬಹುತೇಕ ಜನ ಮೊಬೈಲಿನಲ್ಲಿ ಓದುವುದರಿಂದ ವಾಕ್ಯಗಳು ಪುಟ್ಟದಾಗಿರಲಿ ಎನ್ನುವ ಸಲಹೆ ಕೂಡ ಇತ್ತು. ಆ ನಿಟ್ಟಿನಲ್ಲಿಯೂ ಪ್ರಯತ್ನಿಸಿದ್ದೇನೆ. ಈ ಬದಲಾವಣೆಗಳಿಂದ ಓದು ಸಲೀಸಾಗುವುದಾದರೆ ಸಂತೋಷ.

ಅರ್ಥಕ್ಕೆ ಹಲವರು ಹಲವು ವಿಧದಲ್ಲಿ ಸಹಕರಿಸುತ್ತಿದ್ದಾರೆ. 'ಈದಿನ' ಪತ್ರಿಕೆಯವರು ಇದನ್ನು ಹೆಚ್ಚಿನವರಿಗೆ ತಲುಪಿಸುವ ದಿಕ್ಕಿನಲ್ಲಿ ನೆರವಾಗುತ್ತಿದ್ದಾರೆ. ಹಿರಿಯ ಅರ್ಥಶಾಸ್ತ್ರಜ್ಞರು ತಮ್ಮ ಲೇಖನಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿ ಸಹಕರಿಸಿದ್ದಾರೆ. ಈ ಬಾರಿಯೂ ನಾಲ್ಕು ನೋಬೆಲ್ ಪ್ರಶಸ್ತಿ ವಿಜೇತರ – ಅಭಿಜಿತ್ ಬ್ಯಾನರ್ಜಿ, ಜೋಸೆಫ್ ಇ. ಸ್ಟಿಗ್ಲಿಟ್ಜ್, ಸೈಮನ್ ಜಾನ್ಸನ್, ಕ್ಲಾಡಿಯಾ ಗೋಲ್ಡಿನ್ – ಲೇಖನಗಳನ್ನು ಪ್ರಕಟಿಸಲು ಸಾಧ್ಯವಾಗಿದೆ. ಅದನ್ನು ಸಾಧ್ಯ ಮಾಡಿದ ಅಭಿಜಿತ್ ಬ್ಯಾನರ್ಜಿ ಹಾಗೂ ಪ್ರಾಜೆಕ್ಟ್ ಸಿಂಡಿಕೇಟ್ ತಂಡಕ್ಕೆ ಕೃತಜ್ಞತೆಗಳು. ಹಾಗೆಯೇ ನಮ್ಮ ನಡುವಿನ ಹಿರಿಯ ಆರ್ಥಿಕ ತಜ್ಞರಾದ ಜೀನ್ ಡ್ರೀಜ್, ಸಿ ರಂಗರಾಜನ್, ಡಿ ಕೆ ಶ್ರೀವಾತ್ಸವ, ಪ್ರಭಾತ್ ಪಟ್ನಾಯಕ್, ಅಭಿಮಾನ್ ದಾಸ್ ಮತ್ತು ಸ್ಮಿತ ತ್ರಿವೇದಿಯವರು ತಮ್ಮ ಲೇಖನಗಳನ್ನು ಬಳಸಿಕೊಳ್ಳಲು ಸಮ್ಮತಿಸಿದ್ದಾರೆ. ಅವರಿಗೆ ಕೃತಜ್ಞತೆಗಳು.

ಅಭಿಜಿತ್ ಬ್ಯಾನರ್ಜಿಯವರು ಟೈಮ್ಸ್ ಆಫ್ ಇಂಡಿಯ ದಿನಪತ್ರಿಕೆಯಲ್ಲಿ ಬರೆಯುವ ಅಂಕಣದ ಲೇಖನಗಳಲ್ಲಿ ಕೆಲವನ್ನು ಅರ್ಥದ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುತ್ತೇವೆ. ಹಾಗೆಯೇ ಜಗತ್ತಿನ ಹಿರಿಯ ಅರ್ಥಶಾಸ್ತ್ರಜ್ಞರ ಲೇಖನಗಳನ್ನೂ ಮುಂದೆ ಪ್ರಕಟಿಸುವುದಕ್ಕೆ ಸಾಧ್ಯವಾಗಬಹುದು. ಅರ್ಥಶಾಸ್ತ್ರದ ಬಗ್ಗೆ ಎಲ್ಲೆಡೆ ನಡೆಯುತ್ತಿರುವ ವಿಭಿನ್ನ ಚರ್ಚೆಗಳು ಕನ್ನಡದಲ್ಲೂ ಲಭ್ಯವಾಗಬೇಕು, ಅ ಮೂಲಕ ಚರ್ಚೆಯಾಗಬೇಕು ಅನ್ನುವ ಆಸೆಯಿಂದ ಅರ್ಥ ಪ್ರಕಟವಾಗುತ್ತಿದೆ.

ನಿಮ್ಮ ಸಹಕಾರ, ಸಲಹೆ ಪತ್ರಿಕೆಯನ್ನು ಹೆಚ್ಚು ಉಪಯುಕ್ತವಾಗಿಸುವ ನಿಟ್ಟಿನಲ್ಲಿ ಸಹಾಯಕ. ಯಾವುದೇ ಸಲಹೆಯೂ ಸ್ವಾಗತಾರ್ಹ.

ದಯಮಾಡಿ ಆಸಕ್ತ ಗೆಳೆಯರೊಂದಿಗೆ ಹಂಚಿಕೊಳ್ಳಿ. ಇಮೇಲ್ ತಲುಪಿಸಿದರೆ ಅವರಿಗೂ ತಲುಪಿಸಬಹುದು. 'ಅರ್ಥ' ಪತ್ರಿಕೆಯ ಹಳೆಯ ಸಂಚಿಕೆಗಳಿಗೆ ಮತ್ತು ನಮ್ಮ ಇತರ ಪುಸ್ತಕ ಹಾಗೂ ಬರಹಗಳಿಗೆ www.lokayatha.com ನೋಡಿ.

ಪ್ರೀತಿಯಿಂದ

ಟಿ ಎಸ್ ವೇಣುಗೋಪಾಲ್

statsvenugopal@gmail.com

9900082773

ಸೀಬೇ ನಿನ್ಕಂಡ್ರೆ ನಂಗ್ಬಲು ಇಷ್ಟ



ಅಭಿಜಿತ್ ಬ್ಯಾನರ್ಜಿ

ನಾನು ಸಾಹಸದ ಕಥೆಗಳನ್ನೇ ಓದುತ್ತಾ ಪಟ್ಟಣದಲ್ಲಿ ಬೆಳೆದ ಹುಡುಗ. ನನಗೆ ಮರ ಹತ್ತಿ ಹಣ್ಣು ಕೀಳೋದಂದ್ರೆ ಭಾರಿ ಇಷ್ಟ. ಒಮ್ಮೆ ನಾವು ಹೋಗಿದ್ದ ಮನೆಯ ತೋಟದಲ್ಲಿ ಹಣ್ಣು ತುಂಬಿದ್ದ ಸೀಬೆ ಮರಗಳ ಸಾಲನ್ನು ನೋಡಿದ ಮೇಲಂತು ನನ್ನ ಆಸೆಯನ್ನು ಹತ್ತಿಕ್ಕಿಕೊಳ್ಳಲು ಆಗಲೇ ಇಲ್ಲ. ಸೀಬೆಮರದಲ್ಲಿ ರೆಂಬೆಗಳು ಕೆಳಗಿನಿಂದಲೇ ಕವಲೊಡೆದಿರುತ್ತವೆ. ಹಣ್ಣಿನ ಭಾರಕ್ಕೆ ತೊನೆದು, ತೂಗುತ್ತಿದ್ದ ರೆಂಬೆಯನ್ನು ಏರೋದು ನನಗೆ ನೀರು ಕುಡಿದಷ್ಟು ಸುಲಭವಾಗಿತ್ತು. ಹಣ್ಣಿನ ಭಾರದಿಂದ ಬಾಗಿದ್ದ ರೆಂಬೆಯ ಮೇಲೆ ಕುಳಿತಿದ್ದೆ. ಅಂಡೂರಿಕೊಂಡು ಒಂದೆರಡು ಅಡಿ ಕೆಳಗೆ ಜಾರಬೇಕಿತ್ತು ಅಷ್ಟೆ. ಆಗ ನನ್ನ ಕಾಲುಗಳ ಮೇಲೆ ಏನೋ ಹರಿದಾಡಿದಂತಾಯ್ತು. ನೋಡಿದರೆ ದಷ್ಟಪುಷ್ಟವಾದ ಕೆಂಜಿಗಗಳ ಸೈನ್ಯ ನೇರವಾಗಿ ನನ್ನ ಚಡ್ಡಿಯೊಳಕ್ಕೇ ಮೆರವಣಿಗೆ ಹೊರಟಿತ್ತು!

ಮುಂದಿನದನ್ನು ನಾನೇನು ಹೇಳಬೇಕಿಲ್ಲ. ನಾನು ಹುಲ್ಲುಹಾಸುಗಳನ್ನು ಹಾರಿಕೊಂಡು ಹತ್ತಿರದ ಬಚ್ಚಲು ಮನೆಗೆ ಅಷ್ಟು ವೇಗವಾಗಿ ದೌಡಾಯಿಸಿದ್ದನ್ನು ನೋಡಿ ನನ್ನಮ್ಮ ದಂಗಾಗಿದ್ದಳು. ಸೀಬೆ ಮರದಲ್ಲಿ ಕೆಂಜಿಗಗಳು ಇರುತ್ತವೆ ಎನ್ನುವುದು ನನಗೆ ಅಂದೇ ಗೊತ್ತಾಗಿದ್ದು. ಅವು ಅದೇನನ್ನು ಹುಡುಕುತ್ತಿದ್ದವೊ ನನಗಂತೂ ತಿಳಿಯದು. ಆದರೆ ಅದು ಸಿಗದೇ ಹೋದಾಗ ಭೀಕರವಾಗಿ ಕಚ್ಚುತ್ತವೆ.

ನನಗೆ ಈಗಲೂ ಸೀಬೆಹಣ್ಣು ಎಂದರೆ ತುಂಬಾ ಇಷ್ಟ. ಅದರಲ್ಲೂ ಬೆಂಗಾಲಿಯಲ್ಲಿ ದಂಶ ಎಂದು ಕರೆಯುವ ಸೀಬೆಹಣ್ಣು ಕಂಡರೆ ಬಲುಪ್ರೀತಿ. ಇನ್ನೂ ಹಣ್ಣಾಗುವ ಹಂತದಲ್ಲಿರುವ (ಅರೆಬಲಿತ) ಹಣ್ಣುಗಳೆಂದರೆ ಇನ್ನೂ ಪ್ರೀತಿ (ಇದು ಕೇಳುವುದಕ್ಕೆ ಸ್ವಲ್ಪ ಅಸಭ್ಯ ಅನಿಸಬಹುದು). ಸಿಹಿ, ಹುಳಿ, ಮತ್ತೆ ಸ್ವಲ್ಪ ಒಗರು ಬೆರೆತ ಆ ರುಚಿಯಿಂದ ಬಾಯಲ್ಲಿ ಒಂದು ತಾಜಾತನ ಚಿಮ್ಮುತ್ತದೆ. ನಿಮ್ಮ ಬಾಯೊಳಗೆ ಸಣ್ಣ ದೀಪವೊಂದು ಹೊತ್ತಿದಂತೆ ಅನಿಸುತ್ತದೆ. ಚಾಟ್ಸ್ ಮತ್ತೆ ಸಲಾಡ್‌ಗಳಿಗಂತೂ ಇದು ಬಲು ಸೊಗಸು. ವಿಟಮಿನ್‌ಭರಿತವಾದ ಇದರಲ್ಲಿ ನಾರಿನಂಶ ಹೆಚ್ಚಿಗೆ ಇರುತ್ತದೆ. ಅಷ್ಟೇ ಅಲ್ಲ, ಇದರಲ್ಲಿ ಕಬ್ಬಿಣದ ಅಂಶವೂ ಇರುತ್ತದೆ (ವಿಶೇಷವಾಗಿ ಗುಲಾಬಿ ಕೆಂಪು ಬಣ್ಣದ ತಿರುಳಿರುವ ಸೀಬೆಹಣ್ಣಿನಲ್ಲಿ). ಇದರ ಗ್ಲೈಸೆಮಿಕ್ ಇಂಡೆಕ್ಸ್ ಕೂಡ ತುಂಬಾ ಕಡಿಮೆ.

ಸೀಬೆಹಣ್ಣಿನಲ್ಲಿ ವಿಟಮಿನ್ ಸಿ ಹೇರಳವಾಗಿ ಇರುವುದರಿಂದ, ಅದು, ನಮ್ಮ ದೇಹದ ಕಬ್ಬಿಣದಂಶವನ್ನು ಹೀರಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಹರಿಯಾಣದ ಚೌಧರಿ ಚರಣ್ ಸಿಂಗ್ ಕೃಷಿ ವಿಶ್ವವಿದ್ಯಾಲಯದ ವರ್ಷಾ ರಾಣಿ ನೇತೃತ್ವದ ತಂಡವು 2024ರಲ್ಲಿ ಒಂದು ಯಾದೃಚ್ಛಿಕ ನಿಯಂತ್ರಿತ ಪ್ರಯೋಗ [randomised controlled trial] ನಡೆಸಿತು. ಅದರ ಪ್ರಕಾರ, ಏಳು ತಿಂಗಳ ಕಾಲ ಶಾಲೆಯ ಮಧ್ಯಾಹ್ನದ ಊಟದಲ್ಲಿ ಹೆಸರುಬೇಳೆಯ ಜೊತೆಗೆ ಸೀಬೆಹಣ್ಣನ್ನೂ ಕೊಡಲಾಯಿತು. ಅದನ್ನು ಸೇವಿಸಿದ 6ರಿಂದ 10 ವರ್ಷದ ಮಕ್ಕಳಲ್ಲಿ, ಕೇವಲ ಹೆಸರುಬೇಳೆ ಮಾತ್ರ ತಿಂದವರಿಗಿಂತ ರಕ್ತಹೀನತೆಗೆ [Anemia] ತುತ್ತಾಗುವ ಸಾಧ್ಯತೆ ಶೇ. 50ರಷ್ಟು ಕಡಿಮೆ ಇರುವುದು ಕಂಡುಬಂದಿತು.

ಇದು ಮುಖ್ಯ, ತುಂಬಾ ಮುಖ್ಯವಾದ ವಿಷಯ. ಏಕೆಂದರೆ ಜಗತ್ತಿನಲ್ಲಿ ಸುಮಾರು ಎರಡು ಶತಕೋಟಿ ಜನರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಮತ್ತು ಭಾರತದಲ್ಲಿ ಅವರ ಸಂಖ್ಯೆ ಅತ್ಯಂತ ಹೆಚ್ಚಿಗೆ ಇದೆ. ಪ್ರಸ್ತುತ ಜಾಗತಿಕ ಮಾನದಂಡಗಳ ಪ್ರಕಾರ, ಭಾರತದ ಸುಮಾರು ಶೇ. 60ರಷ್ಟು ಮಹಿಳೆಯರು ಮತ್ತು ಮಕ್ಕಳು ಹಾಗೂ ಶೇ. 30ಕ್ಕಿಂತ ಹೆಚ್ಚು ಪುರುಷರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ.

ಬಾಂಗ್ಲಾದೇಶ ಅಥವಾ ಪಾಕಿಸ್ತಾನಕ್ಕಿಂತ ನಮ್ಮಲ್ಲಿ ರಕ್ತಹೀನತೆಯಿಂದ ಬಳಲುತ್ತಿರುವವರ ಪ್ರಮಾಣ ಹೆಚ್ಚಿಗೆ ಇದೆ; ನಮಗಿಂತ ಹೆಚ್ಚು ಬಡತನದಲ್ಲಿರುವ ದೇಶಗಳ ಮಟ್ಟದಲ್ಲಿ ಈಗ ನಾವಿದ್ದೇವೆ. ರುಚಿಯಾದ, ತಾಜಾ ಸೀಬೆಹಣ್ಣು ಸಲೀಸಾಗಿ ಕೈಗಟುಕುವಂತಿದ್ದರೂ (ಆದರೆ ಕೆಂಜಿಗದ ಬಗ್ಗೆ ಸ್ವಲ್ಪ ಹುಷಾರಾಗಿರಬೇಕು) ನಮಗೆ ಈ ಪರಿಸ್ಥಿತಿ ಬಂದಿದೆ! ರಕ್ತಹೀನತೆ ಎಲ್ಲರಿಗೂ ಇರುತ್ತದೆ. ಇದೇನು ದೊಡ್ಡ ಕಾಯಿಲೆಯಲ್ಲ ಅಂದುಕೊಂಡರೆ ಅದು ತಪ್ಪು.

ಮೊದಲನೆಯದಾಗಿ, ಇತ್ತೀಚಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ [NFHS] ಪ್ರಕಾರ, 5 ಕೋಟಿಗಿಂತಲೂ ಹೆಚ್ಚು ಮಕ್ಕಳು ತೀವ್ರ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಇದರಿಂದ ದೈಹಿಕ ಬೆಳವಣಿಗೆ ಮತ್ತು ಬೌದ್ಧಿಕ ವಿಕಸನ ಎರಡಕ್ಕೂ ತೊಂದರೆಯಾಗುತ್ತದೆ. ಅದು ಮನುಷ್ಯನನ್ನು ದೈಹಿಕವಾಗಿ ಕುಂದಿಸುತ್ತದೆ. ಕೆಲವೊಮ್ಮೆ ಜೀವಕ್ಕೂ ಕುತ್ತಾಗಬಹುದು.

ಇದಲ್ಲದೆ, ಮೂರು ವರ್ಷದೊಳಗಿನ ಮಕ್ಕಳಲ್ಲಿ ಶೇಕಡಾ 9ರಷ್ಟು ಮಂದಿ ತೀವ್ರ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಇದರಿಂದ ಅವರ ಮೆದುಳಿನ ಬೆಳವಣಿಗೆ ಕುಂಠಿತಗೊಳ್ಳುವ ಅಪಾಯವಿದೆ.

ಎರಡನೆಯದಾಗಿ ಗರ್ಭಿಣಿಯರಲ್ಲಿ ಮಗು ಮತ್ತು ತಾಯಿ ಇಬ್ಬರಿಗೂ ರಕ್ತಹೀನತೆ ತುಂಬಾ ಅಪಾಯಕಾರಿ. ಲ್ಯಾನ್‌ಸೆಟ್ ಗ್ಲೋಬಲ್‌ನಲ್ಲಿ ಇತ್ತೀಚೆಗೆ ಪ್ರಕಟವಾಗಿರುವ ಲೇಖನದ ಪ್ರಕಾರ ಹೆರಿಗೆ ಸಮಯದಲ್ಲಿ ಅತಿಯಾದ ರಕ್ತಸ್ರಾವವಾಗಿ, ತಾಯಿ ಸಾವನ್ನಪ್ಪುವ ಸಾಧ್ಯತೆ ರಕ್ತಹೀನತೆಯಿದ್ದವರಲ್ಲಿ 7 ಪಟ್ಟು ಹೆಚ್ಚಿಗೆ ಇರುತ್ತದೆ. ನನ್ನ ಲೆಕ್ಕಾಚಾರದ ಪ್ರಕಾರ ಪ್ರತಿ ವರ್ಷ ಸುಮಾರು 3 ಲಕ್ಷ ಮಹಿಳೆಯರು ಇಂತಹ ಅಪಾಯದ ನಡುವೆಯೇ ಮಗುವಿಗೆ ಜನ್ಮ ನೀಡುತ್ತಿದ್ದಾರೆ. ಮತ್ತು ಅವರಲ್ಲಿ ಸಾಯುವವರ ಸಂಖ್ಯೆಯೂ ಗಣನೀಯವಾಗಿದೆ.

ರಕ್ತಹೀನತೆ ಸಣ್ಣ ಪ್ರಮಾಣದಲ್ಲಿದ್ದರೂ ಜನರಿಗೆ ತೊಂದರೆಯಾಗುತ್ತದೆ. ಏಕೆಂದರೆ ರಕ್ತಹೀನತೆಯಿಂದ ರಕ್ತದಲ್ಲಿನ ಹಿಮೋಗ್ಲೋಬಿನ್ ಮಟ್ಟ ಕಡಿಮೆಯಾಗುತ್ತದೆ. ಈ ಹಿಮೋಗ್ಲೋಬಿನ್ ಮೂಲಕ ಸಾಗುವ ಆಮ್ಲಜನಕ ಸ್ನಾಯುಗಳಿಗೆ ಚೈತನ್ಯ ನೀಡುತ್ತದೆ.

ನೋಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಅಭಿಜಿತ್ ಬ್ಯಾನರ್ಜಿ ಅವರಿಗೆ ಅರ್ಥಶಾಸ್ತ್ರದ ಓದು, ಯಾದೃಚ್ಛಿಕ ನಿಯಂತ್ರಿತ ಪ್ರಯೋಗ [randomised controlled trial], ಅವುಗಳಷ್ಟೇ ಅಡುಗೆ ಮಾಡೋದರಲ್ಲೂ ತುಂಬಾ ಅಕ್ಕರೆ. ಅವರೇ ಹೇಳಿಕೊಂಡಿರೋ ಹಾಗೆ, "ನಾನು ಪ್ರತಿದಿನ ಅಡುಗೆ ಮಾಡ್ತೀನಿ. ನಾವು ಹೆಚ್ಚಾಗಿ ಹೊರಗೆಲ್ಲೋ ಹೋಗಿ ಊಟ ಮಾಡಲ್ಲ, ಮನೆಯಲ್ಲೇ ತಿಂತೀವಿ. ಆಫೀಸ್‌ನಿಂದ ಸುಸ್ತಾಗಿ ಬಂದ ಮೇಲೆ ಅಡುಗೆ ಮಾಡೋದೇ ನನಗೆ ದೊಡ್ಡ ರಿಲ್ಯಾಕ್ಸೇಷನ್."

ಕೋವಿಡ್ ಸಮಯದಲ್ಲಿ ಅಡುಗೆ ಮಾಡೋಕೆ, ಬೇರೆ ಬೇರೆ ರೆಸಿಪಿಗಳನ್ನು ಪ್ರಯತ್ನಿಸೋದಕ್ಕೂ ಸಾಧ್ಯ ಆಯ್ತು. ಅದು ಹಾಗೆ ಬೆಳೆಯುತ್ತಾ ಕೊನೆಗೆ ಆ ಬಗ್ಗೆ ಪುಸ್ತಕ ಬರೆಯೋ ಆಲೋಚನೆಯೂ ಬಂತು. ಒಬ್ಬ ಅರ್ಥಶಾಸ್ತ್ರಜ್ಞ ಅಡುಗೆ ಬಗ್ಗೆ ಪುಸ್ತಕ ಬರೆದರೆ ಸಹಜವಾಗಿಯೇ ಬೇರೆ ಆಯಾಮ ತೆಗೆದುಕೊಳ್ಳುತ್ತದೆ. ಊಟದ ಬಗ್ಗೆ ಯೋಚಿಸುವಾಗಲೂ ಸಹಜವಾಗಿಯೇ ಒಬ್ಬ ಅರ್ಥಶಾಸ್ತ್ರಜ್ಞನ ರೀತಿಯಲ್ಲೇ ಯೋಚಿಸುತ್ತಾರೆ. ಅಂದ್ರೆ, ಕಡಿಮೆ ಸಮಯದಲ್ಲಿ, ಶ್ರಮವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಅಂದುಕೊಂಡ ಗುರಿಯನ್ನು (ಯಾರನ್ನಾದರೂ ಮೆಚ್ಚಿಸೋದು, ಹೊಟ್ಟೆ ತುಂಬಿಸೋದು, ಇತ್ಯಾದಿ) ಹೇಗೆ ತಲುಪೋದು ಅನ್ನೋ ಲೆಕ್ಕಾಚಾರ ಕೆಲಸ ಮಾಡುತ್ತಿರುತ್ತದೆ.


ಒಬ್ಬ ಚೆಫ್‌ಗೆ ಆಹಾರವನ್ನು ಅಸ್ವಾದಿಸುವಾಗ ಅದರಲ್ಲಿ ಸಿಗುವ ಸುಖ ಹೆಚ್ಚು ಮುಖ್ಯ. ಆ ರುಚಿ, ಹದ ಅವೆಲ್ಲಾ ಅವನ ಆದ್ಯತೆಗಳಾಗಿರುತ್ತವೆ. ಆದರೆ ಅಭಿಜಿತ್ ರೀತಿಯ ಅರ್ಥಶಾಸ್ತ್ರಜ್ಞರು ಆ ಬಗ್ಗೆ ಯೋಚಿಸುವಾಗ ರುಚಿಯ ಜೊತೆಗೆ ಬೇರೆ ಲೆಕ್ಕಾಚಾರಗಳೂ ಕೆಲಸ ಮಾಡುತ್ತಿರುತ್ತವೆ. ಆಹಾರವು ಪೌಷ್ಟಿಕವಾಗಿರಬೇಕು, ಪರಿಸರಕ್ಕೆ ಪೂರಕವಾಗಿರಬೇಕು ಮತ್ತು ದೇಹಕ್ಕೆ ಶಕ್ತಿ ನೀಡುವಂತಿರಬೇಕು, ಬಜೆಟ್ಟಿಗೆ ಹೊಂದಿಕೆಯಾಗಬೇಕು, ಆಹಾರ ಪೋಲಾಗಬಾರದು ಅಥವಾ ಆರೋಗ್ಯಕ್ಕೆ ತೊಂದರೆಯಾಗಬಾರದು ಇತ್ಯಾದಿ ಕಾಳಜಿಗಳು ಇರುತ್ತವೆ.

ಸಹಜವಾಗಿಯೇ ಅಭಿಜಿತ್ ಅವರು ಅಡುಗೆ ಬಗ್ಗೆ ಬರೆದರೆ ಅದು ಕೇವಲ ರೆಸಿಪಿಯ ಸಂಗ್ರಹವಾಗುವುದಕ್ಕೆ ಸಾಧ್ಯವಿಲ್ಲ. ಅವರು ಅಡುಗೆ ಬಗ್ಗೆ ಮಾತನಾಡುವಾಗ ಅದರಲ್ಲಿ ರಾಜಕೀಯ, ಇತಿಹಾಸ, ಸಂಸ್ಕೃತಿ, ಆರೋಗ್ಯ, ಸಮಾಜ ವಿಜ್ಞಾನ, ಮತ್ತು ಜನರ ಮನಸ್ಥಿತಿ ಎಲ್ಲಾ ಸೇರಿಕೊಳ್ಳುತ್ತದೆ. ಅವೆಲ್ಲವೂ ಅವರ ಅಡುಗೆ ಮನೆಯ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಅವೆಲ್ಲವನ್ನು ಅವರು ಅಡುಗೆಯ ಮೂಲಕ ಚರ್ಚಿಸುತ್ತಾರೆ.

ಅಭಿಜಿತ್ ಅವರ ಬರಹಗಳುದ್ದಕ್ಕೂ ಅವರ ಹಾಸ್ಯ ಪ್ರಜ್ಞೆಯನ್ನು ಕಾಣಬಹುದು. ಅವರ ಬರವಣಿಗೆಯ ಶೈಲಿ ಎಷ್ಟು ಕ್ಯಾಶುವಲ್ ಆಗಿದೆ ಅಂದ್ರೆ, ಓದುವಾಗ ಅವರ ನಗುವನ್ನೂ ಕಾಣಬಹುದು. ಅವರ ಪ್ರತಿ ಬರಹವೂ ನೀವು ಮಾಡುವ ಅಡುಗೆ ಅಥವಾ ಕುಡಿಯುವ ಪಾನೀಯಕ್ಕೆ ಒಂದು ಹೊಸ ಅರ್ಥವನ್ನು ನೀಡುತ್ತದೆ. ಅವರು ಅಡುಗೆಯನ್ನು ಕುರಿತು ಎರಡು ಪುಸ್ತಕಗಳನ್ನು ಬರೆದಿದ್ದಾರೆ. ಕುಕಿಂಗ್ ಟು ಸೇವ್ ಯುವರ್ ಲೈಫ್ ಮತ್ತು ಚೌಂಕ್. ಚೌಂಕ್ ಟೈಮ್ಸ್ ಆಫ್ ಇಂಡಿಯಾದಲ್ಲಿ ಭಾನುವಾರಗಳು ಅವರು ಬರೆಯುತ್ತಿರುವ ಅಂಕಣದ ಸಂಗ್ರಹ.

ಭಾನುವಾರ ಬೆಳಗ್ಗೆ ನಿಧಾನವಾಗಿ ಕಾಫಿ ಹೀರುತ್ತಾ, ಕಚೋರಿ ತಿನ್ನುತ್ತಾ ಅಥವಾ ಬಿಸಿ ಬಿಸಿ ಇಡ್ಲಿ ಮತ್ತು ಚಟ್ನಿ ಪುಡಿ ಸವಿಯುತ್ತಾ ಓದೋರಿಗೆ ಇಷ್ಟ ಆಗೋ ರೀತಿಯಲ್ಲಿ ಬರೆದ ಲೇಖನಗಳು ಅವು. ಶಾಯೆನ್ ಬರೆಯುತ್ತಿರುವ ಬಣ್ಣ ಬಣ್ಣದ ಚಿತ್ರಗಳು ಈ ಬರಹಗಳಿಗೆ ರಂಗು ತಂದಿವೆ. ಈ ಬರಹಗಳನ್ನು ಓದುತ್ತಾ ಅಡುಗೆ ಮಾಡಬೇಕು ಅನ್ನಿಬೇಕು. ಅಡುಗೆ ಮಾಡುತ್ತಾ ಇನ್ನೂ ಹೆಚ್ಚೆಚ್ಚು ಓದಬೇಕು ಅನ್ನಿಸಬೇಕು ಅನ್ನುವುದು ಅವರ ಆಸೆ.

ಅವರ ಬರಹಗಳು ಅರ್ಥಶಾಸ್ತ್ರದ ಬರಹಗಳಲ್ಲಿ ತೀರಾ ವಿಭಿನ್ನ ಬಗೆಯ ರಚನೆಗಳು. ಕೆಲವನ್ನು ಅನುವಾದಿಸಿ ಪ್ರಟಿಸುವುದಕ್ಕೆ ಅನುಮತಿ ನೀಡಿರುವ ಅಭಿಜಿತ್ ಬ್ಯಾನರ್ಜಿ ಅವರಿಗೂ ಟೈಮ್ಸ್ ಆಫ್ ಇಂಡಿಯಾ ದಿನಪತ್ರಿಕೆಗೂ ವಂದನೆಗಳು.



2000ದ ಆರಂಭದಲ್ಲಿ ನನ್ನ ಗೆಳೆಯ ಹಾಗೂ ಡ್ಯೂಕ್ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿರುವ ಡಂಕನ್ ಥಾಮಸ್ ಅವರ ತಂಡ ಕೇಂದ್ರ ಜಾವಾದಲ್ಲಿ ಒಂದು ಬೃಹತ್ ಅಧ್ಯಯನವನ್ನೇ ನಡಿಸಿತ್ತು. ಅದರಲ್ಲಿ 17,000 ಕಾರ್ಮಿಕರು ಪಾಲ್ಗೊಂಡಿದ್ದರು. ದಿನಗೂಲಿ ಕಾರ್ಮಿಕರಿಗೆ ಕಬ್ಬಿಣದ ಅಂಶವಿರುವ ಪೂರಕ ಆಹಾರ [Iron supplements] ನೀಡಿದಾಗ ಅವರಲ್ಲಾದ ಬದಲಾವಣೆಯನ್ನು ಅದು ಅಧ್ಯಯನ ಮಾಡಿತು.

ಅಧ್ಯಯನದಲ್ಲಿ ಪಾಲ್ಗೊಂಡ ಜನರಿಗೆ ವಿಶೇಷವಾಗಿ ರಕ್ತಹೀನತೆಯ ಸಮಸ್ಯೆಯೇನೂ ಇರಲಿಲ್ಲ. ಶೇಕಡಾ 8ಕ್ಕೂ ಕಡಿಮೆ ಗಂಡಸರಲ್ಲಿ ಸಾಧಾರಣ ಮಟ್ಟದ ರಕ್ತಹೀನತೆ ಇತ್ತು. ಅದು ಪ್ರಸ್ತುತ ಭಾರತದ ರಕ್ತಹೀನತೆಯ ಪ್ರಮಾಣಕ್ಕೆ ಹೋಲಿಸಿದರೆ ತುಂಬಾ ಕಡಿಮೆಯೆಂದೇ ಹೇಳಬಹುದು. ಆದರೂ, ಅಲ್ಪಪ್ರಮಾಣದ ರಕ್ತಹೀನತೆ ಇದ್ದ ಇವರಿಗೆ ಹೆಚ್ಚಿನ ಕಬ್ಬಿಣಂಶಗಳನ್ನು ನೀಡಿದಾಗ ಅವರ ಉತ್ಪಾದಕತೆ ಹೆಚ್ಚಿತು.

ಗಂಡಸರು ನಿದ್ದೆ ಮಾಡುವುದು ಕಡಿಮೆಯಾಯಿತು. ದುಡಿಮೆಯ ಅವಧಿ ಹೆಚ್ಚಿತು. ಅವರ ಗಳಿಕೆಯು ಶೇಕಡಾ 15ರಷ್ಟು ಹೆಚ್ಚಾಯಿತು. ನಮ್ಮಲ್ಲಿರುವ ರಕ್ತಹೀನತೆಯ ವ್ಯಾಪಕತೆಯನ್ನು ಗಣನೆಗೆ ತೆಗೆದುಕೊಂಡು ಅದನ್ನು ಇಡೀ ಭಾರತಕ್ಕೆ ಅನ್ವಯಿಸಿದರೆ ಅದು ದೊಡ್ಡ ಮೊತ್ತದ ಹಣ. ದುರದೃಷ್ಟವಶಾತ್, ಕೊನೇಪಕ್ಷ ಭಾರತದಲ್ಲಿ, ರಕ್ತ ಹೀನತೆಯ ಸಮಸ್ಯೆಯು ಅದರಷ್ಟಕ್ಕೆ ಪರಿಹಾರವಾಗುತ್ತಿಲ್ಲ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ, ಭಾರತದ ಹೆಚ್ಚಿನ ಸಮುದಾಯಗಳಲ್ಲಿ 2015–16 ಮತ್ತು 2019–21ರ ಅವಧಿಯಲ್ಲಿ ರಕ್ತಹೀನತೆಯ ದರಗಳು ಹೆಚ್ಚಾಗಿವೆ. ಆಗ ಕೋವಿಡ್ ಪಿಡುಗು ಇತ್ತು ಅನ್ನುವುದು ನಿಜ. ಆದರೂ ರಕ್ತಹೀನತೆಯ ಏರಿಕೆಯ ಪ್ರಮಾಣ ಆತಂಕಕಾರಿ ಮಟ್ಟದಲ್ಲಿತ್ತು. ಹದಿಹರೆಯದ ಹುಡುಗಿಯರಲ್ಲಿ ರಕ್ತಹೀನತೆಯ ರಾಷ್ಟ್ರೀಯ ಸರಾಸರಿಯು ಶೇಕಡಾ 54ರಿಂದ 59ಕ್ಕೆ ಅಂದರೆ ಶೇಕಡ 5ರಷ್ಟು ಹೆಚ್ಚಾಗಿತ್ತು. ಆದರೆ ವರದಿಯ ಪ್ರಕಾರ ಅಸ್ಸಾಂನಲ್ಲಿ ರಕ್ತಹೀನತೆಯ ಪ್ರಮಾಣ ಶೇಕಡ 24ರಷ್ಟು ಹೆಚ್ಚಾಗಿತ್ತು.

ರಕ್ತಹೀನತೆ ಹೆಚ್ಚುವುದಕ್ಕೆ ಹಲವು ಕಾರಣಗಳಿವೆ. ಹೊಟ್ಟೆಹುಳುಗಳಿದ್ದರೂ ಕಬ್ಬಿಣದ ಅಂಶ ಹೀರಿಕೊಳ್ಳುವ ಪ್ರಮಾಣ ಕಡಿಮೆಯಾಗುತ್ತದೆ. ಮಲೇರಿಯಾ

ಕೂಡ ಇದೇ ಕೆಲಸ ಮಾಡುತ್ತದೆ. ಇನ್ನು ಬಡವರಿಗೆ ತಿನ್ನುವುದಕ್ಕೆ ಸಾಕಷ್ಟು ಇರುವುದಿಲ್ಲ. ಹಾಗಾಗಿ ಅವರಲ್ಲಿ ರಕ್ತಹೀನತೆಯನ್ನು ಹೆಚ್ಚಿರುತ್ತದೆ.

ಆದರೆ ಆಶ್ಚರ್ಯದ ಸಂಗತಿಯೆಂದರೆ, ಶ್ರೀಮಂತ –ಬಡವರ ನಡುವೆ ರಕ್ತ ಹೀನತೆಯ ಪ್ರಮಾಣದಲ್ಲಿ ಅಂತರ ತುಂಬಾ ಕಡಿಮೆ ಇದೆ: ತೀರಾ ಬಡವರಿಗೆ ಹೋಲಿಸಿದರೆ ಶ್ರೀಮಂತರಲ್ಲಿ ರಕ್ತಹೀನತೆ ಕೇವಲ ಶೇಕಡ 20ರಷ್ಟು ಕಡಿಮೆ ಇದೆ (ತುಂಬಾ ಶ್ರೀಮಂತರು ನಮ್ಮ ಸಮೀಕ್ಷೆಗೆ ಸಿಗುವುದೇ ಇಲ್ಲ.) ಶ್ರೀಮಂತ ರಾಜ್ಯಗಳಾದ ಪಂಜಾಬ್, ಹರಿಯಾಣ ಮತ್ತು ಗುಜರಾತ್‌ನಲ್ಲೇ ರಕ್ತಹೀನತೆ ಹೆಚ್ಚಿಗೆ ಇದೆ!

ಇವೆಲ್ಲವನ್ನೂ ಗಮನಿಸಿದರೆ, ರಕ್ತ ಹೀನತೆಗೆ ನಮ್ಮ ಆಹಾರಕ್ರಮವೇ ಸ್ಪಷ್ಟವಾದ ಕಾರಣವೆಂದು ನನಗೆ ಅನ್ನಿಸುತ್ತದೆ. ಶ್ರೀಮಂತ ಭಾರತೀಯರು ಹೆಚ್ಚಾಗಿ ಸಸ್ಯಾಹಾರಿಗಳಾಗಿರುತ್ತಾರೆ. ಹಾಗಾಗಿಯೇ ಆದಾಯ ಹೆಚ್ಚಾದ ಹಾಗೆ ರಕ್ತಹೀನತೆ ಅದೇ ಪ್ರಮಾಣದಲ್ಲಿ ಕಡಿಮೆಯಾಗುತ್ತಿಲ್ಲ. ಜನರಲ್ಲಿ ಬಡತನ ಕಮ್ಮಿಯಾಗುತ್ತಿದ್ದಂತೆ ಅವರೂ ಶ್ರೀಮಂತರ ಆಹಾರ ಪದ್ಧತಿಯನ್ನೇ ಅನುಕರಿಸಲು ಪ್ರಾರಂಭಿಸುತ್ತಾರೆ. ಹೆಚ್ಚೆಚ್ಚು ಪನೀರ್ ಸೇವಿಸತೊಡಗುತ್ತಾರೆ. ಮಾಂಸ ಅಥವಾ ಸೊಪ್ಪುಗಳನ್ನು ಬಳಸುವುದನ್ನು ಕಡಿಮೆ ಮಾಡುತ್ತಾರೆ. ಇದು ಕೂಡ ರಕ್ತಹೀನತೆ ಹೆಚ್ಚಾಗಲು ಭಾಗಶಃ ಕಾರಣ.

ಬಾಂಗ್ಲಾ ದೇಶದವರು ಮತ್ತು ಪಾಕಿಸ್ತಾನದವರು ನಮಗಿಂತ ಹೆಚ್ಚು ಕೆಂಪುಮಾಂಸವನ್ನು [red meat] ಸೇವಿಸುತ್ತಾರೆ. ದೇಹವು ಸುಲಭವಾಗಿ ಹೀರಿಕೊಳ್ಳುವ ಕಬ್ಬಿಣದ ಅಂಶ ಈ ಕೆಂಪು ಮಾಂಸದಲ್ಲಿ ಸಿಗುತ್ತದೆ (ವಿಶೇಷವಾಗಿ ಯಕೃತ್ತು ಕಬ್ಬಿಣದ ಉತ್ತಮ ಆಕರವಾಗಿದೆ. ನನ್ನ ತಾಯಿ ಇದನ್ನು ಹೇಗಾದರೂ ಮಾಡಿ ನನ್ನ ಆಹಾರದಲ್ಲಿ ಸೇರಿಸಲು ಪ್ರಯತ್ನಿಸುತ್ತಿದ್ದರು. ಅವಾಗೆಲ್ಲಾ ನಾನದನ್ನು ವಿರೋಧಿಸುತ್ತಿದ್ದೆ). ಈ ದೇಶಗಳು ನಮಗಿಂತ ಹೆಚ್ಚು ಉತ್ತಮ ಸ್ಥಿತಿಯಲ್ಲಿರಲು ಇದು ಕಾರಣವಿರಬಹುದು.

ಹಾಗೆಂದ ಮಾತ್ರಕ್ಕೆ ಸಸ್ಯಾಹಾರಿಗಳು ಕೆಂಪುಮಾಂಸ ತಿನ್ನಲು ಶುರುಮಾಡಿ ಎಂದು ನಾನು ಸಲಹೆ ನೀಡುತ್ತಿಲ್ಲ: ಹಾಗೇನಾದರು ನಾನು ಹೇಳಿದರೆ ಈ ಅಂಕಣಕ್ಕೆ ಚಿತ್ರಗಳನ್ನು ಬಿಡಿಸಿ ಜೀವ ತುಂಬುತ್ತಿರುವ ಕಲಾವಿದೆ ಶಾಯೆನ್ [Cheyenne] ಮೊದಲು ನನ್ನನ್ನು ಬಿಟ್ಟು ಹೊರನಡೆಯಬಹುದು.

ಏಕೆಂದರೆ ಆಕೆ ಸಸ್ಯಾಹಾರಿ. ಆದರೆ ಸಸ್ಯಾಹಾರಿಗಳಿಗೆ ಸಾಕಷ್ಟು ಪ್ರಮಾಣದ ಕಬ್ಬಿಣಾಂಶ ಸಿಗುವುದು ಕಷ್ಟ. ಸಸ್ಯಗಳಲ್ಲಿ ಕಬ್ಬಿಣದ ಅಂಶ ಹೇರಳವಾಗಿರುತ್ತದೆ. ಆದರೆ ಆ ಕಬ್ಬಿಣವನ್ನು ಸುಲಭವಾಗಿ ಹೀರಿಕೊಳ್ಳುವುದಕ್ಕೆ ನಮ್ಮ ದೇಹಕ್ಕೆ ಸಾಧ್ಯವಾಗುವುದಿಲ್ಲ.

ಕೆಂಪು ಮಾಂಸವನ್ನು ಸೇವಿಸದೆಯೇ ಸಾಕಷ್ಟು ಪ್ರಮಾಣದಲ್ಲಿ ಕಬ್ಬಿಣದ ಅಂಶವನ್ನು ಪಡೆಯಬೇಕೆಂದರೆ, ಉತ್ತರ ಭಾರತದ ಸಸ್ಯಾಹಾರಿಗಳು ಹೆಚ್ಚಾಗಿ ಸೇವಿಸುತ್ತಿರುವ ಆಲೂ–ಪನೀರ್–ಮೊಸರು–ಬೇಳೆ–ಅನ್ನ–ರೊಟ್ಟಿಯ ಆಹಾರ ಪದ್ಧತಿಯನ್ನು ಬಿಡಬೇಕು.

ಭಾರತವನ್ನು ಸಸ್ಯಾಹಾರಿಗಳ ಸ್ವರ್ಗ ಅಂತಾರೆ. ಆದರೆ ನನಗೆ ಬೇಸರ ತರುವ ಸಂಗತಿಯೆಂದರೆ ಅಲ್ಲಿನ ಬಹುತೇಕ ಹೋಟೆಲ್‌ಗಳಲ್ಲಿ ಸಿಗುವುದು ಕೇವಲ ಒಂದೆರಡು ತರಕಾರಿಗಳಿಂದ ಮಾಡಿದ ಖಾದ್ಯಗಳು ಮಾತ್ರ. ಬದನೆಕಾಯಿ ಭರ್ತ ಅಥವಾ ನವರತ್ನ ಕುರ್ಮಾ. ನಾನು ಬದನೆಕಾಯಲ್ಲಿ ಏನು ಮಾಡಿದರೂ ತಿನ್ನುತ್ತೇನೆ. ಆದರೆ ಅದರಲ್ಲಿ ನಾಸುನಿನ್ ಅನ್ನುವ ಅಂಶವಿದೆ. ಅದು ನಮ್ಮ ದೇಹ ಕಬ್ಬಿಣದ ಅಂಶವನ್ನು ಹೀರಿಕೊಳ್ಳುವುದಕ್ಕೆ ಅಡ್ಡಿಮಾಡುತ್ತದೆ.

ದುರದೃಷ್ಟವೆಂದರೆ ಆಹಾರಕ್ರಮ ಬದಲಾಯಿಸುವುದು ಅಷ್ಟು ಸುಲಭವಲ್ಲ. ಮೈಕಟ್ಟು ಕಾಪಾಡಿಕೊಳ್ಳಲು ಪ್ರಯತ್ನಿಸಿರುವ ನಮಗೆಲ್ಲಾ ಅದು ಚೆನ್ನಾಗಿ ಗೊತ್ತು. ಸಿರಿಧಾನ್ಯದ ಪಾಯಸ ಚೆನ್ನಾಗಿರುತ್ತದೆ, ಅದು ಆರೋಗ್ಯಕ್ಕೂ ಖಂಡಿತಾ ಒಳ್ಳೆಯದು. ಆದರೆ ನಮ್ಮ ಬಾಯಿಗೆ ಬಂಗಾಳದ ಸೊಗಸಾದ ಗೋಬಿಂದೋಭೋಗ್ ಅಕ್ಕಿ ಪಾಯಸವೇ ಬೇಕು. ಶುಗರ್–ಫ್ರೀ ಐಸ್‌ಕ್ರೀಮ್ ಅನ್ನೋದು ಸೊಗಸಾದ ಕಲ್ಪನೆ. ಆದರೆ ಅದನ್ನು ಫ್ರೀಜರ್‌ನಲ್ಲೇ ಬಿಡೋಕೆ ಖುಷಿ ಪಡ್ತೀನಿ.

ಇತ್ತೀಚೆಗೆ ರಕ್ತಹೀನತೆ ಮುಕ್ತ ಭಾರತ ಅನ್ನುವ ಯೋಜನೆಯನ್ನು ಸರ್ಕಾರ ಪ್ರಾರಂಭಿಸಿದೆ. ಮಾತ್ರೆ ಮತ್ತು ಸಿರಪ್‌ಗಳ ಮೂಲಕ ಕಬ್ಬಿಣದ ಅಂಶವನ್ನು ಕೊಡುವ ಪರ್ಯಾಯ ಪ್ರಯತ್ನವನ್ನು ಕೈಗೆತ್ತಿಕೊಂಡಿದೆ. ಶಾಲೆಯಲ್ಲಿ ಬಿಸಿಯೂಟ ತಿನ್ನುವ ಮಕ್ಕಳಿಗೆ ಅಥವಾ ಅಂಗನವಾಡಿಗೆ ಹೋಗೋ ಪುಟಾಣಿಗಳಿಗೆ (ಆದರೆ ಎಲ್ಲರೂ ಅಂಗನವಾಡಿಗೆ ಹೋಗುವುದಿಲ್ಲ) ಈ ಕ್ರಮ ಸೂಕ್ತವಾಗುತ್ತದೆ. ಆದರೆ ಹದಿಹರೆಯದವರು ಮತ್ತು ವಯಸ್ಕರು



ಶಾಯೆನ್ ಒಲೀವ್ಹಿಯೆ

ಅಭಿಜಿತ್ ಅವರ ಲೇಖನಗಳಲ್ಲಿ ಹಾಗೂ ಅಡುಗೆ ಪುಸ್ತಕಗಳಲ್ಲಿ ಬಳಸಿರುವ ವಿನ್ಯಾಸವೇ ವಿಭಿನ್ನ. ಸಾಮಾನ್ಯವಾಗಿ ಅಡುಗೆಯ ಯಥಾವತ್ ಫೋಟೋಗಳನ್ನು ಹಾಕೋದು ರೂಢಿ. ಅಭಿಜಿತ್ ಅವರಿಗೆ ಪ್ರತಿಯೊಂದು ರೆಸಿಪಿಯೂ ಒಂದು ಐಡಿಯಾ ಅಷ್ಟೆ. ಅದೊಂದು ಎಂಟ್ರಿ ಪಾಯಿಂಟ್. ಅದೊಂದು ಹೊಸ ಅಲೋಚನೆಗೆ ದಾರಿ. ಹಾಗಾಗಿ ಅದರ ಯಥಾವತ್ ಫೋಟೊ ಹಾಕೋ ಬದಲು ಆ ರೆಸಿಪಿಯ ಹಿಂದಿರೋ ಆಲೋಚನೆಯನ್ನು ತೋರಿಸುವ ಚಿತ್ರಗಳನ್ನು ಬಳಸೋದು ಕೂಡ ಒಳ್ಳೆಯ ಆಲೋಚನೆ. ಶಾಯೆನ್ ಒಲೀವ್ಹಿಯೆ ಈ ಕೆಲಸವನ್ನು ಸೊಗಸಾಗಿ ಮಾಡಿದ್ದಾರೆ. ಅವರ ಚಿತ್ರದಲ್ಲಿ ಅಡುಗೆ ಮನೆಯಲ್ಲಿ ಕೆಲಸ ಮಾಡುವಾಗ ಇರೋ ಗದ್ದಲ–ಗೊಂದಲ, ಸಂಭ್ರಮ ಎಲ್ಲಾ ಇದೆ. ಇವೆಲ್ಲದರ ನಡುವೆ ಅಡುಗೆ ಮಾಡೋರು ತಮ್ಮದೇ ಆದ ಒಂದು ಸುಂದರ ಲೋಕವನ್ನು ಸೃಷ್ಟಿಸಿಕೊಳ್ಳಬೇಕು ಅನ್ನೋ ಮೆಸೇಜನ್ನು ಕೂಡ ಈ ಚಿತ್ರ ರವಾನಿಸುತ್ತದೆ. ಜೊತೆಗೆ ಸುಂದರ ಫೋಟೋಗಳನ್ನು ಹಾಕಿಬಿಟ್ರೆ, ಅಡುಗೆ ಹೊಸದಾಗಿ ಮಾಡರೋರಿಗೆ ನಮಗೆ ಈ ತರ ಮಾಡೋಕೆ ಆಗಲ್ಲಪ್ಪ" ಅನ್ನೋ ಭಯ ಅಥವಾ ಮುಜುಗರ ಬರಬಹುದು. ಶಾಯೆನ್ ಒಲೀವ್ಹಿಯೆ ಬಿಡಿಸಿರೋ ಬಣ್ಣ ಬಣ್ಣದ ಚಿತ್ರಗಳು ಆ ಸಮಸ್ಯೆಯನ್ನೇ ದೂರ ಮಾಡಿದೆ. ಈ ಚಿತ್ರಗಳನ್ನ ನೋಡಿ ನಾವು ನಮ್ಮ ಅಡುಗೆಯನ್ನ ಅಳೆಯುವ ಅಗತ್ಯವಿಲ್ಲ. ಇವುಗಳನ್ನ ಒಂದು ಸುಂದರವಾದ ಕಲೆಯ ತರ ನೋಡಿ ಎಂಜಾಯ್ ಮಾಡಬಹುದು. ಅಡುಗೆ ಮಾಡೋರಿಗೆ ಅಡುಗೆ"ಫೋಟೋದ ಹಾಗೆಯೇ ಬರಬೇಕು"ಅನ್ನೋ ಒತ್ತಡ ಇರೋದಿಲ್ಲ. ಒಟ್ನಲ್ಲಿ ಶಾಯೆನ್ ಒಲೀವ್ಹಿಯೆ ಅವರ ಚಿತ್ರಗಳು ಒಟ್ಟಾರೆ ಲೇಖನದ, ಅಭಿಜಿತ್ ಬರಹಗಳ ಮೆರುಗನ್ನು ಹೆಚ್ಚಿಸಿವೆ.

ಇದನ್ನು ದಿನಾ ಹೊತ್ತಿಗೆ ಸರಿಯಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದು ಕೇವಲ ಒಂದು ಸಲ ಅಥವಾ ಒಂದು ತಿಂಗಳು ತೆಗೆದುಕೊಂಡರೆ ಸಾಲುವುದಿಲ್ಲ. ಬಹುಶಃ ಜೀವನಪರ್ಯಂತ ತೆಗೆದುಕೊಳ್ಳಬೇಕಾಗಬಹುದು. ಅದು ಅಷ್ಟು ಸುಲಭವಲ್ಲ. ಜೊತೆಗೆ ಈ ಕಬ್ಬಿಣದ ಸೇವನೆಯಿಂದ ಮಲಬದ್ಧತೆಯಾಗುವ ಸಾಧ್ಯತೆಯಿದೆ. ಹಾಗಾಗಿ ಜನರಿಗೆ ಇವು ನಿಜವಾಗಿ ಅವಶ್ಯಕವಾಗಿದ್ದರೂ ತೆಗೆದುಕೊಳ್ಳುವುದಕ್ಕೆ ವಿರೋಧಿಸುತ್ತಾರೆ.

ಇದೇ ಕಾರಣಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆ ಮತ್ತು ಹಲವು ತಜ್ಞರು ಅಕ್ಕಿ, ಗೋಧಿ ಅಥವಾ ಉಪ್ಪಿನ ಜೊತೆಗೆ ಕಬ್ಬಿಣದ ಅಂಶ (ಮತ್ತು ಕಬ್ಬಿಣದ ಹೀರಿಕೊಳ್ಳುವುದಕ್ಕೆ ನೆರವಾಗುವ ಪೋಷಕಾಂಶ)ವನ್ನು ಸೇರಿಸಬೇಕೆಂದು ಸೂಚಿಸುತ್ತಿದ್ದಾರೆ.

ಭಾರತ ಸರ್ಕಾರ ಕೂಡ ಈ ಆಲೋಚನೆಯನ್ನು ಕೆಲವು ವರ್ಷಗಳಿಂದ ಒಪ್ಪಿಕೊಂಡಿದೆ. ಆದರೆ ಇಂತಹ ಪೌಷ್ಟಿಕಾಂಶ ಬೆರೆಸಿದ ಆಹಾರಗಳನ್ನು ಅದರ ಗುಣಮಟ್ಟ ಹಾಳಾಗದಂತೆ ದೊಡ್ಡ ಪ್ರಮಾಣದಲ್ಲಿ ಜನರಿಗೆ ತಲುಪಿಸುವುದಕ್ಕೆ ಸಾಧ್ಯ ಅನ್ನುವುದಕ್ಕೆ ನಮ್ಮ ಬಳಿ ಯಾವುದೇ ಪುರಾವೆಗಳಿಲ್ಲ. ಮುಖ್ಯವಾಗಿ ಭಾರತದ ಹೆಚ್ಚಿನ ಭಾಗಗಳಲ್ಲಿ ಇರುವ ಬಿಸಿಲು ಮತ್ತು ಸೆಕೆಗೆ ಅವುಗಳ ಶಕ್ತಿ ಹಾಗೆಯೇ ಉಳಿಯುತ್ತದೆಯೇ ಅನ್ನುವ ಅನುಮಾನವೂ ಇದೆ. ಒಂದು ವೇಳೆ ತಲುಪಿಸುವುದಕ್ಕೆ ಸಾಧ್ಯವಾದರೂ ಜನರು ಅದನ್ನು ಬಯಸುತ್ತಾರೆಯೇ ಅನ್ನುವುದು ದೊಡ್ಡ ಪ್ರಶ್ನೆ.

2010ರ ಆರಂಭದಲ್ಲಿ, ಸರ್ಕಾರಿ ಶಾಲೆಗಳ ಬಿಸಿಯೂಟದಲ್ಲಿ ಡಬಲ್ ಫೋರ್ಟಿಫೈಡ್ ಸಾಲ್ಟ್ ಅನ್ನು (ಅಂದ್ರೆ ಕಬ್ಬಿಣ ಮತ್ತು ಅಯೋಡಿನ್ ಎರಡೂ ಇರೋ ಉಪ್ಪು) ಬಳಸಲೇಬೇಕೆಂದು ಸರ್ಕಾರ ಆದೇಶಿಸಿತ್ತು. ಇದು ರಕ್ತಹೀನತೆ ಕಡಿಮೆ ಮಾಡುವುದಕ್ಕೆ ಎಷ್ಟು ಸಹಾಯವಾಗುತ್ತದೆ ಅನ್ನುವುದನ್ನು ತಿಳಿದುಕೊಳ್ಳುವುದಕ್ಕೆ ನಾವು ಬಿಹಾರದಲ್ಲಿ ಒಂದು ಅಧ್ಯಯನ ಮಾಡಿದೆವು. ಕೆಲವು ಹಳ್ಳಿಗಳನ್ನು ಯಾದೃಚ್ಛಿಕವಾಗಿ ಆರಿಸಿಕೊಂಡು, ಅಲ್ಲಿನ ಜನರಿಗೆ ಇದನ್ನು ಕೊಳ್ಳಲು ಪ್ರೋತ್ಸಾಹ ನೀಡಿದೆವು. ಅದಕ್ಕಾಗಿ ಈ ಉಪ್ಪನ್ನು ಸಬ್ಸಿಡಿ ದರದಲ್ಲಿ ಸುಲಭವಾಗಿ ಸಿಗುವಂತೆ ವ್ಯವಸ್ಥೆ ಮಾಡಿದೆವು. ಹದಿಹರೆಯದವರಲ್ಲಿ ಇದರಿಂದ ರಕ್ತಹೀನತೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದ್ದು ನಮ್ಮ ಅಧ್ಯಯನದಲ್ಲಿ ತಿಳಿಯಿತು. ಆದರೆ ಜನರಿಗೆ ಈ ಉಪ್ಪು ಸ್ವಲ್ಪವೂ ಇಷ್ಟವಾಗಲಿಲ್ಲ. ಇದು ಪರಿಣಾಮ ಬೀರುವ ಮೊದಲೇ ಅದರ ಬಳಕೆಯನ್ನು ಅವರು ನಿಲ್ಲಿಸಿಬಿಟ್ಟರು.

ಆ ಉಪ್ಪಿನ ರುಚಿ ಕೆಟ್ಟದಾಗಿದೆ ಎಂದು ಅವರು ದೂರಿದರು (ಆದ್ರೆ ನಮಗೇನು ಅಂತಹ ವ್ಯತ್ಯಾಸ ಕಾಣಲಿಲ್ಲ), ಜೊತೆಗೆ ಅಡುಗೆಯ ಬಣ್ಣ ಕಪ್ಪಾಗುತ್ತದೆ ಅಂದರು (ಅದು ನಿಜ. ಈ ಉಪ್ಪು ಬಳಸಿದರೆ ಕಪ್ಪಾಗುತ್ತಿತ್ತು). ಆದರೆ ಅದೆಲ್ಲದಕ್ಕಿಂತ ಹೆಚ್ಚಾಗಿ ಅವರಿಗೆ ಆ ಉಪ್ಪಿನ ಪ್ರಯೋಜನದ ಬಗ್ಗೆ ನಂಬಿಕೆ ಇರಲಿಲ್ಲ ಎಂದು ನಮಗನ್ನಿಸಿತು. ಜನ ಈ ಉಪ್ಪನ್ನು ಕೆಲವು ಹಳ್ಳಿಗಳಲ್ಲಿ ಇನ್ನೂ ಬಳಸುತ್ತಾ ಇದ್ದಾರೆ. ಅಲ್ಲಿ ಅವರ ಮನವೊಲಿಸೋದಕ್ಕೆ ನನ್ನ ಬಾಲ್ಯದ ಗೆಳೆಯ ಪ್ರದೀಪ್ ಸಹಾ ನಮ್ಮ ಸ್ಕ್ರಿಪ್ಟ್ ಇಟ್ಟುಕೊಂಡು ಸಿದ್ಧಪಡಿಸಿದ್ದ ಒಂದು ಹಾಸ್ಯ ನಾಟಕವನ್ನು ಪ್ರದರ್ಶಿಸಿದ್ದೆವು. ಆ ಪ್ರಯೋಗವನ್ನು ನಾವು ಮಾಡಿ ಬಹಳ ಕಾಲವಾಯಿತು. ಆ ನಾಟಕದಲ್ಲಿ ಒಬ್ಬ ಯುವಕ ಇರ್ತಾನೆ. ಅವನ ಹೆಂಡತಿ ಗರ್ಭಿಣಿ. ಹುಟ್ಟೋ ಮಗು ಗಟ್ಟುಮುಟ್ಟಾಗಿ ಇರುತ್ತಾ ಅನ್ನುವ ಚಿಂತೆ ಅವನನ್ನು ಕಾಡ್ತಾ ಇತ್ತು. ಯಾಕಂದ್ರೆ ಅವನು ಶಕ್ತಿಹೀನ ಅಂತ ಊರಲ್ಲಿ ಎಲ್ಲರೂ ಅವನನ್ನು ಲೇವಡಿ ಮಾಡ್ತಿದ್ರು.

ತನ್ನ ಹೆಂಡತಿಯ ಈ ರಕ್ತಹೀನತೆಯನ್ನು ಹೇಗಾದರೂ ಮಾಡಿ ಕಡಿಮೆ ಮಾಡಬೇಕು ಅಂತ ಅವನಿಗೆ ಅನಿಸಿತ್ತು. ಆದರೆ ಕೇವಲ ಉಪ್ಪು ತಿಂದರೆ ಆ ಶಕ್ತಿ ಬರುತ್ತದೆ ಎಂದು ಅವನಿಗೆ ನಂಬುವುದಕ್ಕೆ ಕಷ್ಟವಾಗುತ್ತಿತ್ತು. ಆಗ ಅವನ ಹಿಂದಿನ ಗುರುಗಳು ಸೀಬೆಹಣ್ಣು ತಿಂದರೂ ಅನುಕೂಲವಾಗುತ್ತದೆ ಎಂದು ಅವನಿಗೆ ಹೇಳಿದರು. ಈ ದೇಹ ಕೆಲಸ ಮಾಡುವ ರೀತಿ ತನ್ನ ಅರಿವಿಗೆ ಮೀರಿದ್ದು ಎನ್ನುವುದು ಅವನಿಗೆ ಅರ್ಥವಾಗತೊಡಗಿತು.

ಸರ್ಕಾರ ಇತ್ತೀಚೆಗೆ ಅಕ್ಕಿ ಮತ್ತು ಗೋಧಿಗೆ ಪೌಷ್ಟಿಕಾಂಶ ಬೆರೆಸಿ ಶಾಲೆಯ ಬಿಸಿಯೂಟಕ್ಕೆ ಹಾಗೂ ರೇಷನ್ ಅಂಗಡಿಗಳಲ್ಲಿ ಕಡ್ಡಾಯವಾಗಿ ಕೊಡಲು ಯೋಚಿಸುತ್ತಿದೆ. ಆದರೆ ಅಂತಹ ಪೌಷ್ಟಿಕಾಂಶ ಬೆರೆಸಿದ ಅಕ್ಕಿಯನ್ನು ಸರಿಯಾಗಿ ಪೂರೈಸುವುದು ಮತ್ತದರ ಗುಣಮಟ್ಟ ಪರೀಕ್ಷಿಸುವುದು ಕಷ್ಟವಾಗುತ್ತಿದೆ. ಹಾಗಾಗಿ ಸದ್ಯಕ್ಕೆ ಪಡಿತರ ವ್ಯವಸ್ಥೆಯಲ್ಲಿ ಅದರ ನೀಡಿಕೆಯನ್ನು ನಿಲ್ಲಿಸಿದ್ದಾರೆ.

ಜನರಿಗೆ ಇದರ ಬಗ್ಗೆ ಸರಿಯಾದ ಅರಿವು ಮೂಡಿಸುವುದಕ್ಕೆ ಬಹುಶಃ ಇದು ಸರಿಯಾದ ಸಮಯ. ಸಾಮಾನ್ಯವಾಗಿ ನಾವು ಬಳಸುವ ಅಕ್ಕಿಗಿಂತ ಹೆಚ್ಚು ಕಬ್ಬಿಣದ ಅಂಶ ಹೊಂದಿರುವ ಸಾಂಪ್ರದಾಯಿಕ ಅಕ್ಕಿ ತಳಿಗಳು ನಮ್ಮಲ್ಲಿ ಸಾಕಷ್ಟು ಇವೆ ಅನ್ನುವ ಅಭಿಪ್ರಾಯವಿದೆ. ಆ ಬಗ್ಗೆ ಸರಿಯಾಗಿ ಪರೀಕ್ಷೆ ಮಾಡಿ ಖಾತ್ರಿ ಪಡಿಸಿಕೊಳ್ಳಬೇಕು. ಅದು ನಿಜ ಅನ್ನುವುದಾದರೆ ಅದರ ಮಾರಾಟಕ್ಕೆ ವ್ಯವಸ್ಥೆ ಮಾಡೋದು ಕೂಡ ಯೋಜನೆಯ ಭಾಗವಾಗಬೇಕು. ಯಾಕೆಂದರೆ ಪಡಿತರ ಅಕ್ಕಿ ಬೇಡ ಅನ್ನೋ ಶ್ರೀಮಂತ ಜನರಲ್ಲೂ ರಕ್ತಹೀನತೆ ಇದ್ದೇ ಇದೆ, ಅವರಿಗೂ ಇದರಿಂದ ಸಹಾಯವಾಗುತ್ತದೆ. ಇದೆಲ್ಲದರ ಮಧ್ಯೆ, ಜನರಿಗೆ ಸೀಬೆ ಹಣ್ಣಿನ ಬಗ್ಗೆ ಹೇಳುವುದನ್ನು ಮಾತ್ರ ಮರೆಯಬಾರದು!

ಸೀಬೆಹಣ್ಣಿನ ತಿನಿಸುಗಳು

ನಿಮ್ಮ ಆಹಾರದಲ್ಲಿ ಸೀಬೆಹಣ್ಣನ್ನು ಹೆಚ್ಚಾಗಿ ಬಳಸಲು ಎರಡು ಸುಲಭ ಮತ್ತು ರುಚಿಕರವಾದ ದಾರಿಗಳು ಇಲ್ಲಿವೆ.

1. ಸೀಬೆಹಣ್ಣಿನ ಕೋಸಂಬರಿ:

ಕಾಲು ಬಟ್ಟಲು ಹೆಸರುಬೇಳೆಯನ್ನು 4 ಗಂಟೆಗಳ ಕಾಲ ನೆನೆಸಿಡಿ. ನಂತರ ನೀರನ್ನು ಬಸಿದು, ಅದಕ್ಕೆ ಅರ್ಧ ಕಪ್ ಸಣ್ಣದಾಗಿ ಹೆಚ್ಚಿದ ಸೌತೆಕಾಯಿ ಮತ್ತು ಕ್ಯಾರೆಟ್ ಸೇರಿಸಿ. ಒಂದು ಕಪ್ ಸಣ್ಣದಾಗಿ ಹೆಚ್ಚಿದ, ಹದವಾಗಿ ಹಣ್ಣಾಗಿರುವ ಸೀಬೆಹಣ್ಣಿನ ತುಂಡುಗಳನ್ನು ಸೇರಿಸಿ. ಸಣ್ಣಗೆ ಕತ್ತರಿಸಿರುವ ಒಂದು ಹಸಿಮೆಣಸಿನ ಕಾಯಿ ಮತ್ತು ಕೊತ್ತುಂಬರಿ ಸೊಪ್ಪನ್ನು ಸೇರಿಸಿ. ನಂತರ ಅದಕ್ಕೆ ಒಂದು ಚಮಚ ನಿಂಬೆ ರಸ ಮತ್ತು ಅರ್ಧ ಚಮಚ ಉಪ್ಪು ಸೇರಿಸಿ. ಕೊನೆಯಲ್ಲಿ ಸಾಸಿವೆ, ಕರಿಬೇವು ಮತ್ತು ಇಂಗಿನ ಒಗ್ಗರಣೆ ಹಾಕಿ.


2. ಸೀಬೆಹಣ್ಣಿನ ರಾಯತ

ಹದವಾಗಿ ಹಣ್ಣಾಗಿರುವ ಮೂರು ಸೀಬೆಹಣ್ಣಿನ (ಆದರೆ ತುಂಬಾ ಮೆತ್ತಗಿರಬಾರದು) ಬೀಜ ತೆಗೆದು, ತುರಿದುಕೊಳ್ಳಿ (ಸುಮಾರು ಒಂದು ಕಪ್ ಇರಲಿ). ಅದಕ್ಕೆ ಒಂದು ಕಪ್ ಮೊಸರು, ಒಂದು ಚಮಚ ಜೀರಿಗೆ ಪುಡಿ, ಅರ್ಧ ಚಮಚ ಅಚ್ಚಖಾರದ ಪುಡಿ, ಸ್ವಲ್ಪ ಉಪ್ಪು ಮತ್ತು ಕಾಲು ಚಮಚ ಸಕ್ಕರೆ ಸೇರಿಸಿ. ರುಚಿಗೆ ಸ್ವಲ್ಪ ಹುರಿದ ವಾಲ್‌ನಟ್ ತುಂಡುಗಳನ್ನು ಸೇರಿಸಿದರೆ ರಾಯತ ಸಿದ್ಧ.

ರಕ್ತಹೀನತೆ ನಿವಾರಣೆಗೆ ಸೀಬೆ ಅದ್ಭುತವಾದ ಹಣ್ಣು ಅನ್ನೋದನ್ನ ಮರೆಯಬೇಡಿ.

Originally published in Times of India, April 4, 2026

[https://timesofindia.indiatimes.com/blogs/tasting-economics/why-guava-is-so-pyara/]



ಕನಿಷ್ಠ ಕೂಲಿ ಖಾತ್ರಿಗೆ ಕಳೆದು ಹೋದ ಅವಕಾಶ

ಜೀನ್ ಡ್ರೀಜ್

ಕಳೆದ ಕೆಲವು ತಿಂಗಳುಗಳಿಂದ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ) ಮತ್ತು ವಿಕ್ಸಿತ್ ಭಾರತ್ – ರೋಜಗಾರ್ ಹಾಗೂ ಅಜೀವಿಕಾ ಮಿಷನ್ (ಗ್ರಾಮೀಣ) ಕಾಯ್ದೆ ಅಥವಾ ಸಂಕ್ಷಿಪ್ತವಾಗಿ ವಿಬಿ–ಜಿ ರಾಂ ಜಿ ಕಾಯ್ದೆಗಳ ಸಾಧಕ–ಬಾಧಕಗಳ ಬಗ್ಗೆ ಬಹಳ ಬಿಸಿಬಿಸಿ ಚರ್ಚೆ ನಡೆಯುತ್ತಿದೆ. ಆದರೆ ಈ ಚರ್ಚೆಯಲ್ಲಿ ಎರಡೂ ಕಾಯ್ದೆಗಳನ್ನು ಕಾಡುತ್ತಿರುವ ಅತ್ಯಂತ ಪ್ರಮುಖ ವಿಷಯವಾದ ಕೂಲಿದರದ ಬಗ್ಗೆ ಯಾರೂ ಮಾತನಾಡುತ್ತಲೇ ಇಲ್ಲ.


ಒಂದು ಪ್ರಮುಖ ಮಾನದಂಡ

ಉದ್ಯೋಗ ಖಾತರಿ ಯೋಜನೆಯಲ್ಲಿ ಕೂಲಿದರ ಅತ್ಯಂತ ನಿರ್ಣಾಯಕವಾದ ಅಂಶ. ಸಾಪೇಕ್ಷವಾಗಿ ಕೂಲಿಯನ್ನು ಹೆಚ್ಚಿಸಿದರೆ ಕೆಲಸಗಾರರಲ್ಲಿ ವಿಶೇಷ ಹುರುಪು ಮತ್ತು ಉತ್ಸಾಹ ಮೂಡುತ್ತದೆ. ಮನರೇಗಾ ಆರಂಭವಾದ ಹೊಸದರಲ್ಲಿ ಹೀಗೆ ಆಗಿತ್ತು. ಯಾವುದೇ ಯೋಜನೆ ಯಶಸ್ವಿಯಾಗಬೇಕಾದರೆ ಪಾಲ್ಗೊಳ್ಳುವರಲ್ಲಿ ಇಂತಹ ಉತ್ಸಾಹ ಇರಬೇಕಾದ್ದು ಬಹಳ ಮುಖ್ಯ.

ಇದಕ್ಕೆ ವ್ಯತಿರಿಕ್ತವಾಗಿ, ಕೂಲಿದರವನ್ನು ಇಳಿಸಿದರೆ, ಅದು ಯೋಜನೆಯ ವೇಗವನ್ನು ಮಂದಗೊಳಿಸುತ್ತದೆ. ಅಥವಾ ಇದರಿಂದ ಕ್ರಮೇಣ ಯೋಜನೆಯೇ ನಿಂತು ಹೋಗಿಬಿಡಬಹುದು. ಏನೇ ಆದರೂ, ಯೋಜನೆಯ ಒಟ್ಟು ವೆಚ್ಚದ ಮೇಲೆ ಕೂಲಿದರ ಗಣನೀಯವಾಗಿ ಪ್ರಭಾವ ಬೀರುತ್ತದೆ.

ಕೂಲಿದರ ನಿರ್ಧಾರ ಹೇಗೆ?

ಮನರೇಗಾ ಯೋಜನೆಯಲ್ಲಿ ಕೆಲಸಗಾರರ ಕೂಲಿಯನ್ನು ಈ ಕಾಯ್ದೆಯ 'ಸೆಕ್ಷನ್ 6ರ ಪ್ರಕಾರ ನಿರ್ಧರಿಸಲಾಗುತ್ತದೆ. ಇದರಲ್ಲಿ ಎರಡು ಭಾಗಗಳಿವೆ:



ಸೆಕ್ಷನ್ 6(1), ಕೇಂದ್ರ ಸರ್ಕಾರಕ್ಕೆ ಅಧಿಕೃತವಾಗಿ ಕೂಲಿ ದರವನ್ನು ಘೋಷಿಸುವ ಅಧಿಕಾರ ನೀಡುತ್ತದೆ. ಕೇಂದ್ರ ಸರ್ಕಾರ ಬೇರೆ ಬೇರೆ ಪ್ರದೇಶಗಳಿಗೆ ಬೇರೆ ಬೇರೆ ದರಗಳನ್ನು ನಿಗದಿಪಡಿಸಬಹುದು. ಇಲ್ಲಿ ವಿಭಿನ್ನ ಪ್ರದೇಶಗಳು ಅಂದರೆ, ವಾಸ್ತವದಲ್ಲಿ ವಿಭಿನ್ನ ರಾಜ್ಯಗಳು ಅಂತಲೇ ಅಗುತ್ತದೆ.

ಸೆಕ್ಷನ್ 6(2)ರ ಪ್ರಕಾರ, ಕೇಂದ್ರ ಸರ್ಕಾರವು ಸೆಕ್ಷನ್ 6(1)ರ ಅಡಿಯಲ್ಲಿ ಅಧಿಕೃತವಾಗಿ ಕೂಲಿ ದರಗಳನ್ನು ಘೋಷಿಸುವವರೆಗೆ, ಆಯಾ ರಾಜ್ಯ ಸರ್ಕಾರಗಳು ನಿಗದಿಪಡಿಸಿದ ಕನಿಷ್ಠ ಕೂಲಿ ದರಗಳೇ ಜಾರಿಯಲ್ಲಿರುತ್ತವೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಕೃಷಿ ಕಾರ್ಮಿಕರಿಗಾಗಿ ರಾಜ್ಯ ಸರ್ಕಾರಗಳು ನಿಗದಿಪಡಿಸಿದ ಕನಿಷ್ಠ ಕೂಲಿಯನ್ನು ಪಡೆಯುವುದಕ್ಕೆ ಮನರೇಗಾ ಕಾರ್ಮಿಕರು ಅರ್ಹರಾಗಿರುತ್ತಾರೆ. ಮನರೇಗಾ ಯೋಜನೆ 2006ರ ಫೆಬ್ರವರಿ 2 ರಂದು ಜಾರಿಗೆ ಬಂದಿತು. ಆದರೆ, 2009ರವರೆಗೆ ಕೇಂದ್ರ ಸರ್ಕಾರವು ಸೆಕ್ಷನ್ 6(1)ನ್ನು ಅಂದರೆ ಕೂಲಿದರಗಳನ್ನು ನಿರ್ಧರಿಸುವ ಅಧಿಕಾರವನ್ನು ಬಳಸಿಕೊಂಡಿರಲಿಲ್ಲ. ಆದ್ದರಿಂದ, ಆ ಅವಧಿಯಲ್ಲಿ ಆಯಾ ರಾಜ್ಯಗಳು ನಿರ್ಧರಿಸಿದ ಕನಿಷ್ಠ ಕೂಲಿ ದರಗಳೇ ಚಾಲ್ತಿಯಲ್ಲಿದ್ದವು. ಹಲವು ರಾಜ್ಯಗಳಲ್ಲಿ ಮಾರುಕಟ್ಟೆಯಲ್ಲಿ ಕೃಷಿ ಕಾರ್ಮಿಕರಿಗೆ ಸಿಗುತ್ತಿದ್ದ ಸಾಮಾನ್ಯ ಕೂಲಿಗಿಂತ ರಾಜ್ಯ ಸರ್ಕಾರಗಳು ನಿಗದಿಪಡಿಸಿದ್ದ ಕನಿಷ್ಠ ಕೂಲಿ ಹೆಚ್ಚಾಗಿತ್ತು. ಇದು ಆರಂಭದ ವರ್ಷಗಳಲ್ಲಿ ಮನರೇಗಾ ಯೋಜನೆ ಅಷ್ಟೊಂದು ಜನಪ್ರಿಯವಾಗಿದ್ದಕ್ಕೆ ಮುಖ್ಯ ಕಾರಣವಾಗಿತ್ತು. 2006 ರಿಂದ 2009ರ ನಡುವಿನ ಅವಧಿಯಲ್ಲಿ ಕೆಲವು ರಾಜ್ಯಗಳು ಕನಿಷ್ಠ ಕೂಲಿ ದರವನ್ನು ಗಣನೀಯವಾಗಿ ಏರಿಸಿದವು. ಇದಕ್ಕೆ ಅತ್ಯಂತ ಗಮನಾರ್ಹ ಉದಾಹರಣೆಯೆಂದರೆ ಉತ್ತರ ಪ್ರದೇಶ. 2007–08ರಲ್ಲಿ ಅಲ್ಲಿ ದಿನಕ್ಕೆ 58 ರೂಪಾಯಿ ಇದ್ದ ಕೂಲಿ ದಿಢೀರನೆ 100 ರೂಪಾಯಿಯಾಯಿತು. ಆಗ ಮಾಯಾವತಿಯವರು ಮುಖ್ಯಮಂತ್ರಿಯಾಗಿದ್ದರು. ಮನರೇಗಾ ಯೋಜನೆಯ ಕೂಲಿಯ ಹಣವನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರವೇ ಭರಿಸುತ್ತಿತ್ತು. ಹಾಗಾಗಿ ರಾಜ್ಯ ಸರ್ಕಾರಗಳು ಲಗಾಮಿಲ್ಲದೆ ಕೂಲಿಯನ್ನು ಹೆಚ್ಚಿಸುತ್ತಿವೆ ಎಂದು ಕೆಲವು ವಿಶ್ಲೇಷಕರು ವಾದಿಸಿದರು. ಕೆಲವರು ಈ ಟೀಕೆಯನ್ನು ವಿರೋಧಿಸಿದರು. ರಾಜ್ಯ ಸರ್ಕಾರಗಳು ತಮ್ಮ ರಾಜ್ಯದಲ್ಲಿನ ಸ್ವಂತ ಸಾರ್ವಜನಿಕ ಕೆಲಸಗಳಿಗೂ ಅಷ್ಟೇ ಕೂಲಿಯನ್ನು ಕೊಡಬೇಕಾಗುತ್ತದೆ. ಹಾಗಾಗಿ ರಾಜ್ಯಗಳಿಗೆ ಸುಮ್ಮಸುಮ್ಮನೆ ಕೂಲಿ ಹೆಚ್ಚಿಸಲು ಸಾಧ್ಯವಿಲ್ಲ ಎಂದು ವಾದಿಸಿದರು. ಅಲ್ಲದೆ, ಉತ್ತರಪ್ರದೇಶವನ್ನು ಬಿಟ್ಟರೆ ಬೇರೆ ಯಾವ ರಾಜ್ಯದಲ್ಲೂ ಕನಿಷ್ಠ ಕೂಲಿಯಲ್ಲಿ ಈ ಪ್ರಮಾಣದ ಏರಿಕೆಯಾಗಿಲ್ಲ ಎಂದು ಅವರು ವಾದಿಸಿದರು.

ಈ ಚರ್ಚೆ ಮುಂದುವರಿದೇ ಇತ್ತು. ಒಂದು ತೀರ್ಮಾನ ಸಾಧ್ಯವಾಗಿರಲಿಲ್ಲ. ಕೇಂದ್ರ ಸರ್ಕಾರ 2009ರ ಕೊನೆಯಲ್ಲಿ ಒಂದು ಆತಂಕಕಾರಿಯಾದ ನಿರ್ಧಾರ ತೆಗೆದುಕೊಂಡಿತು. ಸೆಕ್ಷನ್ 6(1)ನ್ನು ಬಳಸಿಕೊಂಡು ಮನರೇಗಾ ಕೂಲಿ ದರಗಳನ್ನು ತಾನೇ ಘೋಷಿಸಿತು. ಕೇಂದ್ರ ಸರ್ಕಾರವು ಬಹುತೇಕ ರಾಜ್ಯಗಳಲ್ಲಿ ದಿನಕ್ಕೆ 100ರೂ ಕೂಲಿಯನ್ನು ನಿಗದಿಪಡಿಸಿತು. ಕನಿಷ್ಠ ಕೂಲಿ ಈಗಾಗಲೇ ಹೆಚ್ಚಿದ್ದ ರಾಜ್ಯಗಳಲ್ಲಿ ಹೆಚ್ಚುವರಿ ಹಣವನ್ನೂ ನೀಡಿತು. ಕಾರ್ಮಿಕರ ಒಳಿತಿಗಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹೇಳಲಾಯಿತು. ಇದನ್ನು 2009ರ ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ ಪಕ್ಷ ನೀಡಿದ್ದ ಭರವಸೆಯನ್ನು ಈಡೇರಿಸುವುದಕ್ಕಾಗಿ ತೆಗೆದುಕೊಂಡ ಕ್ರಮವಾಗಿ ಇದನ್ನು ಬಿಂಬಿಸಲಾಯಿತು.

ಆದರೆ, ಈ ನಿರ್ಧಾರದಿಂದ ಕಾಲಕ್ರಮೇಣ ಕೇಂದ್ರ ಸರ್ಕಾರಕ್ಕೆ ಮನರೇಗಾ ಕೂಲಿಯಲ್ಲಿ ಏರಿಕೆಯಾಗದಂತೆ ನೋಡಿಕೊಳ್ಳುವುದಕ್ಕೆ ಅವಕಾಶವಾಯಿತು. ವಾಸ್ತವವಾಗಿ, ಅಂದಿನಿಂದ ಕೇಂದ್ರ ಸರ್ಕಾರವು ಮನರೇಗಾ ನೈಜ ಕೂಲಿಯನ್ನು ಸ್ಥಗಿತಗೊಳಿಸಿತು. ಇಂದಿಗೂ ಸಹ, ಪ್ರತಿ ವರ್ಷ ಗ್ರಾಹಕ ಬೆಲೆ ಸೂಚ್ಯಂಕಕ್ಕೆ ಅನುಗುಣವಾಗಿ ರಾಜ್ಯವಾರು ಕೂಲಿಯನ್ನು ಹೆಚ್ಚಿಸಲಾಗುತ್ತದೆಯೇ ಹೊರತು, ಬೆಲೆ ಸೂಚ್ಯಂಕಕ್ಕಿಂತ ಹೆಚ್ಚಿಗೆ ಕೂಲಿ ಏರಿಕೆಯಾಗುತ್ತಿಲ್ಲ.

ನೈಜ ಕೂಲಿ ಸ್ಥಗಿತದ ಪರಿಣಾಮಗಳು

ಈ ರೀತಿ ಕೂಲಿ ದರವನ್ನು ಸ್ಥಗಿತಗೊಳಿಸಿದ್ದರಿಂದ ಎರಡು

ಗಂಭೀರವಾದ ಸಮಸ್ಯೆಗಳು ಹುಟ್ಟಿಕೊಂಡವು:

ಮೊದಲನೆಯದಾಗಿ ಅನೇಕ ರಾಜ್ಯಗಳಲ್ಲಿ ರಾಜ್ಯ ಸರ್ಕಾರಗಳು ನಿಗದಿಪಡಿಸಿದ ಕನಿಷ್ಠ ಕೂಲಿಗಿಂತಲೂ ಮನರೇಗಾ ಕೂಲಿ ಕಡಿಮೆಯಾಗತೊಡಗಿತು. ಯಾಕೆಂದರೆ ಕನಿಷ್ಠ ಕೂಲಿ ಹಣದುಬ್ಬರವನ್ನು ಅನುಸರಿಸಿ ಏರಿಕೆಯಾಗುತ್ತಿತ್ತು. ಅಂದರೆ ಹಣದುಬ್ಬರ ಹೆಚ್ಚಾದರೆ ಕನಿಷ್ಠ ಕೂಲಿಯೂ ಏರಿಕೆಯಾಗುತ್ತಿತ್ತು. ಆದರೆ ಮನರೇಗ ಕೂಲಿ ಹಾಗೆ ಆಗುತ್ತಿರಲಿಲ್ಲ. ಲಾವಣ್ಯ ತಮಾಂಗ್ ಅವರು ಇತ್ತೀಚಿಗೆ ಮಾಡಿರುವ ಅಧ್ಯಯನದ ಪ್ರಕಾರ, 2025-26ರ ವೇಳೆಗೆ ಬಹುತೇಕ ರಾಜ್ಯಗಳಲ್ಲಿ ಮನರೇಗಾ ಕೂಲಿಯು ಕೃಷಿ ಕಾರ್ಮಿಕರ ಕನಿಷ್ಠ ಕೂಲಿಗಿಂತಲೂ ಬಹಳ ಕಡಿಮೆಯಿದೆ. ಇದು ಕನಿಷ್ಠ ಕೂಲಿಯನ್ನು ರಕ್ಷಿಸಬೇಕೆನ್ನುವ ಮನರೇಗಾದ ಆಶಯಕ್ಕೆ ವಿರುದ್ಧವಾಗಿದೆ. ಅಲ್ಲದೆ, ಕನಿಷ್ಠ ಕೂಲಿಗಿಂತ ಕಡಿಮೆ ಹಣ ನೀಡುವುದು ಕಾನೂನುಬದ್ಧವೇ, ಎಂಬ ಪ್ರಶ್ನೆಯೂ ಇದೆ (ಈ ವಿಷಯ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಆದರೆ ಇನ್ನೂ ಸ್ಪಷ್ಟ ತೀರ್ಪು ಬಂದಿಲ್ಲ).

ಎರಡನೆಯದಾಗಿ ಮನರೇಗಾ ಕೂಲಿಯು ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿ ಸಿಗುವ ಕೂಲಿಗಿಂತಲೂ ಕಡಿಮೆ ಇದೆ. 2009ರಿಂದ 2014ರ ನಡುವೆ ಗ್ರಾಮೀಣ ಭಾರತದಲ್ಲಿ ಕೂಲಿ ದರ ವೇಗವಾಗಿ ಹೆಚ್ಚುತ್ತಿತ್ತು. ಆದರೆ ಲೇಬರ್ ಬ್ಯೂರೋ ಅಂಕಿಅಂಶಗಳ ಪ್ರಕಾರ, 2014ರ ಹೊತ್ತಿಗೆ ಮನರೇಗಾದಲ್ಲಿ ಪುರುಷರಿಗೆ ಅಖಿಲ ಭಾರತ ಮಟ್ಟದಲ್ಲಿ ಕೃಷಿ ಕೂಲಿಯ ಶೇಕಡ 60ರಷ್ಟು ಮತ್ತು ಮಹಿಳೆಯರಿಗೆ ಶೇಕಡ 75ರಷ್ಟು ಮಾತ್ರ ಸಿಗುತ್ತಿತ್ತು. ಅಂದಿನಿಂದ ಈ ಅಂತರವು ಹಾಗೆಯೇ ಮುಂದುವರಿದಿದೆ, ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿನ ನೈಜ ಕೂಲಿದರ (ಅಂದರೆ ಹಣದುಬ್ಬರಕ್ಕೆ ಹೊಂದಿಸಿದ ಕೂಲಿ) ಸ್ಥಗಿತಗೊಂಡಿದೆ.

ವಾಸ್ತವದಲ್ಲಿ ಈ ವ್ಯತ್ಯಾಸವು ಮೇಲೆ ಕಾಣುವುದಕ್ಕಿಂದ ಬಹಳ ಹೆಚ್ಚಿಗೆ ಇದೆ. ಇದಕ್ಕೆ ಕಾರಣವೇನೆಂದರೆ, ಮಾರುಕಟ್ಟೆಯಲ್ಲಿ ಸಿಗುವ ಕೂಲಿ ಮನರೇಗಾಕ್ಕಿಂತ ಹೆಚ್ಚಿಗೆ ಇದೆ. ಅಷ್ಟೇ ಅಲ್ಲ ಮಾರುಕಟ್ಟೆಯಲ್ಲಿ ಕೂಲಿ ಸಮಯಕ್ಕೆ ಸರಿಯಾಗಿ ಪಾವತಿಯಾಗುತ್ತದೆ. ಹೆಚ್ಚಿನ ಸಂದರ್ಭದಲ್ಲಿ ಆ ದಿನವೇ ಪಾವತಿಯಾಗುತ್ತದೆ. ಆದರೆ ಮನರೇಗಾದಲ್ಲಿ ಹಾಗಿಲ್ಲ; ಹಣ ಕೈಗೆ ಸಿಗುವುದಕ್ಕೆ ತುಂಬಾ ತಡವಾಗುತ್ತದೆ, ಯಾವಾಗ ಸಿಗುತ್ತದೆ ಅನ್ನುವ ಖಾತ್ರಿಯೂ ಇರುವುದಿಲ್ಲ. ಕೇಂದ್ರ ಸರ್ಕಾರ ಇದನ್ನು ಅಲ್ಲಗಳೆಯುತ್ತಲೇ ಇದೆ. ಆದರೆ ಪುರಾವೆಗಳು, ಅದರಲ್ಲೂ ವಿಶೇಷವಾಗಿ 'ಲಿಬ್‌ಟೆಕ್' ತಂಡ ನಡೆಸಿದ ಇತ್ತೀಚಿನ ಸಂಶೋಧನೆಗಳು ಇದನ್ನು ಸ್ಪಷ್ಟವಾಗಿ ತೋರಿಸಿವೆ. ವಾಸ್ತವವಾಗಿ ಕೇವಲ ತಡವಾಗಿರುವುದು ಮಾತ್ರವಲ್ಲ, ಎಷ್ಟೋ ಸಂದರ್ಭಗಳಲ್ಲಿ ಮನರೇಗಾ ಕೂಲಿ ಪಾವತಿಯೇ ಆಗಿಲ್ಲ. ಉದಾಹರಣೆಗೆ ಆಧಾರ್ ಆಧಾರಿತ ಪಾವತಿ ವ್ಯವಸ್ಥೆ [ABPS] ಅಥವಾ ಮೊಬೈಲ್ ಮಾನಿಟರಿಂಗ್ ಸಿಸ್ಟಮ್‌ನ ತಾಂತ್ರಿಕ ತೊಂದರೆಗಳಿಂದಾಗಿ ಕೆಲಸಗಾರರಿಗೆ ಕೂಲಿಯೇ ಸಿಗುವುದಿಲ್ಲ. ಇದರಿಂದ ಕಾರ್ಮಿಕರಲ್ಲಿ ಮನರೇಗಾ ಬಗ್ಗೆ ತೀವ್ರ ನಿರಾಸಕ್ತಿ ಮೂಡುತ್ತದೆ. ಅದರ ಪರಿಣಾಮವಾಗಿ ಎಷ್ಟೋ ಗ್ರಾಮೀಣ ಕಾರ್ಮಿಕರು ಮನರೇಗಾದಲ್ಲಿ ಅಸಕ್ತಿಯನ್ನೇ ಕಳೆದುಕೊಂಡಿದ್ದಾರೆ.

ಆದರೆ ಸರ್ಕಾರಿ ಲೆಕ್ಕದ ಪ್ರಕಾರ ಮನರೇಗಾ ಕೆಲಸಗಾರರ ಸಂಖ್ಯೆ ಸ್ವಲ್ಪವೂ ಕಡಿಮೆಯಾಗಿಲ್ಲ. ಹಾಗಾಗಿ ಇದು, ಜನರು ಮನರೇಗಾದಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ ಎಂಬ ಹೇಳಿಕೆಗೆ ವ್ಯತಿರಿಕ್ತವಾಗಿ ತೋರುತ್ತದೆ. ಆದರೆ, ಇತ್ತೀಚಿನ 'ಪೀರಿಯಾಡಿಕ್ ಲೇಬರ್ ಫೋರ್ಸ್ ಸರ್ವೆ' (PLFS) ಮಾಹಿತಿಯನ್ನು ಆಧರಿಸಿ ಮಾಡಿರುವ ವಿಶ್ಲೇಷಣೆ ಗಮನಿಸಿದರೆ ಅಧಿಕೃತ ಅಂಕಿಅಂಶ ಸುಳ್ಳೆಂಬುದು ಸ್ಪಷ್ಟವಾಗುತ್ತದೆ. ದೇಶಾದ್ಯಂತ ಈ ಯೋಜನೆಯನ್ನು ಜಾರಿಗೊಳಿಸಿದ ಆರಂಭದ ವರ್ಷಗಳಿಗೆ ಹೋಲಿಸಿದರೆ ಇಂದು ಮನರೇಗಾದ ಉದ್ಯೋಗದ ಮಟ್ಟ ಕಡಿಮೆಯಾಗಿರುವುದನ್ನು ಪೀರಿಯಾಡಿಕ್ ಸರ್ವೆಯ ಅಂಕಿಅಂಶಗಳು ತಿಳಿಸುತ್ತವೆ. ಸರ್ಕಾರಿ ದಾಖಲೆಗಳಿಗೂ ಮತ್ತು ವಾಸ್ತವ ಪರಿಸ್ಥಿತಿಗೂ ನಡುವೆ ಅಪಾರ ವ್ಯತ್ಯಾಸವಿದೆ. ಇದನ್ನು ನೋಡಿದರೆ ಆ ಅವಧಿಯಲ್ಲಿ ಮನರೇಗಾ ಯೋಜನೆಯಲ್ಲಿ ಮಿತಿಮೀರಿದ ಹಣದ ಸೋರಿಕೆಯಾಗಿರುವುದು ಗೊತ್ತಾಗುತ್ತದೆ.

ಜನರಲ್ಲಿ ನಿರಾಸಕ್ತಿ ಮೂಡುವುದಕ್ಕೂ ಹಾಗೂ ಭ್ರಷ್ಟಾಚಾರ ಹೆಚ್ಚಾಗುವುದಕ್ಕೂ ಪರಸ್ಪರ ಸಂಬಂಧವಿದೆ. ಕಾರ್ಮಿಕರು ಆಸಕ್ತಿ ಕಳೆದುಕೊಂಡಾಗ ಮೇಲ್ವಿಚಾರಣೆ ಬಿಗಿ ಕಳೆದುಕೊಳ್ಳುತ್ತದೆ. ಇನ್ನೂ ದುರಂತವೆಂದರೆ ಕಾರ್ಮಿಕರು ಕಾನೂನುಬದ್ದ ಹಾದಿಯನ್ನು ಬಿಟ್ಟು, ಪ್ರಲೋಬಕ್ಕೆ ಒಳಗಾಗಿ ಭ್ರಷ್ಟ ವ್ಯವಸ್ಥೆಯೊಂದಿಗೆ ಶಾಮೀಲಾಗಿ ಬಿಡುವ ಸಾಧ್ಯತೆಯೂ ಹೆಚ್ಚು.

ಮುಂದುವರಿದ ನೀತಿಯ ವೈಫಲ್ಯ

ದುರದೃಷ್ಟವಶಾತ್, 'ವಿಬಿ-ಜಿ ರಾಮ್ ಜಿ'ಕಾಯಿದೆ ಈ ಬಿಕ್ಕಟ್ಟನ್ನು ಪರಿಹರಿಸುವುದಕ್ಕಿಂತ ಮುಂದುವರಿಸಿಕೊಂಡು ಹೋಗುವಂತೆ ಕಾಣುತ್ತಿದೆ. ಮೊದಲನೆಯದಾಗಿ, ಈ ಕಾಯಿದೆಯಲ್ಲಿ ಸಮಯಕ್ಕೆ ಸರಿಯಾಗಿ ವೇತನವನ್ನು ಪಾವತಿಸುವುದಕ್ಕೇ ಆಗಲಿ ಅಥವಾ ಭ್ರಷ್ಟಾಚಾರವನ್ನು ತಡೆಯುವುದಕ್ಕೇ ಆಗಲಿ ಯಾವುದೇ ಹೊಸ ಅಥವಾ ಉಪಯುಕ್ತ ನಿಯಮಗಳೂ ಇಲ್ಲ. ಎರಡನೆಯದಾಗಿ, ಕೂಲಿದರವನ್ನು ನಿರ್ಧರಿಸುವ ಅಧಿಕಾರವನ್ನು ಈ ಕಾಯ್ದೆ ಕೂಡ ಕೇಂದ್ರ ಸರ್ಕಾರಕ್ಕೇ ನೀಡುತ್ತಿದೆ (ಸೆಕ್ಷನ್ 10ರ ಅಡಿಯಲ್ಲಿ). ಈಗ ಅಂತಹ ಅಧಿಕಾರದ ಅವಶ್ಯಕತೆಯೇ ಇಲ್ಲ.

ಒಂದು ವಿಷಯ ನೆನಪಿಡಬೇಕು, ಹಿಂದೆ ಮನರೇಗಾ ಯೋಜನೆಯಲ್ಲಿ 6(2) ಬದಲಿಗೆ 6(1)ನ್ನು ಬಳಸಲು ಪ್ರಾರಂಭಿಸಿದ್ದಕ್ಕೆ ಒಂದು ಸಮರ್ಥನೆಯನ್ನು ನೀಡಲಾಗಿತ್ತು. ವೇತನವನ್ನು ಪೂರ್ತಿಯಾಗಿ ಕೇಂದ್ರ ಸರ್ಕಾರವೇ ನೀಡುವಾಗ, ಅದನ್ನು ರಾಜ್ಯ ಸರ್ಕಾರಗಳು ನಿರ್ಧರಿಸಬಾರದು ಎಂಬುದು ಆಗಿನ ವಾದವಾಗಿತ್ತು. ಆದರೆ, ಈ ಹೊಸ ಕಾಯಿದೆಯಡಿ ಕೂಲಿಯ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 60:40 ಅನುಪಾತದಲ್ಲಿ ಹಂಚಿಕೊಳ್ಳುತ್ತವೆ. ಅಂದಮೇಲೆ, ಕನಿಷ್ಠ ವೇತನದ ಖಾತರಿ ನೀಡುವ ಮನರೇಗಾದ 6(1) ನಿಯಮವನ್ನು ಕೈಬಿಟ್ಟು ಸೆಕ್ಷನ್ 6(2) ಅಳವಡಿಸಿಕೊಳ್ಳಬೇಕಿತ್ತು. ಆದರೆ ಕೇಂದ್ರ ಸರ್ಕಾರ ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಿದೆ. ಕನಿಷ್ಠ ವೇತನದ ನಿಯಮವನ್ನು ಕೈಬಿಟ್ಟು, ವಿಬಿ ಜಿ ರಾಂ ಜಿ ಕಾರ್ಮಿಕರಿಗೆ ಕೂಲಿ ದರವನ್ನು ತಾನೇ ನಿರ್ಧರಿಸುವ ಹಕ್ಕನ್ನು ಶಾಶ್ವತವಾಗಿ ಉಳಿಸಿಕೊಂಡಿದೆ.

ಇಲ್ಲಿ ಮತ್ತೊಂದು ಸಮಸ್ಯೆಯಿದೆ. ಹಳೆಯ ಮನರೇಗಾ ಕಾಯ್ದೆಯಲ್ಲಿ ಒಂದು ಅಬಾಧಿತಗೊಳಿಸುವ ನಿಯಮವಿತ್ತು (ಸೆಕ್ಷನ್ 6(1)). ಅದರ ಪ್ರಕಾರ 1948ರ ಕನಿಷ್ಠ ವೇತನಕಾಯ್ದೆಯಲ್ಲಿ ಏನೇ ಇದ್ದರು ಅದನ್ನು ನಿರ್ಲಕ್ಷಿಸುವುದಕ್ಕೆ ಕೇಂದ್ರಕ್ಕೆ ಅಧಿಕಾರವಿತ್ತು. ಅಂದರೆ, ಕನಿಷ್ಠ ವೇತನಕ್ಕಿಂತ ಕಡಿಮೆ ಕೂಲಿಯನ್ನು ಕೇಂದ್ರ ಕೊಡಬಹುದಿತ್ತು. ಆದರೆ ವಿಚಿತ್ರವೆಂದರೆ, ಹೊಸದಾಗಿ ಬಂದಿರುವ ಈ ವಿಬಿ-ಜಿ ರಾಮ್ ಜಿ' ಕಾಯ್ದೆಯಲ್ಲಿ ಅಂತಹ ಯಾವುದೇ ನಿಯಮವೂ ಇಲ್ಲ. ಹಾಗಿರುವಾಗ, ಕನಿಷ್ಠ ವೇತನಕ್ಕಿಂತ ಕಡಿಮೆ ವೇತನ ನೀಡುವುದನ್ನು ಸಮರ್ಥಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಈಗ ಸಾಧ್ಯವಾಗುವುದಿಲ್ಲ.

ಹಾಗಾಗಿ ಕೇಂದ್ರ ಒಂದು ಕೆಲಸ ಮಾಡಬಹುದಿತ್ತು. ಕೇಂದ್ರ ಸರ್ಕಾರವೇ ಎಲ್ಲಾ ರಾಜ್ಯಗಳಲ್ಲಿ ಕನಿಷ್ಠ ವೇತನಕ್ಕೆ ಸಮಾನವಾದ ಅಥವಾ ಅದಕ್ಕಿಂತ ಹೆಚ್ಚಿನ ಕೂಲಿಯನ್ನು ನಿಗದಿಪಡಿಸಬಹುದಿತ್ತು. ಇದರಿಂದ ಒಂದೇ ಕಲ್ಲಿನಲ್ಲಿ ಹಲವು ಹಕ್ಕಿಗಳನ್ನು ಹೊಡೆದಂತಾಗುತ್ತಿತ್ತು. ಅಂದರೆ, ಇದರಿಂದ ಕೂಲಿ ಪಾವತಿಗೆ ಕಾನೂನಿನ ಸಮರ್ಥನೆ ಸಿಗುತ್ತಿತ್ತು. ಜೊತೆಗೆ ನೈಜ ಕೂಲಿಯನ್ನು ಹೆಚ್ಚಿಸುವುದಕ್ಕೆ ಮತ್ತು ಕಾಲಕಾಲಕ್ಕೆ ಕೂಲಿ ದರವನ್ನು ಪರಿಷ್ಕರಿಸುವುದಕ್ಕೆ ಒಂದು ಸರಳವಾದ ದಾರಿಯನ್ನು ರೂಪಿಸಿದಂತಾಗುತ್ತಿತ್ತು.

ಕೇಂದ್ರ ಸರ್ಕಾರ ಕೂಲಿಯನ್ನು ಹೆಚ್ಚಿಸದೆ ಹಾಗೆಯೇ ಮುಂದುವರಿಸಿಕೊಂಡು ಹೋಗುವ ಸಾಧ್ಯತೆ ಹೆಚ್ಚಿಗೆಯಿದೆ. ಈ ಮೂಲಕ ವಿಬಿ ಜಿ ರಾಂ ಜಿ ಕಾಯ್ದೆಯಡಿ ಉದ್ಯೋಗಾವಕಾಶಗಳು ಕ್ರಮೇಣ ಅದರಷ್ಟಕ್ಕೆ ಕಡಿಮೆಯಾಗುತ್ತದೆ. ಅದು ಸರ್ಕಾರದ ಉದ್ದೇಶವೂ ಇರಬಹುದು. ಇದೇ ನಿಜವಾದರೆ, ಕೂಲಿಯನ್ನು ಸ್ಥಗಿತಗೊಳಿಸುವುದನ್ನು ಕೋರ್ಟ್‌ನಲ್ಲಿ ಪ್ರಶ್ನಿಸಲೇಬೇಕು. ಯಾಕೆಂದರೆ, ಅಭಾಧಿತಗೊಳಿಸುವ ನಿಯಮವನ್ನು ರದ್ದುಪಡಿಸಿರುವಈ ಸಂದರ್ಭದಲ್ಲಿ ಕನಿಷ್ಠ ವೇತನಕ್ಕಿಂದ ಒಂದು ರೂಪಾಯಿ ಕಡಿಮೆ ಕೊಟ್ಟರೂ ಅದು ಪಕ್ಕಾ ಕಾನೂನು ಬಾಹಿರ ಕೆಲಸವಾಗುತ್ತದೆ.

Jean Drèze is Visiting Professor at the Department of Economics, Ranchi University, Ranchi, Jharkhand

Orignally published in The Hindu

ಯುದ್ಧದ ಆರ್ಥಿಕ ಮತ್ತು ರಾಜಕೀಯ ತಲ್ಲಣಗಳು

ಜೋಸೆಫ್ ಇ. ಸ್ಟಿಗ್ಲಿಟ್ಜ್

ಅಲೆಕ್ಸಾಂಡರ್ ಪೋಪ್ ಅವರು ಹೇಳಿದ್ದು ಸರಿ. "ತಪ್ಪು ಮಾಡುವುದು ಮನುಷ್ಯ ಸಹಜ ಗುಣ." ಆದರೆ ಪ್ರತಿಯೊಬ್ಬರೂ ತಪ್ಪು ಮಾಡುತ್ತಾರೆ. ಆದರೆ ಕೆಲವರು ಇತರರಿಗಿಂತ ಹೆಚ್ಚು ತಪ್ಪುಗಳನ್ನು ಮಾಡುತ್ತಾರೆ. ಪ್ರಜಾಪ್ರಭುತ್ವ ಬೇಕಿರುವುದೇ ಈ ಕಾರಣಕ್ಕೆ. ಬಹುಜನರ ಮೇಲೆ ಪ್ರಭಾವ ಬೀರುವ ನಿರ್ಧಾರಗಳನ್ನು ಕುರಿತಂತೆ ಚರ್ಚೆಯಾಗಬೇಕು. ಮತ್ತು ಅವುಗಳನ್ನು ನಿಯಂತ್ರಿಸುವುದಕ್ಕೂ ಸಾಧ್ಯವಾಗಬೇಕು. ಸರ್ವಾಧಿಕಾರಿ ಆಡಳಿತದ ಇತಿಹಾಸವನ್ನು ನೋಡಿದರೆ, ಅಲ್ಲಿನ ನಾಯಕರು ಮಾಡಿದ ತಪ್ಪುಗಳಿಂದ ಕೇವಲ ಅವರಿಗಷ್ಟೇ ಅಲ್ಲ, ಅವರು ಆಳುತ್ತಿದ್ದ ಇಡೀ ಸಮಾಜಕ್ಕೇ ಅನಾಹುತವಾಗಿದೆ. ಮತ್ತೊಂದು ದೇಶದ ಮೇಲೆ ಯುದ್ಧ ಸಾರುವುದಕ್ಕಿಂತ ದೊಡ್ಡ ನಿರ್ಧಾರ ಇಲ್ಲ. ಆದರೆ ಅಮೆರಿಕವು ತನ್ನದೇ ಆದ ಪ್ರಜಾಪ್ರಭುತ್ವ ವ್ಯವಸ್ಥೆಯ ನಿಯಮಗಳನ್ನು ಗಾಳಿಗೆ ತೂರಿ, ಯಾವುದೇ ಚರ್ಚೆಯೂ ಇಲ್ಲದೆ ಈ ಕೆಲಸ ಮಾಡಿದೆ. ಅಮೆರಿಕದ ಸುಳ್ಳ, ಹಠಮಾರಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ, ಹಳೆಕಾಲದ ರಾಜರಂತೆ ಯಾವುದೇ ಶಾಸಕಾಂಗದ ನಿಯಂತ್ರಣವೂ ಇಲ್ಲ. ಸುತ್ತಾ ಕೇವಲ ಹೊಗಳುಭಟ್ಟರೆ ಸೇರಿಕೊಂಡಿದ್ದಾರೆ. ಅವರೆಲ್ಲಾ ಟ್ರಂಪ್‌ಗೆ ಏನು ಇಷ್ಟವೋ ಅದನ್ನಷ್ಟೇ ಹೇಳುತ್ತಿರುತ್ತಾರೆ. ಅದರ ದುರಂತ ಫಲಿತಾಂಶ ಈಗ ಸ್ಪಷ್ಟವಾಗಿದೆ: ಅಮೆರಿಕ ಮತ್ತೊಮ್ಮೆ ಮಧ್ಯಪ್ರಾಚ್ಯದ ಯುದ್ಧದಲ್ಲಿ ಸಿಲುಕಿದೆ. ಈ ಯುದ್ಧದಲ್ಲಿ ಸಾವಿರಾರು ಜನ ಅದರಲ್ಲೂ ಹೆಚ್ಚಿನವರು ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ. ಅದರಲ್ಲಿ ಹಲವಾರು ಯುದ್ಧಾಪರಾಧಗಳು ಸಂಭವಿಸಿರುವುದರಲ್ಲಿ ಅನುಮಾನವೇ ಇಲ್ಲ


ಇರಾನ್ ಜೊತೆಗಿನ ಈ ಯುದ್ಧ ಇನ್ನು ಎಷ್ಟು ದಿನ ಮುಂದುವರಿಯುತ್ತದೆ, ಇನ್ನೂ ಎಷ್ಟು ಯುದ್ಧಾಪರಾಧಗಳು ಸಂಭವಿಸುತ್ತವೆ, ಅಥವಾ ಇನ್ನೆಷ್ಟು ಮುಗ್ಧರು ಕೊಲ್ಲಲ್ಪಡುತ್ತಾರೆ ಎನ್ನುವುದು ಯಾರಿಗೂ ಗೊತ್ತಿಲ್ಲ. ಅಮೆರಿಕನ್ನರು ಮಾನವ ಹಕ್ಕುಗಳ ಉಲ್ಲಂಘನೆಗೆ ಮತ್ತು ನಿರಂತರವಾಗಿ ಹರಿದುಬರುತ್ತಿರುವ ಕೆಟ್ಟ ಸುದ್ದಿಗಳ ಪ್ರವಾಹಕ್ಕೆ ಎಷ್ಟು ಒಗ್ಗಿಹೋಗಿದ್ದಾರೆಂದರೆ ಅವರು ಪ್ರತಿಭಟಿಸುವ ಶಕ್ತಿಯನ್ನೇ ಕಳೆದುಕೊಂಡಂತೆ ತೋರುತ್ತದೆ. ವಿಶ್ವವಿದ್ಯಾಲಯಗಳಲ್ಲೂ ಭಯದ ವಾತಾವರಣವಿದೆ. ಎಲ್ಲಾ ದಬ್ಬಾಳಿಕೆಯ ಆಡಳಿತದಲ್ಲಿ ಆಗುವಂತೆ ಇಲ್ಲಿಯೂ ಆರ್ಥಿಕ ದಂಡನೆ ಅಥವಾ ವೀಸಾ ಕಳೆದುಕೊಳ್ಳುವ ಅಥವಾ ದೇಶದಿಂದ ಹೊರಹಾಕುವ ಅಥವಾ ಅಪರಾಧ ವಿಚಾರಣೆಯ ಭಯ ಅವರಿಸಿಕೊಂಡಿದೆ. ಸರ್ಕಾರದ ಉದ್ದೇಶವೂ ಅದೆ. ಪ್ರತಿಭಟನೆಯ ಸೊಲ್ಲು ಅಡಗಿ ಹೋಗಿದೆ.

ಟ್ರಂಪ್ ಅವರ ಈ 'ಸ್ವಯಂ ಪ್ರೇರಿತ ಯುದ್ಧ' ಅಮೆರಿಕ ಮತ್ತು ಜಾಗತಿಕ ಆರ್ಥಿಕತೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ, ಎಂದು ಅರ್ಥಶಾಸ್ತ್ರಜ್ಞನಾದ ನನ್ನನ್ನು ಅನೇಕರು ಕೇಳುತ್ತಿದ್ದಾರೆ. ಇದಕ್ಕೆ ಸರಳ ಉತ್ತರವೆಂದರೆ: ಯುದ್ಧವು ಸುದೀರ್ಘವಾದಷ್ಟೂ ಆರ್ಥಿಕ ಹಾನಿ ಹೆಚ್ಚಾಗಿರುತ್ತದೆ. ಯುದ್ಧ ತಕ್ಷಣ ನಿಂತರೂ ಪರಿಣಾಮ ತಕ್ಷಣ ನಿಂತು ಹೋಗುವುದಿಲ್ಲ. ಈಗಾಗಲೇ ಪ್ರಮುಖ ಪೂರೈಕೆ ಸರಪಳಿಗಳು ಅಸ್ತವ್ಯಸ್ತಗೊಂಡಿವೆ. ತೈಲ ಹಾಗೂ ಅನಿಲ ಉತ್ಪಾದನಾ ಸೌಲಭ್ಯಗಳು ನಾಶವಾಗಿವೆ. ಬಹುತೇಕ ಅಂದಾಜುಗಳು ಹೇಳುವಂತೆ ಇವುಗಳನ್ನು ಸರಿಪಡಿಸಲು ವರ್ಷಗಳೇ ಬೇಕಾಗಬಹುದು.

ಅಷ್ಟೇ ಅಲ್ಲದೆ, ತೊಂದರೆಯಾಗಿರುವುದು ಕೇವಲ ತೈಲ ಪೂರೈಕೆಗೆ ಮಾತ್ರವಲ್ಲ. 1970ರ ದಶಕದ ತೈಲ ನಿರ್ಬಂಧಗಳಿಗಿಂತ ಈಗಿನ ಪರಿಸ್ಥಿತಿ ಭಿನ್ನವಾಗಿದೆ; ಈಗ ಜಗತ್ತಿನ ಆಹಾರ ಪದ್ಧತಿಗೆ ಅಗತ್ಯವಾದ ಗೊಬ್ಬರ ಉತ್ಪಾದನೆಯೂ ಸಂಕಷ್ಟದಲ್ಲಿದೆ. ಕೋವಿಡ್ ಸಾಂಕ್ರಾಮಿಕ, ರಷ್ಯಾ–ಉಕ್ರೇನ್ ಯುದ್ಧ ಮತ್ತು ಟ್ರಂಪ್ ಅವರ ಸುಂಕದ ಸಮರದಿಂದಾಗಿ ಅಂತರರಾಷ್ಟ್ರೀಯ ವ್ಯಾಪಾರದ ನಿಯಮಗಳನ್ನಾಧರಿಸಿದ ವ್ಯವಸ್ಥೆಯೇ ಹಾಳಾಗಿವೆ. ಇವುಗಳ ಪರಿಣಾಮವಾಗಿ ಹಣದುಬ್ಬರ ಏರಿಕೆಯಾಗಿದೆ. ಮತ್ತು ಸಾಮಾನ್ಯ ಜನರಿಗೆ ಜೀವನ ನಡೆಸುವುದು ಕಷ್ಟವಾಗುತ್ತಿದೆ.

ಟ್ರಂಪ್ ಶ್ವೇತಭವನಕ್ಕೆ ಮರಳಿ ಬರುವ ಮೊದಲು, ಹಣದುಬ್ಬರ ಇಳಿಕೆಯ ಹಾದಿಯಲ್ಲಿತ್ತು. ಆದರೂ, ಸೆಂಟ್ರಲ್ ಬ್ಯಾಂಕಿನವರ ನೆಚ್ಚಿನ ಗುರಿಯಾಗಿದ್ದ ಶೇಕಡ 2ಕ್ಕಿಂತ ಅದು ಬಹಳ ಮೇಲಿತ್ತು. ಆದರೆ ಸುಂಕದಿಂದಾಗಿ ಮತ್ತೆ ಜಗತ್ತಿನಾದ್ಯಂತ ಬೆಲೆ ರಭಸದಿಂದಲೇ ಏರುವುದಕ್ಕೆ ಪ್ರಾರಂಭವಾಗಿದೆ. ಅಮೆರಿಕಾ ಸೇರಿದಂತೆ ಹಲವು ದೇಶಗಳಲ್ಲಿ ಈಗಾಗಲೇ ಜೀವನ ನಡೆಸುವುದು ದುಬಾರಿಯಾಗಿದೆ. ಅಮೇರಿಕೆಯ ನೀತಿಗಳಿಂದಾಗಿ ಬಿಕ್ಕಟ್ಟು ಇನ್ನಷ್ಟು ಹದಗೆಟ್ಟಿದೆ. ಅಪಾಯವೆಂದರೆ ಜಗತ್ತಿನ ಎಲ್ಲಾ ಕೇಂದ್ರ ಬ್ಯಾಂಕುಗಳು ಬಡ್ಡಿದರವನ್ನು ಹೆಚ್ಚಿಸುತ್ತವೆ ಅಥವಾ ಇಳಿಸುತ್ತಿರುವ ವೇಗವನ್ನು ಕಡಿಮೆ ಮಾಡುತ್ತಾರೆ. ಇದರಿಂದಾಗಿ ಬೆಲೆ ಏರಿಕೆಯ ಸಂಕಷ್ಟ ಮತ್ತಷ್ಟು ಹೆಚ್ಚಾಗಲಿದೆ. ಮನೆ ಖರೀದಿಸುವುದು ಅಥವಾ ಕ್ರೆಡಿಟ್ ಕಾರ್ಡ್ ಸಾಲ ತೀರಿಸುವುದು ಜನರಿಗೆ ಮೊದಲಿಗಿಂತ ಕಷ್ಟವಾಗುತ್ತದೆ. ಈಗಾಗಲೇ ಟ್ರಂಪ್ ಅವರ ವಿಚಿತ್ರವಾದ ವ್ಯಾಪಾರ ಮತ್ತು ವಲಸೆ ನೀತಿಗಳಿಂದ ನಲುಗಿಹೋಗಿರುವ ಅಮೆರಿಕಾದ ಆರ್ಥಿಕತೆ ಇನ್ನಷ್ಟು ಮಂದಗೊಳ್ಳುತ್ತದೆ.

ಒಂದು ವೇಳೆ ಕೃತಕ ಬುದ್ಧಿಮತ್ತೆ ಡೇಟಾ ಸೆಂಟರ್‌ಗಳ ಮೇಲೆ ವಿಪರೀತವಾಗಿ ಹಣ ಖರ್ಚು ಮಾಡದಿದ್ದಿದ್ದರೆ, ಅಮೆರಿಕಾದ ಆರ್ಥಿಕತೆ ತೀರಾ ಸತ್ವಹೀನವಾಗಿರುತ್ತಿತ್ತು. ಏಕೆಂದರೆ ಅಮೆರಿಕಾದ ಈಗಿನ ಆರ್ಥಿಕ ಬೆಳವಣಿಗೆಯಲ್ಲಿ ಮೂರನೇ ಒಂದು ಭಾಗದಷ್ಟು ಈ ಕೃತಕ ಬುದ್ಧಿಮತ್ತೆಯ ಕ್ಷೇತ್ರದಿಂದಲೇ ಬರುತ್ತಿರುವುದು. ಇದರ ಜೊತೆಗೆ, ಟ್ರಂಪ್ ಅವರು ಬಿಲಿಯನೇರ್‌ಗಳಿಗೆ ಮತ್ತು ದೊಡ್ಡ ಕಂಪನಿಗಳಿಗೆ ನೀಡಿರುವ ರಿಯಾಯಿತಿ ತೆರಿಗೆ ನೀತಿಗಳಿಂದಾಗಿ ಸರ್ಕಾರದ ವಿತ್ತೀಯ ಸಾಮರ್ಥ್ಯ ಕುಂಠಿತಗೊಂಡಿದೆ. ಇದರಿಂದಾಗಿ, ಟ್ರಂಪ್ ಸೃಷ್ಟಿಸಿರುವ ಗೊಂದಲಗಳನ್ನು ಅಥವಾ ಮುಂದೆ ಕೃತಕ ಬುದ್ಧಿಮತ್ತೆಯಿಂದ ಎದುರಾಗಬಹುದಾದ (ಉದ್ಯೋಗ ನಷ್ಟದಿಂದ ಹಿಡಿದು ತಂತ್ರಜ್ಞಾನ ಮಾರುಕಟ್ಟೆಯ ಕುಸಿತವರೆಗಿನ) ತೊಂದರೆಗಳನ್ನು ಎದುರಿಸಲು ಅಮೆರಿಕಾ ಸರ್ಕಾರದ ಬಳಿ ಈಗ ಹಣದ ಬಲ ಅಥವಾ





ಆರ್ಥಿಕ ಶಕ್ತಿ ಇಲ್ಲದಂತಾಗಿದೆ.

ಅಮೆರಿಕಾವು ತೈಲವನ್ನು ರಫ್ತು ಮಾಡುವುದರಿಂದ ದೇಶಕ್ಕೆ ಲಾಭವಾಗುತ್ತದೆ ಎಂಬ ಟ್ರಂಪ್ ಹೇಳಿಕೆ ನಿಜವಾಗಿ ಅರ್ಥಹೀನವಾದುದು. ನಿಜ, ಇದರಿಂದ ಎಕ್ಸಾನ್ ಅಂತಹ ದೊಡ್ಡ ಕಂಪನಿಗಳಿಗೆ ಲಾಭವಾಗುತ್ತದೆ. ಆದರೆ ಅಮೆರಿಕಾದ ಸಾಮಾನ್ಯ ಗ್ರಾಹಕರು ಮಾತ್ರ ಅಂತರರಾಷ್ಟ್ರೀಯ ಮಾರುಕಟ್ಟೆ ನಿಗದಿಪಡಿಸಿದ ಬೆಲೆಯನ್ನೇ ತೆರಬೇಕಾಗುತ್ತದೆ. ಇಂತಹ ಸಮಯದಲ್ಲಿ, ಸರ್ಕಾರವು ಈ ದೊಡ್ಡ ಕಂಪನಿಗಳ ಅತಿಯಾದ ಲಾಭದ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಬೇಕಿತ್ತು. ಆದರೆ, ಪಳೆಯುಳಿಕೆ ಇಂಧನ (ತೈಲ ಮತ್ತು ಗ್ಯಾಸ್) ಕಂಪನಿಗಳ ಸಂಪೂರ್ಣ ಹಿಡಿತದಲ್ಲಿರುವ ಈ ಸರ್ಕಾರದಿಂದ ಇಂತಹ ಕ್ರಮವನ್ನು ನಿರೀಕ್ಷಿಸಲು ಸಾಧ್ಯವೇ ಇಲ್ಲ.

ಟ್ರಂಪ್ ನಿರ್ಧಾರಗಳಿಂದಾಗಿ ಇಂದು ಇಂಧನದ ಬೆಲೆ ಏರಿದೆ ಮತ್ತು ಅಗತ್ಯ ವಸ್ತುಗಳ ಪೂರೈಕೆಯಲ್ಲಿ ಕೊರತೆಯುಂಟಾಗಿದೆ. ಇದರಿಂದ ಅಮೇರಿಕೆಯ ಹಳೆಯ ಮಿತ್ರ ರಾಷ್ಟ್ರಗಳಾದ ಯುರೋಪ್ ದೇಶಗಳೂ ನಲುಗಿಹೋಗಿವೆ. ಒಂದು ವೇಳೆ ಯುರೋಪಿನ ನಾಯಕರು ಗ್ಯಾಸ್ ಬೆಲೆಗೆ ತಕ್ಕಂತೆ ವಿದ್ಯುತ್ ದರವನ್ನು ನಿಗದಿಪಡಿಸಿದರೆ (ಉಕ್ರೇನ್ ಯುದ್ಧದ ಆರಂಭದಲ್ಲಿ ಮಾಡಿದಂತೆ), ಪರಿಸ್ಥಿತಿ ಮತ್ತಷ್ಟು ಹದಗೆಡಬಹುದು. ಆದರೆ, ಯುರೋಪ್ ತನ್ನ ರಕ್ಷಣೆ ಮತ್ತು ತಂತ್ರಜ್ಞಾನಕ್ಕಾಗಿ ಅಮೆರಿಕಾದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಶಕ್ತಿ ಬೆಳೆಸಿಕೊಂಡರೆ, ಈಗ ಮತ್ತು ಮುಂದಿನ ದಿನಗಳಲ್ಲಿ ತನ್ನ ಸ್ಥಾನವನ್ನು ಅದು ಗಟ್ಟಿಗೊಳಿಸಿಕೊಳ್ಳಬಹುದು.

ಒಟ್ಟಾರೆಯಾಗಿ ಹೇಳುವುದಾದರೆ, ಎರಡನೇ ಮಹಾಯುದ್ಧದ ನಂತರ ಕಟ್ಟಿದ ಶಾಂತಿ ಮತ್ತು ಸಹಕಾರದ ಜಗತ್ತು ಈಗ ಕಣ್ಮರೆಯಾಗುತ್ತಿದೆ. ಸ್ವತಃ ಅಮೇರಿಕ ಈ ವ್ಯವಸ್ಥೆಯನ್ನು ಹಾಳುಮಾಡುತ್ತಿದೆ. ಚೀನಾದ ಜೊತೆಗಿನ ಶೀತಲ ಸಮರ ಮತ್ತು ಅಮೆರಿಕಾದಲ್ಲಿ ಪ್ರಜಾಪ್ರಭುತ್ವ ದುರ್ಬಲಗೊಳ್ಳುತ್ತಿರುವುದು ಭವಿಷ್ಯದ ಬಗ್ಗೆ ಆತಂಕ ಮೂಡಿಸುತ್ತಿದೆ.

ಈ ಯುದ್ಧ ಮತ್ತು ಈಗಿನ ಆರ್ಥಿಕ ಸ್ಥಗಿತದುಬ್ಬರದ ಪರಿಸ್ಥಿತಿ (ಸ್ಟಾಗ್ಫ್ಲೇಷನ್–ಬೆಲೆ ಏರಿಕೆ ಹಾಗೂ ನಿಧಾನಗತಿಯ ಬೆಳವಣಿಗೆ ಒಟ್ಟಿಗಿರುವ ಸ್ಥಿತಿ) ಎಷ್ಟು ದಿನ ಮುಂದುವರಿಯತ್ತದೊ ತಿಳಿಯದು. ಆದರೆ, ಅದರ ಪರಿಣಾಮಗಳು ಮಾತ್ರ ದೀರ್ಘಕಾಲದವರೆಗೆ ಕಾಡುತ್ತವೆ. ಸೌರಶಕ್ತಿ ಮತ್ತು ವಾಯುಶಕ್ತಿಯಂತಹ ನೈಸರ್ಗಿಕ ಶಕ್ತಿಗಳ ಪೂರೈಕೆಯಲ್ಲಿ ಏರುಪೇರಾಗುತ್ತಿರುತ್ತವೆ ಅನ್ನುವುದು ನಿಜ. ಅದರೆ ಪೆಟ್ರೋಲ್–ಡೀಸೆಲ್‌ಗಾಗಿ ಟ್ರಂಪ್ ಮತ್ತು ರಷ್ಯಾದ ಅಧ್ಯಕ್ಷ ಪುಟಿನ್ ಅವರಂತಹ ಅನಿಶ್ಚಿತ ಮನಸ್ಥಿತಿಯ ಸರ್ವಾಧಿಕಾರಿಗಳ ಮರ್ಜಿಗೆ ಕಾಯುವ ಬದಲು, ಸೌರ ಹಾಗೂ ವಾಯುಶಕ್ತಿಯನ್ನು ನಿಭಾಯಿಸುವುದು ಹೆಚ್ಚು ಸುಲಭ. ಇದನ್ನು ಜಗತ್ತು ಅರ್ಥಮಾಡಿಕೊಂಡರೆ ಒಳ್ಳೆಯದು.

ಒಂದು ವೇಳೆ ಟ್ರಂಪ್ ಅವರ ಈ ನಿರ್ಧಾರಗಳಿಂದಾಗಿ ಜಗತ್ತು ಪರಿಸರಸ್ನೇಹಿ ಇಂಧನದ ಕಡೆಗಿನ ಪರಿವರ್ತನೆಯನ್ನು ತ್ವರಿತಗೊಳಿಸಿದರೆ, ಅದೇ ಇಂದು ಆವರಿಸಿಕೊಂಡಿರುವ ಕತ್ತಲಲ್ಲಿ ಕಾಣುವ ಒಂದು ಆಶಾಕಿರಣ.

ಒಟ್ಟಾರೆಯಾಗಿ ಹೇಳುವುದಾದರೆ, ಎರಡನೇ ಮಹಾಯುದ್ಧದ ನಂತರ ನಮ್ಮ ಹಿರಿಯರು ಶಾಂತಿಯುತ ಮತ್ತು ಗಡಿಗಳ ಹಂಗಿಲ್ಲದ ಜಗತ್ತನ್ನು ಕಟ್ಟಲು ಬಯಸಿದ್ದರು. ಆದರೆ ಈಗ ಆ ಆಸೆ ಬಹುತೇಕ ಮಣ್ಣುಪಾಲಾದಂತಾಗಿದೆ. ಯಾವ ಅಮೆರಿಕಾ ಅಂದು ಈ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿತ್ತೋ, ಅದೇ ಅಮೆರಿಕಾ ಈಗ ಟ್ರಂಪ್ ನಾಯಕತ್ವದಲ್ಲಿ ಅದನ್ನು ನಾಶಮಾಡುತ್ತಿದೆ. ಚೀನಾದ ಜೊತೆಗಿನ ಹೊಸ ಶೀತಲ ಸಮರ ಮತ್ತು ಜಾಗತಿಕ ಪೂರೈಕೆಯ ವ್ಯವಸ್ಥೆಯಲ್ಲಿ ಸುಧಾರಣೆ ಕಾಣದಿರುವುದನ್ನು ನೋಡಿದರೆ ಒಳ್ಳೆಯ ದಿನಗಳು ಬರುತ್ತವೆ ಎಂಬ ನಂಬಿಕೆ ಕಡಿಮೆ ಆಗುತ್ತಿದೆ. ಅಮೆರಿಕಾದಲ್ಲಿ ಪ್ರಜಾಪ್ರಭುತ್ವವೇ ದುರ್ಬಲಗೊಂಡಿರುವುದರಿಂದ, ಅಲ್ಲಿನ ನಾಯಕರು ಮಾಡುತ್ತಿರುವ ತಪ್ಪುಗಳು ಮತ್ತು ಅವುಗಳ ಕೆಟ್ಟ ಪರಿಣಾಮಗಳು ಒಂದರ ಮೇಲೊಂದರಂತೆ ಬೆಳೆಯುತ್ತಲೇ ಇವೆ.

[Joseph E. Stiglitz, a Nobel laureate in economics, is a former chief economist of the World Bank, a former chair of the US President's Council of Economic Advisers, University Professor at Columbia University, and the author, most recently, of 'The Road to Freedom: Economics and the Good Society' (W. W. Norton & Company, Allen Lane, 2024).]

ಆರ್ಥಿಕ ಬೆಳವಣಿಗೆ: ಟ್ರಂಪೋನಾಮಿಕ್ಸ್ ವೈಫಲ್ಯ

– ಸೈಮನ್ ಜಾನ್ಸನ್



ಡೊನಾಲ್ಡ್ ಟ್ರಂಪ್ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದು ಒಂದು ವರ್ಷಕ್ಕೂ ಹೆಚ್ಚು ಕಾಲವಾಗಿದೆ. ಇನ್ನೂ ವೇಗದ ಆರ್ಥಿಕ ಬೆಳವಣಿಗೆಯನ್ನು ಸಾಧಿಸುತ್ತೇನೆ ಇತ್ಯಾದಿ ಸುವರ್ಣಯುಗದ ಭರವಸೆ ನೀಡುತ್ತಲೇ ಇದ್ದಾರೆ. ಆದರೆ ಈ ಬಾರಿ, ಅವರ ತಂಡ ವಾಸ್ತವ ಆರ್ಥಿಕ ಅಂಕಿಅಂಶಗಳ ಬಗ್ಗೆ ಸ್ವಲ್ಪ ಹೆಚ್ಚು ಎಚ್ಚರಿಕೆಯಿಂದ ಮಾತನಾಡುತ್ತಿದೆ.

ಹಿಂತಿರುಗಿ ನೋಡಿದರೆ, 2018ರಲ್ಲಿ ಆರ್ಥಿಕ ಬೆಳವಣಿಗೆಯು ಸಾಕಷ್ಟು ಹೆಚ್ಚಿಗೆ ಇತ್ತು (ಸುಮಾರು 3%). ಇದಕ್ಕೆ 2017ರ ಡಿಸೆಂಬರ್‌ನಲ್ಲಿ ಶ್ರೀಮಂತರಿಗೆ ಅನುಕೂಲ ಮಾಡಿಕೊಡುವುದಕ್ಕೆ ಜಾರಿಗೆ ತಂದ ತೆರಿಗೆ ಕಡಿತದ ಕಾನೂನು ಭಾಗಶಃ ಕಾರಣ. ಆದರೆ 2019ರ ಹೊತ್ತಿಗೆ ಆರ್ಥಿಕ ಬೆಳವಣಿಗೆ 2.3%ಕ್ಕೆ ಕುಸಿಯಿತು. ನಂತರ ಬಂತು ಕೋವಿಡ್–19. 2020ರ ಆರ್ಥಿಕತೆಯನ್ನು ಸಂಪೂರ್ಣವಾಗಿ ಹದಗೆಡಿಸಿತು. ಸಾಂಕ್ರಾಮಿಕದ ವರ್ಷವನ್ನು ಬಿಟ್ಟು ನೋಡಿದರೂ, ಮೊದಲ ಟ್ರಂಪ್ ಆಡಳಿತದ ಮೊದಲ ಮೂರು ವರ್ಷಗಳ ಸರಾಸರಿ ಬೆಳವಣಿಗೆ ಕೇವಲ 2.5% ಇತ್ತು. ಇದು ಒಬಾಮಾ ಆಡಳಿತದ ಕೊನೆಯ ಮೂರು ವರ್ಷಗಳ ಬೆಳವಣಿಗೆಗೆ ಹೋಲಿಸಿದರೆ ಸ್ವಲ್ಪ ಹೆಚ್ಚು (2.3%). ಆದರೆ ಅದು ಆಗಿನ ಹಣಕಾಸು ಸಚಿವ ಸ್ಟೀವನ್ ಮ್ನುಚಿನ್ ಜಿಡಿಪಿ ಬೆಳವಣಿಗೆಯ ಬಗ್ಗೆ ನೀಡಿದ್ದ ಅಂದಾಜುಗಳಿಗಿಂತ ಬಹಳ ದೂರ ಇತ್ತು.

ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಕೋವಿಡ್ ಬರುವ ಮೊದಲು ನಿರುದ್ಯೋಗದ ಮಟ್ಟ ಕಡಿಮೆಯಾಗಿತ್ತು ಮತ್ತು ಬಡತನವೂ ತಗ್ಗಿತ್ತು. ಒಬಾಮಾ ಅವರ ಎರಡನೇ ಅವಧಿಯ ಕೊನೆಯಲ್ಲಿ ಈ ಪ್ರವೃತ್ತಿ ಪ್ರಾರಂಭವಾಗಿತ್ತು. ಅದೇ ನಂತರವೂ ಮುಂದುವರಿದಿತ್ತು. ಆದರೆ, ಸಂಪತ್ತಿನ ಅಸಮಾನತೆ ಹೆಚ್ಚುತ್ತಾ ಹೋಯಿತು. ಆಗಿನ ತೆರಿಗೆ ಕಡಿತ ಈ ಅಸಮಾನತೆ ಹೆಚ್ಚಳಕ್ಕೆ ನೆರವಾಯಿತು. ಅಲ್ಲದೆ, ಟ್ರಂಪ್ ಅವರ ಮೊದಲ ಆಡಳಿತದ ಅವಧಿಯಲ್ಲಿ ಬಜೆಟ್ ಕೊರತೆ ಮತ್ತು ಸರ್ಕಾರದ ಸಾಲದ ಪ್ರಮಾಣವೂ ಗಣನೀಯವಾಗಿ ಹೆಚ್ಚಾಯಿತು.

ಈಗ ನಾವು ಮತ್ತೆ 2026ಕ್ಕೆ ಬರೋಣ. ಟ್ರಂಪ್ ಅವರ ಮೊದಲ ಅವಧಿಯಲ್ಲಿ ಹಣಕಾಸು ವಲಯದ ಮೇಲಿನ ನಿಯಂತ್ರಣಗಳನ್ನು ತೆಗೆದುಹಾಕುವ ಪ್ರಕ್ರಿಯೆ ಅಷ್ಟೇನೂ ತೀವ್ರವಾಗಿರಲಿಲ್ಲ. ಆದರೆ ಜನಪ್ರಿಯತೆ ಕಡಿಮೆಯಾಗುವುದಕ್ಕೆ ಪ್ರಾರಂಭವಾಗಿರುವುದರಿಂದ, ಈಗ ಎರಡನೆ ಅವಧಿಯಲ್ಲಿ ಟ್ರಂಪ್ ಸರ್ಕಾರವು ಹಣಕಾಸು ನಿಯಮಗಳನ್ನು ಸಡಿಲಗೊಳಿಸಲು ಹೆಚ್ಚು ಒತ್ತು ನೀಡುವ ಸಾಧ್ಯತೆಯಿದೆ. ಅದರ ಜೊತೆಗೆ 'ಸ್ಟೇಬಲ್‌ಕಾಯಿನ್' ಮತ್ತು ಇತರ ಕ್ರಿಪ್ಟೋಕರೆನ್ಸಿಗಳ ಬಳಕೆಯನ್ನು ಪ್ರೋತ್ಸಾಹಿಸುತ್ತಿದೆ. ಅಲ್ಲದೆ, ತಮ್ಮ ಬಂಡವಾಳದ ಮಿತಿಗಿಂತ ಹೆಚ್ಚಿನ ರಿಸ್ಕ್ ತೆಗೆದುಕೊಳ್ಳುವಂತೆ ಬ್ಯಾಂಕುಗಳನ್ನು ಒತ್ತಾಯಿಸಲಾಗುತ್ತಿದೆ. ಇದರ ಪರಿಣಾಮವಾಗಿ ಆರ್ಥಿಕ ಬೆಳವಣಿಗೆಯು ಸ್ವಲ್ಪ ಮಟ್ಟಿಗೆ ಹೆಚ್ಚಾಗಬಹುದು (2025ರ ತೆರಿಗೆ ಕಡಿತವು ಇದಕ್ಕೆ ನೆರವಾಗಬಹುದು). ಆದರೆ, ಇದರಿಂದ ಅಮೆರಿಕದ ಒಟ್ಟಾರೆ ಆರ್ಥಿಕ ವ್ಯವಸ್ಥೆಗೆ ಅಪಾಯವೂ ಗಣನೀಯವಾಗಿ ಹೆಚ್ಚುವ ಸಾಧ್ಯತೆಯಿದೆ.

ಸೈಮನ್ ಜಾನ್ಸನ್, ಫೆಬ್ರುವರಿ 2026

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಅವರ ಹಣಕಾಸು ಕಾರ್ಯದರ್ಶಿ ಸ್ಟೀವನ್ ಮ್ನುಚಿನ್, ದೊಡ್ಡ ಆರ್ಥಿಕ ಪವಾಡ ಸಾಧಿಸುವ ಭರವಸೆ ನೀಡಿದ್ದರು. ಸಂಯುಕ್ತ ರಾಷ್ಟ್ರಗಳು ತಮ್ಮ ನೀತಿಗಳನ್ನು ಅಳವಡಿಸಿಕೊಂಡಾಗ ವಾರ್ಷಿಕ ಆರ್ಥಿಕ ಪ್ರಗತಿ ನಿರಂತವಾಗಿ ಶೇಕಡ ಮೂರು ಅಥವಾ ನಾಲ್ಕಕ್ಕಿಂತಲೂ ಹೆಚ್ಚಿರುತ್ತದೆ ಎಂದು ಅವರು ವಾದಿಸಿದ್ದರು. ಅಧಿಕಾರಕ್ಕೆ ಬಂದು ಒಂದು ವರ್ಷವಾಯಿತು, ತಮಗೆ ಬೇಕಾದಂತೆ ನಿಯಮಗಳನ್ನು ಸಡಿಲಗೊಳಿಸಿದರು ಮತ್ತು ತೆರಿಗೆಯನ್ನೂ ಕಡಿಮೆ ಮಾಡಿದರು. ಹಾಗಾದರೆ, ಟ್ರಂಪ್ ತಂಡದ ಸಾಧನೆ ಏನು?

ನಿಜ, ನಾವಿನ್ನೂ ಆರಂಭದ ದಿನಗಳಲ್ಲಿದ್ದೇವೆ. ಆದರೆ ಈವರೆಗಿನ ಫಲಿತಾಂಶ ತೀರಾ ನಿರಾಶದಾಯಕವಾಗಿದೆ. ಟ್ರಂಪ್ ತಮಗೆ ಬೇಕಾದ ನೀತಿಗಳನ್ನೇ ಹಠ ಹಿಡಿದು ಮುಂದುವರಿಸಿದರೆ, ಮುಂದಿನ ಮಧ್ಯಮ ಅವಧಿಯಲ್ಲಿ ಅಮೆರಿಕದ ನಿರಂತರ ಆರ್ಥಿಕ ಬೆಳವಣಿಗೆಯ ಅವಕಾಶಗಳಿಗೆ ಧಕ್ಕೆಯಾಗಬಹುದು.

2017ರ ಅಮೆರಿಕದ ಆರ್ಥಿಕ ಸಾಧನೆಗೆ ತನ್ನ ನೀತಿಗಳೇ ನೇರವಾಗಿ ಕಾರಣ ಎಂದು ಟ್ರಂಪ್ ಪದೇ ಪದೇ ವಾದಿಸುತ್ತಾ ಬಂದಿದ್ದಾರೆ. ಅದರಲ್ಲೂ ಮೂರನೇ ತ್ರೈಮಾಸಿಕದ ಬೆಳವಣಿಗೆಯ ದರವು ಶೇ. 3.3 ರಷ್ಟಿದೆ ಎಂದು ಅವರು ಬಹಳ ಪ್ರಚಾರ ಮಾಡಿದ್ದರು. ನಂತರದ ಪರಿಷ್ಕರಣದಲ್ಲಿ ಅದನ್ನು ಶೇ. 3.2ಕ್ಕೆ ಇಳಿಸಲಾಯಿತು. ನಾಲ್ಕನೇ ತ್ರೈಮಾಸಿಕದಲ್ಲಿ ಈ ಬೆಳವಣಿಗೆಯ ದರ ಶೇ. 2.6ಕ್ಕೆ ಕುಸಿಯಿತು. ಆರಂಭಿಕ ಅಂದಾಜುಗಳ ಪ್ರಕಾರ, ಇಡೀ ವರ್ಷದ ಒಟ್ಟಾರೆ ಬೆಳವಣಿಗೆಯ ದರ ಶೇ. 2.3ನ್ನು ಮೀರುವುದಿಲ್ಲ. ಇದು ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರ ಅವಧಿಯಲ್ಲಿ ದಾಖಲಾದ 2014ರ (ಶೇ. 2.6) ಮತ್ತು 2015ರ (ಶೇ. 2.9) ಪ್ರಗತಿಗಿಂತಲೂ ಕಡಿಮೆಯಾಗಿದೆ.

ನಿಜವೇನೆಂದರೆ, ಒಬಾಮಾ ಅವರ ಅವಧಿಯಲ್ಲಿ ತ್ರೈಮಾಸಿಕ ಬೆಳವಣಿಗೆಯ ದರವು ಏಳು ಬಾರಿ ಶೇ. 3ಕ್ಕಿಂತ ಹೆಚ್ಚಾಗಿತ್ತು ಮತ್ತು ಎರಡು ಬಾರಿ ಶೇ. 4.6ರ ಮಟ್ಟವನ್ನೂ ಕೂಡ ತಲುಪಿತ್ತು. 2009ರ ಮೂರನೇ ತ್ರೈಮಾಸಿಕದಿಂದ ನೋಡಿದರೆ, ಕೇವಲ ಎರಡು ಬಾರಿ ಬಿಟ್ಟು ಉಳಿದೆಲ್ಲಾ ಸಮಯದಲ್ಲಿ ಆರ್ಥಿಕ ಪ್ರಗತಿ ಧನಾತ್ಮಕವಾಗಿಯೇ [positive] ಇತ್ತು. ಒಬಾಮಾ ಕಾಲದಲ್ಲಿ ಪ್ರಗತಿ ಆಗಿದ್ದು ಕೇವಲ ಅಂಕಿ–ಅಂಶಗಳಲ್ಲಿ ಮಾತ್ರವಲ್ಲ. ಉದ್ಯೋಗ ಸೃಷ್ಟಿಯೂ ಗಣನೀಯವಾಗಿತ್ತು. ಅವರ ಎಂಟು ವರ್ಷಗಳ ಅಧಿಕಾರದಲ್ಲಿ ಏಳು ವರ್ಷಗಳ ಕಾಲ ಪ್ರತಿವರ್ಷ 20 ಲಕ್ಷಕ್ಕೂ ಹೆಚ್ಚು ಹೊಸ ಉದ್ಯೋಗಗಳು ಸೃಷ್ಟಿಯಾಗಿದ್ದವು. ಇದರ ಜೊತೆಗೆ ನಿರುದ್ಯೋಗ ದರ ಕಡಿಮೆಯಾಗಿತ್ತು. ಮತ್ತು ಕೆಲಸಕ್ಕೆ ಸೇರುವ ಜನರ ಸಂಖ್ಯೆಯೂ ಹೆಚ್ಚಿತ್ತು..

ಪವಾಡ ಮಾಡುವುದಿರಲಿ, ಆರ್ಥಿಕ ಬೆಳವಣಿಗೆಯಲ್ಲಿ ಯಾವುದೇ ಸುಧಾರಣೆಯನ್ನು ತರುವುದಕ್ಕೆ ಕೂಡ ಟ್ರಂಪ್ ಅವರಿಗೆ ಸಾಧ್ಯವಾಗಿಲ್ಲ. ಇದು ಏಕೆ ಹೀಗಾಯಿತು ಅಂದರೆ, ಟ್ರಂಪ್ ಅಧಿಕಾರಕ್ಕೆ ಬಂದ ಮೇಲೆ ವಾಸ್ತವದಲ್ಲಿ ಅಂತಹ ದೊಡ್ಡ ಕೆಲಸಗಳನ್ನೇನೂ ಮಾಡಿಲ್ಲ. ಇದು ಸ್ಪಷ್ಟವಾಗಿ ತಿಳಿಯುತ್ತದೆ. ತಾನು ನಿಯಮಗಳನ್ನು ಸಡಿಲಗೊಳಿಸಿದ್ದೇನೆ ಎಂದು ಅವರು ಎಷ್ಟೇ ಬಡಾಯಿ ಕೊಚ್ಚಿಕೊಂಡರೂ, ದೇಶದ ಬೃಹತ್ ಆರ್ಥಿಕತೆಗೆ ಹೋಲಿಸಿದರೆ ಅವರು ರದ್ದುಗೊಳಿಸಿದ ನಿಯಮಗಳಿಂದಾದ ಲಾಭ ತೀರಾ ನಗಣ್ಯವಾಗಿದೆ.

ಇದಲ್ಲದೆ, 2017ರ ಕೊನೆಯಲ್ಲಿ ಟ್ರಂಪ್ ಜಾರಿಗೆ ತಂದ ತೆರಿಗೆ ಕಡಿತದ ಕಾನೂನಿನಿಂದ ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಪ್ರಯೋಜನವೇನೂ ಆಗಿಲ್ಲ. ಈ ತೆರಿಗೆ ಯೋಜನೆಯು ಮುಖ್ಯವಾಗಿ ಮಧ್ಯಮ ವರ್ಗದ ಕುಟುಂಬಗಳಿಂದ ಹಣವನ್ನು ಕಿತ್ತುಕೊಂಡು ಅತ್ಯಂತ ಶ್ರೀಮಂತ ಅಮೆರಿಕನ್ನರಿಗೆ ಹಂಚುವ ಯೋಜನೆಯಾಗಿದೆ. ಅದರಲ್ಲೂ ವಿಶೇಷವಾಗಿ ನ್ಯೂಯಾರ್ಕ್ ಮತ್ತು ಕ್ಯಾಲಿಫೋರ್ನಿಯಾದಂತಹ (ಅತಿ ಹೆಚ್ಚು ತೆರಿಗೆ ಇರುವ ಮತ್ತು ಡೆಮಾಕ್ರಟಿಕ್ ಪಕ್ಷದ ಪರವಾಗಿರುವ) ರಾಜ್ಯಗಳ ಮಧ್ಯಮ ವರ್ಗದವರ ಮೇಲೆ ಇದರ ಹೊರೆ ಹೆಚ್ಚಿದೆ.

ನ್ಯೂಯಾರ್ಕ್‌ನಲ್ಲಿ ಈಗಾಗಲೇ ದೊಡ್ಡ ದೊಡ್ಡ ಕಟ್ಟಡಗಳು ಇತ್ಯಾದಿ ಆಸ್ತಿಗಳನ್ನು ಹೊಂದಿರುವ ಶ್ರೀಮಂತರಿಗೆ ಇದರಿಂದ ಲಾಭವಾಗಬಹುದು. ಆದರೆ ಹೊಸದಾಗಿ ಕಂಪನಿಗಳನ್ನು ಪ್ರಾರಂಭಿಸಲು, ಹೊಸ ವಸ್ತುಗಳನ್ನು ತಯಾರಿಸಲು ಅಥವಾ ಹೊಸ ಕಾರ್ಖಾನೆ ಮತ್ತು ಯಂತ್ರೋಪಕರಣಗಳಲ್ಲಿ ಹಣ ಹೂಡಿಕೆ ಮಾಡುವುದಕ್ಕೆ ಈ ಕಾನೂನಿಂದ ಅಂತಹ ಉತ್ತೇಜನವೇನೂ ಸಿಗುವುದಿಲ್ಲ. ಇನ್ನೂ ಮುಖ್ಯವಾಗಿ, ಈ ಕಾನೂನಿನಿಂದ ಸಂಶೋಧನೆ ಮತ್ತು ಅಭಿವೃದ್ಧಿ [Research & Development] ಯೋಜನೆಗಳ ಮೇಲೆ ದುಷ್ಪರಿಣಾಮ ಬೀರಬಹುದು. ಇದನ್ನು ಇತ್ತೀಚೆಗೆ ನಾನು ಚರ್ಚೆಯೊಂದರಲ್ಲಿ ಸೂಚಿಸಿದ್ದೆ. ಅಮೆರಿಕದ ದೀರ್ಘಕಾಲದ ಪ್ರಗತಿಗೆ ಸಂಶೋಧನೆ ಮತ್ತು ಅಭಿವೃದ್ಧಿ ಅತಿ ಮುಖ್ಯವಾದ ಚಾಲಕ ಶಕ್ತಿಯಾಗಿದೆ.

2017ರ ಅಂಕಿ–ಅಂಶಗಳನ್ನು ಗಮನಿಸಿದರೆ, ಟ್ರಂಪ್ ಅವಧಿಯಲ್ಲಿ ಉದ್ದಿಮೆಗಳ ಹೂಡಿಕೆ ಹೆಚ್ಚಾದ ಯಾವುದೇ ಲಕ್ಷಣಗಳೂ ಕಾಣುವುದಿಲ್ಲ. ಹೌದು, ಈ ಅಂಕಿ–ಅಂಶಗಳಲ್ಲಿ ಏರಿಳಿತಗಳು ಸಹಜ. ಏಕೆಂದರೆ ಕಾಲಕಾಲಕ್ಕೆ ನಡೆಯುವ ಬದಲಾವಣೆಗಳಿಗೆ ತಕ್ಕಂತೆ ಅವು ಏರುತ್ತಾ ಅಥವಾ ಇಳಿಯುತ್ತಾ ಹೋಗುತ್ತವೆ. ಆದರೂ, ಈ ವಿಷಯದಲ್ಲೂ ಒಬಾಮಾ ಅವರು ತಮ್ಮ ಎರಡು ಅವಧಿಗಳಲ್ಲಿ ಅತ್ಯುತ್ತಮ ಸಾಧನೆ ಮಾಡುವ ಮೂಲಕ ಒಂದು ಉನ್ನತ ಮಟ್ಟದ ಗುರಿಯನ್ನು ಗೊತ್ತು ಮಾಡಿದ್ದರು.

ಟ್ರಂಪ್ ಅವರು ವ್ಯಾಪಾರಕ್ಕೆ ಅಡ್ಡಿಪಡಿಸುವುದಾಗಿ ಚುನಾವಣೆಯ ಸಮಯದಲ್ಲಿ ಹೇಳಿದ್ದರು. ಆದರೆ ಸಧ್ಯ ಅದ್ಯಾವುದನ್ನು ಮಾಡಲಿಲ್ಲ. ಅದೇ ಅವರ ಮೊದಲ ವರ್ಷದ ಅಧಿಕಾರಾವಧಿಯ ಆರ್ಥಿಕ ನೀತಿಗೆ ಸಂಬಂಧಿಸಿದಂತೆ ಅವರು ಮಾಡಿದ ಅತ್ಯಂತ ಒಳ್ಳೆಯ ಕೆಲಸ. ಉತ್ತರ ಅಮೆರಿಕದ ಮುಕ್ತ ವ್ಯಾಪಾರ ಒಪ್ಪಂದ [NAFTA] ಹಾಗೆಯೇ ಮುಂದುವರಿದಿದೆ ಮತ್ತು ಚೀನಾ ಸೇರಿದಂತೆ ಇತರ ಪ್ರಮುಖ ದೇಶಗಳ ಜೊತೆಗಿನ ವ್ಯಾಪಾರ ಸಂಬಂಧಗಳೂ ಮೊದಲಿನಂತೆಯೇ ಇವೆ. ಜನವರಿಯಲ್ಲಿ ಸರ್ಕಾರವು ಸೋಲಾರ್ ಪ್ಯಾನಲ್ ಮತ್ತು ವಾಷಿಂಗ್ ಮೆಷಿನ್‌ಗಳ ಮೇಲೆ ಆಮದು ಸುಂಕವನ್ನು [tariffs] ಹೇರಿತು, ನಿಜ. ಆದರೆ ದೇಶದ ಬೃಹತ್ ಆರ್ಥಿಕತೆಗೆ ಹೋಲಿಸಿದರೆ ಅದು ತೀರಾ ಕಡಿಮೆ. ಇದರಿಂದಾಗಿ, ಟ್ರಂಪ್ ಅವರ ಸ್ವಯಂಕೃತ ಅಪರಾಧದಿಂದ ಸಂಭವಿಸಬಹುದಾಗಿದ್ದ ದೊಡ್ಡ ಆರ್ಥಿಕ ಕುಸಿತ [recession] ತಪ್ಪಿದೆ. ಇಂತಹ ಕೆಟ್ಟ ಸ್ಥಿತಿ ಬಾರದಂತೆ ತಡೆದಿದ್ದಕ್ಕಾಗಿ ಅವರ ತಂಡವನ್ನು ನಾವು ಅಭಿನಂದಿಸಲೇಬೇಕು.

ಆದರೆ ಈಗ ನಾವು, ಟ್ರಂಪ್ ಅವರಿಂದಾಗಿ ಅಪಾಯಗಳು ಹೆಚ್ಚಾಗುವ ಹಂತದಲ್ಲಿದ್ದೇವೆ. ಬಾಲ್ಯದಲ್ಲಿ ವಲಸೆ ಬಂದವರಿಗೆ ರಕ್ಷಣೆ ನೀಡುತ್ತಿದ್ದ [DACA] ಕಾರ್ಯಕ್ರಮವನ್ನು ಅವರು ಕಳೆದ ವರ್ಷ ರದ್ದುಗೊಳಿಸಿದ್ದಾರೆ. ಆ ಮೂಲಕ, ಬಾಲ್ಯದಲ್ಲಿ ಕಾನೂನುಬಾಹಿರವಾಗಿ ಅಮೆರಿಕಕ್ಕೆ ಬಂದಿದ್ದ ಸುಮಾರು 8 ಲಕ್ಷ ಯುವಕರ ಭವಿಷ್ಯವನ್ನು ಅಪಾಯಕ್ಕೆ ದೂಡಿದ್ದಾರೆ. ಈಗ ಅವರೆಲ್ಲಾ ದೇಶದಿಂದ ಹೊರದೂಡಲ್ಪಡಬಹುದು ಎಂಬ ಭೀತಿಯಲ್ಲಿದ್ದಾರೆ.

ಇವರೆಲ್ಲಾ ಅತ್ಯಂತ ಉತ್ಪಾದಕಾ ಜನ. ಅಮೇರಿಕೆಯ ಆರ್ಥಿಕತೆಗೆ ಅಪಾರ ಕೊಡುಗೆ ನೀಡಿದ್ದಾರೆ. ಇವರನ್ನು ಹೊರಹಾಕುವ ಟ್ರಂಪ್ ಅವರ ಈ ನಿರ್ಧಾರವು ಕೇವಲ ಮಾನವೀಯ ನೆಲೆಯಲ್ಲಿ ಮಾತ್ರವಲ್ಲ, ಆರ್ಥಿಕವಾಗಿಯೂ ಭೀಕರ ಪರಿಣಾಮಗಳನ್ನು ಬೀರಬಹುದು. ಇದರ ಜೊತೆಗೆ ಟ್ರಂಪ್ ಮತ್ತು ಅವರ ಬೆಂಬಲಿಗರು ಕಾನೂನುಬದ್ಧ ವಲಸೆಯನ್ನೂ ದೊಡ್ಡ ಮಟ್ಟದಲ್ಲಿ ಕಡಿತಗೊಳಿಸಲು ಮುಂದಾಗಿದ್ದಾರೆ. ಇದು ಭವಿಷ್ಯದ ಅಮೆರಿಕದ ಮಧ್ಯಮ ಅವಧಿಯ ಬೆಳವಣಿಗೆಯನ್ನು ಕುಂಠಿತಗೊಳಿಸಬಹುದು. ಆರ್ಥಿಕ ಪ್ರಗತಿ ಗಣನೀಯವಾಗಿ ಕಡಿಮೆಯಾಗಬಹುದು.

ಹಾಗೆಯೇ, [NAFTA] ಒಪ್ಪಂದವನ್ನು ರದ್ದುಗೊಳಿಸುವ ಬೆದರಿಕೆಯನ್ನು ಟ್ರಂಪ್ ಇನ್ನೂ ಕೈಬಿಟ್ಟಿಲ್ಲ. ಒಂದು ವೇಳೆ ಅವರು ಈ ನಿಟ್ಟಿನಲ್ಲಿ ಹೆಜ್ಜೆ ಇಟ್ಟರೆ, ಅದು ಅಮೆರಿಕದ ಆರ್ಥಿಕತೆಗೆ ಖಂಡಿತಾ ಒಳ್ಳೆಯದಲ್ಲ. ವಿಪರ್ಯಾಸವೆಂದರೆ, ಇದರಿಂದ ಮೆಕ್ಸಿಕೋದ ಆರ್ಥಿಕತೆಗೂ ಭಾರಿ ಹಾನಿಯಾಗುತ್ತದೆ. ಅಲ್ಲಿಂದ ಅಮೆರಿಕಕ್ಕೆ ಅಕ್ರಮವಾಗಿ ಬರುವವರ ಸಂಖ್ಯೆ ಹೆಚ್ಚಾಗಬಹುದು. ಇಂತಹ ಯಾವುದೇ ತಡೆಗಳನ್ನು ಒಡ್ಡದಿದ್ದರೂ, ಲ್ಯಾಟಿನ್ ಅಮೆರಿಕದಿಂದ ಅಮೆರಿಕಕ್ಕೆ ವಲಸೆ ಬರುವವರ ಸಂಖ್ಯೆ ಸಹಜವಾಗಿಯೇ ಕಡಿಮೆಯಾಗುತ್ತಾ ಬರುತ್ತಿತ್ತು. ಜನಸಂಖ್ಯಾ ಬೆಳವಣಿಗೆಯ ಕ್ರಮವನ್ನು ಗಮನಿಸಿದರೆ ಇದು ತಿಳಿಯುತ್ತದೆ.

ಟ್ರಂಪ್ ಅವರಿಂದ ಎದುರಾಗಲಿರುವ ಅತಿ ದೊಡ್ಡ ಅಪಾಯವೆಂದರೆ ಅದು ಹಣಕಾಸು ವಲಯದ ನಿಯಮಗಳ ಸಡಿಲಿಕೆ. 2008ರ ಆರ್ಥಿಕ ಬಿಕ್ಕಟ್ಟಿನ ನಂತರ ಇಂತಹ ದೊಡ್ಡ ಅಪಾಯಗಳನ್ನು ತಡೆಯಲು ಕೆಲವು ಸುರಕ್ಷತಾ ನಿಯಮಗಳನ್ನು ಜಾರಿಗೆ ತರಲಾಗಿತ್ತು. ಈಗ ಟ್ರಂಪ್ ಸರ್ಕಾರ ಮತ್ತು ಕಾಂಗ್ರೆಸ್ ಆ ನಿಯಮಗಳನ್ನೇ ರದ್ದುಗೊಳಿಸಲು ಪ್ರಯತ್ನಿಸುತ್ತಿವೆ.

ಆರ್ಥಿಕತೆಯನ್ನು ತರಾತುರಿಯಲ್ಲಿ ಬೆಳೆಸಲು ಮಾಡುವ ಇಂತಹ ಪ್ರಯತ್ನಗಳ ಪರಿಣಾಮ ಸಾಮಾನ್ಯವಾಗಿ ಕೆಟ್ಟದಾಗಿರುತ್ತವೆ. ಈ ಹಿಂದೆ ಜಾರ್ಜ್ ಡಬ್ಲ್ಯೂ ಬುಷ್ ಅವರ ಸರ್ಕಾರವೂ ಇದನ್ನೇ ಮಾಡಿತ್ತು, ಅದರ ಫಲವಾಗಿ ದೇಶವು ದೊಡ್ಡ ಆರ್ಥಿಕ ಕುಸಿತವನ್ನು [Great Recession] ಎದುರಿಸಬೇಕಾಯಿತು.

[Simon Johnson, a 2024 Nobel laureate in economics and a former chief economist at the International Monetary Fund, is a professor at the MIT Sloan School of Management and the co-author (with Daron Acemoglu) of Power and Progress: Our Thousand-Year Struggle Over Technology and Prosperity (PublicAffairs, 2023).]

ಭಾರತದ ಆರ್ಥಿಕತೆಯ ಮೇಲೆ ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಪರಿಣಾಮಗಳು

ಸಿ ರಂಗರಾಜನ್ ಮತ್ತು ಡಿ ಕೆ ಶ್ರೀವಾತ್ಸವ

ರಷ್ಯಾ–ಉಕ್ರೇನ್ ಯುದ್ಧವು ಕಡಿಮೆಯಾಗುವ ಯಾವುದೇ ಲಕ್ಷಣಗಳೂ ಕಾಣುತ್ತಿಲ್ಲ. ಆದರೂ ಪಶ್ಚಿಮ ಏಷ್ಯಾದಲ್ಲಿನ ಮತ್ತೊಂದು ಪ್ರಮುಖ ಬಿಕ್ಕಟ್ಟು ಜಾಗತಿಕ ಆರ್ಥಿಕತೆಯ ಮೇಲೆ ಎರಗಿದೆ. ಈ ಯುದ್ಧವು ಕಚ್ಚಾ ತೈಲ, ನೈಸರ್ಗಿಕ ಅನಿಲ ಮತ್ತು ರಸಗೊಬ್ಬರಗಳು ಸೇರಿದಂತೆ ವಿವಿಧ ಇಂಧನ ಉತ್ಪನ್ನಗಳ ಉತ್ಪಾದನೆ, ಸಂಗ್ರಹಣೆ ಮತ್ತು ಸಾಗಣೆಯನ್ನು ಅಸ್ತವ್ಯಸ್ತಗೊಳಿಸಿದೆ. ಇದರಿಂದ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಸಂಬಂಧಿಸಿದ ಪದಾರ್ಥಗಳ ಬೆಲೆಯಲ್ಲಿ ವಿಪರೀತ ಏರಿಕೆಯಾಗಿದೆ.

ಹಾರ್ಮುಜ್ ಜಲಸಂಧಿಯಲ್ಲಿ [Strait of Hormuz] ಭಾಗಶಃವಾದರೂ, ಗಂಭೀರವಾದ ದಿಗ್ಬಂಧನ ಏರ್ಪಟ್ಟಿದೆ. ಇದರಿಂದಾಗಿ ಕಚ್ಚಾ ತೈಲ, ಅನಿಲ ಮತ್ತು ಇತರ ಪೆಟ್ರೋಲಿಯಂ ಉತ್ಪನ್ನಗಳ ಜೊತೆಗೆ ಇತರ ಸರಕುಗಳ ಸಾಗಣೆಯಲ್ಲಿ ತೀವ್ರವಾಗಿ ಕಡಿತವಾಗಿದೆ. ಈ ಸಮಸ್ಯೆಗಳು ಕೆಲವು ದಿನಗಳಲ್ಲಿ ಬಗೆಹರಿದರೂ ಸಹ, ಪೂರೈಕೆಯ ವ್ಯವಸ್ಥೆ ಸಹಜಸ್ಥಿತಿಗೆ ಮರಳುವುದಕ್ಕೆ ಸಾಕಷ್ಟು ಸಮಯ ಬೇಕಾಗಬಹುದು. ಆದಾಗ್ಯೂ, ಸದ್ಯಕ್ಕೆ ಒಪ್ಪಿಕೊಂಡಿರುವ ತಾತ್ಕಾಲಿಕ ಕದನ ವಿರಾಮದಿಂದ ಏಪ್ರಿಲ್ 7 ಮತ್ತು 8ರಂದು ಪ್ರತಿ ಬ್ಯಾರೆಲ್‌ಗೆ $109.3ರಷ್ಟಿದ್ದ ಬ್ರೆಂಟ್ ಕಚ್ಚಾ ತೈಲದ ಬೆಲೆ ಸುಮಾರು 95ಕ್ಕೆ ಇಳಿದಿದೆ.

ಭಾರತ ಈಗ ತನಗೆ ಬೇಕಾದ ಕಚ್ಚಾ ತೈಲ, ಅನಿಲ ಮತ್ತು ರಸಗೊಬ್ಬರ ಇವುಗಳನ್ನು ಬೇರೆ ಬೇರೆ ದೇಶಗಳಿಂದ ಕೊಳ್ಳಲು ಪ್ರಾರಂಭಿಸಿದೆ. ಪ್ರಸ್ತುತ, ಭಾರತ 41 ದೇಶಗಳಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಭಾರತ ಕಚ್ಚಾ ತೈಲಕ್ಕೆ ಬಹುತೇಕ ಅಮದನ್ನು ನೆಚ್ಚಿಕೊಂಡಿದೆ. ಆಮದಿನ ಪ್ರಮಾಣ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಈಗ ಭಾರತ ತನ್ನ ಅವಶ್ಯಕತೆಯ ಶೇಕಡ 90ರಷ್ಟನ್ನು ಆಮದು ಮಾಡಿಕೊಳ್ಳುತ್ತಿದೆ.

ಭಾರತಕ್ಕೆ ಅನ್ವಯವಾಗುವ ಕಚ್ಚಾ ತೈಲ ಬೆಲೆ ಸೂಚ್ಯಂಕವನ್ನು ಇಂಡಿಯನ್ ಕ್ರೂಡ್ ಬಾಸ್ಕೆಟ್'ಎಂದು ಕರೆಯಲಾಗುತ್ತದೆ. ಇದು ಮುಖ್ಯವಾಗಿ 'ಸ್ವೀಟ್ ಗ್ರೇಡ್' (ಬ್ರೆಂಟ್) ಮತ್ತು 'ಸೋರ್ ಗ್ರೇಡ್' (ಓಮನ್ ಹಾಗೂ ದುಬೈ ಸರಾಸರಿ) ತೈಲಗಳನ್ನು ಒಳಗೊಂಡಿದೆ. ಈ ಬಾಸ್ಕೆಟ್‌ನ ಬೆಲೆಯು ಯಾವಾಗಲೂ ಜಾಗತಿಕ ಕಚ್ಚಾ ತೈಲ ಬೆಲೆಗಳೊಂದಿಗೆ ನೇರವಾಗಿ ತೆಕ್ಕೆಹಾಕಿಕೊಂಡಿರುತ್ತದೆ. ಈ ಜಾಗತಿಕ ಬೆಲೆಯು ಬ್ರೆಂಟ್, ಡಬ್ಲ್ಯುಟಿಐ ಮತ್ತು ದುಬೈ ತೈಲಗಳ ಬೆಲೆಯ ಸರಾಸರಿಯಾಗಿರುತ್ತದೆ.

2026ರ ಮಾರ್ಚ್ ತಿಂಗಳ ಸರಾಸರಿಯನ್ನು ನೋಡಿದರೆ, ಭಾರತ ಖರೀದಿಸುವ ತೈಲದ ಬೆಲೆ ಜಾಗತಿಕ ಮಾರುಕಟ್ಟೆಯ ಬೆಲೆಗಿಂತ ಸುಮಾರು 19% ಹೆಚ್ಚಿತ್ತು. ಫೆಬ್ರವರಿ 2026ಕ್ಕೆ ಹೋಲಿಸಿದರೆ, ಮಾರ್ಚ್‌ನಲ್ಲಿ ಈ ಬೆಲೆಯಲ್ಲಿ ಸರಾಸರಿ 64.5%ರಷ್ಟು ಭಾರಿ ಏರಿಕೆಯಾಗಿತ್ತು. ಆದರೆ ಸಾಮಾನ್ಯ ಗ್ರಾಹಕರ ಮೇಲೆ ಇದರ ಪರಿಣಾಮ ಅಷ್ಟಾಗಿ ಆಗದಂತೆ ಬೆಲೆಯನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಿಸಲಾಗಿತ್ತು.

ಈಗ ತಾತ್ಕಾಲಿಕವಾಗಿ ಯುದ್ಧ ನಿಂತಿರುವುದರಿಂದ, ತೈಲ ಬೆಲೆಯಲ್ಲಿ ಸ್ವಲ್ಪ ಇಳಿಕೆಯಾಗಿದೆ. ಮಾರ್ಚ್ 23, 2026ರಂದು ಒಂದು ಬ್ಯಾರೆಲ್‌ಗೆ $157 ರಷ್ಟಿದ್ದ ಗರಿಷ್ಠ ಬೆಲೆಯು, ಏಪ್ರಿಲ್ 9ರ ವೇಳೆಗೆ $120.28 ಕ್ಕೆ ಇಳಿದಿದೆ. ಅಂದರೆ ಪ್ರತಿ ಬ್ಯಾರೆಲ್‌ಗೆ ಸುಮಾರು $37 ರಷ್ಟು ಬೆಲೆ ಕಡಿಮೆಯಾದಂತಾಗಿದೆ.

ಹಲವು ಒತ್ತಡಗಳು

ಈ ಬಿಕ್ಕಟ್ಟಿನ ಪರಿಣಾಮ ಭಾರತದ ಆರ್ಥಿಕತೆಯ ಮೇಲೆ ಹಲವು ರೀತಿಯಲ್ಲಾಗುತ್ತದೆ. ಮೊದಲಿಗೆ ಪೂರೈಕೆಯಲ್ಲಿ ಅಡಚಣೆಗಳಾಗುತ್ತವೆ. ಪೂರೈಕೆಯಲ್ಲಿ ಸಮಸ್ಯೆಯಾದರೆ ಇಂಧನ ಮತ್ತು ವಿದ್ಯುತ್ತನ್ನು ಹೆಚ್ಚಾಗಿ ಬಳಸುವ ಕೈಗಾರಿಕೆಗಳಲ್ಲಿ ಉತ್ಪಾದನೆ ಕಡಿಮೆಯಾಗುತ್ತದೆ. ಈ ವಲಯದಲ್ಲಿ ಆಗುವ ತೊಂದರೆಯ ಪರಿಣಾಮ ಆರ್ಥಿಕತೆಯ ಇತರ ಕ್ಷೇತ್ರಗಳ ಮೇಲೆ ಆಗುತ್ತದೆ. ಬಟ್ಟೆ, ಪೇಂಟ್, ರಾಸಾಯನಿಕಗಳು, ರಸಗೊಬ್ಬರ, ಸಿಮೆಂಟ್ ಮತ್ತು ಟೈರ್ ಉದ್ಯಮಗಳಿಗೆ ಹೊಡೆತ ಬೀಳುತ್ತದೆ. ಮುಖ್ಯವಾಗಿ ರಸಗೊಬ್ಬರ ಮತ್ತು ರಾಸಾಯನಿಕಗಳ ಕೊರತೆಯಾದರೆ, ಜೂನ್‌ನಿಂದ ಆರಂಭವಾಗುವ ಮುಂಗಾರಿನಲ್ಲಿ ಕೃಷಿ ಇಳುವರಿ ಕಡಿಮೆಯಾಗಬಹುದು.

ಎರಡನೆಯದಾಗಿ ಹೊಡೆತ ಬೀಳುವ ಕ್ಷೇತ್ರವೆಂದರೆ ಸಾಗಣೆ. ವಸ್ತುಗಳ ಸಂಗ್ರಹಣೆ ಮತ್ತು ಸಾಗಾಣಿಕೆಗೆ ಹೆಚ್ಚು ಇಂಧನ ಬೇಕಾಗುತ್ತದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರುವುದರಿಂದ ಸಾಗಾಣಿಕೆ ವೆಚ್ಚ ಹೆಚ್ಚುತ್ತದೆ. ಇದರಿಂದಾಗಿ ಮಾರುಕಟ್ಟೆಗೆ ಬರುವ ಪ್ರತಿಯೊಂದು ವಸ್ತುವಿನ ಬೆಲೆಯೂ ಏರುತ್ತಾ ಹೋಗುತ್ತದೆ.

ಮೂರನೆಯದಾಗಿ, ಭಾರತದ ರಫ್ತು ವಹಿವಾಟಿಗೆ ಬೇಡಿಕೆ ಮತ್ತು ಪೂರೈಕೆ ಎರಡೂ ಕಡೆಯಿಂದ ಹೊಡೆತ ಬೀಳುತ್ತದೆ. ಯುದ್ಧದಿಂದ ಪಶ್ಚಿಮ ಏಷ್ಯಾದ ದೇಶಗಳಲ್ಲಿ ಆಗುವ ಅಡಚಣೆಯಿಂದ ಆ ದೇಶಗಳಲ್ಲಿ ನಮ್ಮ ಸರಕುಗಳ ಮಾರಾಟಕ್ಕೆ ಹೊಡೆತ ಬೀಳುತ್ತದೆ. ಅಂದರೆ ಬೇಡಿಕೆ ಕಡಿಮೆಯಾಗುತ್ತದೆ. ಅಷ್ಟೇ ಅಲ್ಲ ಈ ಯುದ್ಧದಿಂದ ಅಮೆರಿಕ ಮತ್ತು ಯುರೋಪ್ ಸೇರಿದಂತೆ ಇತರ ದೇಶಗಳಲ್ಲಿ ಆರ್ಥಿಕ ಬೆಳವಣಿಗೆ ನಿಧಾನವಾಗುತ್ತದೆ. ಹಾಗಾಗಿ ಆ ದೇಶಗಳಲ್ಲೂ ನಮ್ಮ ಸರಕುಗಳಿಗೆ ಬೇಡಿಕೆ ಕುಸಿಯುತ್ತದೆ. 2024–25ರಲ್ಲಿ ಭಾರತದ ಒಟ್ಟು ಸರಕು ರಫ್ತಿನಲ್ಲಿ ಶೇಕಡ 16.4 ರಷ್ಟು ಪಶ್ಚಿಮ ಏಷ್ಯಾದ





ರಾಷ್ಟ್ರಗಳಿಗೆ ಹೋಗುತ್ತಿತ್ತು. ರೂಪಾಯಿ ಮೌಲ್ಯ ಕುಸಿಯುತ್ತಿರುವುದರಿಂದ ಭಾರತೀಯ ರಫ್ತುದಾರರಿಗೆ ಸ್ವಲ್ಪಮಟ್ಟಿಗೆ ಅನುಕೂಲವಾಗಬಹುದು.

ನಾಲ್ಕನೆಯದಾಗಿ, ಇದು ವಿದೇಶಿ ವಿನಿಮಯ ದರ ಮತ್ತು ಭಾರತಕ್ಕೆ ಬರುವ ಹಣದ ಮೇಲೆ ಪರಿಣಾಮ ಬೀರುತ್ತದೆ. ಇತ್ತೀಚಿನ ಕೆಲವು ತಿಂಗಳುಗಳಿಂದ ಭಾರತದ ರೂಪಾಯಿ ಮೌಲ್ಯ ಕುಸಿಯುತ್ತಿದೆ. ಪಶ್ಚಿಮ ಏಷ್ಯಾದ ಯುದ್ಧ ಶುರುವಾದ ಮೇಲೆ ಈ ಕುಸಿತದ ವೇಗ ಇನ್ನಷ್ಟು ತೀವ್ರಗೊಂಡಿದೆ. ಜಾಗತಿಕ ಕಚ್ಚಾ ತೈಲ, ರಸಗೊಬ್ಬರ ಹಾಗೂ ಇತರ ಇಂಧನ ಉತ್ಪನ್ನಗಳ ಬೆಲೆ ಹೆಚ್ಚಾದಂತೆ, ಡಾಲರ್ ಮತ್ತು ಇತರ ಪ್ರಬಲ ವಿದೇಶಿ ಕರೆನ್ಸಿಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಇದರಿಂದ ವಿನಿಮಯ ದರ ಒತ್ತಡಕ್ಕೆ ಸಿಲುಕುತ್ತದೆ. ಇದರೊಂದಿಗೆ, ಗಲ್ಫ್ ರಾಷ್ಟ್ರಗಳಲ್ಲಿ ಉದ್ಯೋಗದಲ್ಲಿರುವ ಭಾರತೀಯರು ಇಲ್ಲಿಗೆ ಕಳುಹಿಸುತ್ತಿದ್ದ ವಿದೇಶಿ ಹಣದ [Remittances] ಪ್ರಮಾಣವು ಕುಸಿಯುತ್ತಿದೆ. ಇದರಿಂದ ವಿನಿಮಯ ದರದ ಮೇಲೆ ಒತ್ತಡ ಮತ್ತಷ್ಟು ಹೆಚ್ಚುತ್ತದೆ. ಆದಾಗ್ಯೂ, ಒಟ್ಟಾರೆ ಪರಿಸ್ಥಿತಿಯಲ್ಲಿ ಸುಧಾರಣೆಯಾದರೆ ರುಪಾಯಿ ಚೇತರಿಸಿಕೊಳ್ಳಬಹುದು.

ಯುದ್ಧದಿಂದ ಉಂಟಾಗಿರುವ ಅನಿಶ್ಚತತೆ ಮತ್ತು ಆತಂಕದಿಂದ ವಿದೇಶಿ ಹೂಡಿಕೆದಾರರು ತಮ್ಮ ಹಣವನ್ನು ಭಾರತದಿಂದ ಹಿಂತೆಗೆದುಕೊಳ್ಳುತ್ತಿದ್ದಾರೆ. ಇದು ರೂಪಾಯಿ ಕುಸಿತಕ್ಕೆ ಬಹು ಮುಖ್ಯವಾದ ಕಾರಣ. ಯುದ್ಧ ನಿಂತ ಕೂಡಲೆ ರೂಪಾಯಿ ಮೌಲ್ಯ ಮತ್ತೆ ಚೇತರಿಸಿಕೊಳ್ಳುತ್ತದೆ. ಮಾರ್ಚ್ 2026ರಲ್ಲಿ ಸುಮಾರು 13.6 ಬಿಲಿಯನ್ ಡಾಲರ್ ಹೂಡಿಕೆ ಭಾರತದಿಂದ ಹೊರಗೆ ಹೋಗಿದೆ. ಇದು ತುಂಬಾ ದೊಡ್ಡ ಮೊತ್ತ.

ಐದನೆಯದಾಗಿ, ಚಾಲ್ತಿ ಖಾತೆ ಕೊರತೆ [Current Account Deficit] ಯ ಸಮಸ್ಯೆ. ರಫ್ತು ಕಡಿಮೆಯಾಗಿ, ಆಮದು ಹೆಚ್ಚಾದರೆ ಚಾಲ್ತಿ ಖಾತೆಯಲ್ಲಿ ಕೊರತೆಯುಂಟಾಗುತ್ತದೆ. ಯುದ್ಧ ಮುಂದುವರಿದರೆ ಈ ಸಮಸ್ಯೆ ತೀವ್ರವಾಗುತ್ತದೆ.

ಆರನೆಯದಾಗಿ, ಹಣದುಬ್ಬರದ ಸಮಸ್ಯೆ. ಉತ್ಪಾದನಾ ವೆಚ್ಚದಿಂದ ಆಗುವ ಹಣದುಬ್ಬರದಿಂದ ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ರಸಗೊಬ್ಬರದಂತಹ ಉತ್ಪನ್ನಗಳ ಮೇಲೆ ನೇರ ಪರಿಣಾಮ ಉಂಟಾಗುತ್ತದೆ. ಒಂದು ವೇಳೆ ಮಾರುಕಟ್ಟೆಯಲ್ಲಿ ಹಣದ ಚಲಾವಣೆಯೂ ಹೆಚ್ಚಾದರೆ, ಅದರಿಂದ ಒಟ್ಟಾರೆ ಹಣದುಬ್ಬರದ ಮೇಲಿನ ಒತ್ತಡ ಇನ್ನೂ ಹೆಚ್ಚುತ್ತದೆ. ಆದ್ದರಿಂದ ದೇಶದಲ್ಲಿ ಹಣದ ಪ್ರಮಾಣ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗದಂತೆ ನೋಡಿಕೊಳ್ಳಬೇಕು.

ಕೊನೆಯದಾಗಿ, ವಿತ್ತೀಯ ಕೊರತೆಯ ಸಮಸ್ಯೆ. ಚಿಲ್ಲರೆ ಮಾರಾಟ ಬೆಲೆ ಹೆಚ್ಚಾಗದಂತೆ ನೋಡಿಕೊಳ್ಳಬೇಕಾದರೆ, ತೈಲ ಮಾರಾಟ ಮಾಡುವ ಕಂಪನಿಗಳಿಗೆ [OMCs] ಹೆಚ್ಚಿನ ಸಬ್ಸಿಡಿ ನೀಡಬೇಕಾಗಿ ಬರಬಹುದು. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು [Excise Duty] ಕಡಿತಗೊಳಿಸಿದರೆ ತೈಲ ಕಂಪನಿಗಳ ನಷ್ಟ ಕಡಿಮೆಯಾಗಬಹುದು. ಆದರೆ ಅದರಿಂದ ಸರ್ಕಾರದ ಆದಾಯಕ್ಕೆ ನೇರವಾಗಿ ಹೊಡೆತ ಬೀಳುತ್ತದೆ.

ಒಂದು ವೇಳೆ ನೈಜ ಜಿಡಿಪಿ ಬೆಳವಣಿಗೆ ಕುಂಠಿತವಾಗಿ, ಪ್ರಮುಖ ಉತ್ಪಾದಕರ ಲಾಭಾಂಶವು ಕುಸಿದರೆ, ಆಗ ಸರ್ಕಾರದ ತೆರಿಗೆ ಸಂಗ್ರಹ ಕಡಿಮೆಯಾಗುತ್ತದೆ. ಆರ್ಥಿಕ ಚಟುವಟಿಕೆಗಳು ನಿಧಾನಗೊಳ್ಳುವುದರಿಂದ ರಾಜ್ಯಗಳ ಹಣಕಾಸಿನ ಸ್ಥಿತಿಯೂ ಹದಗೆಡಬಹುದು. ಕೇಂದ್ರ ಸರ್ಕಾರದ ತೆರಿಗೆ ಸಂಗ್ರಹ ಕಡಿಮೆಯಾದಾಗ, ರಾಜ್ಯಗಳಿಗೆ ಸಿಗುವ ತೆರಿಗೆ ಪಾಲು [Tax Devolution] ಕೂಡ ಕಡಿಮೆಯಾಗುತ್ತದೆ. ಜೊತೆಗೆ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಮಾರಾಟ ತೆರಿಗೆ ಅಥವಾ ವ್ಯಾಟ್ [VAT] ಕಡಿಮೆ ಮಾಡುವಂತೆ ರಾಜ್ಯಗಳ ಮೇಲೂ ಒತ್ತಡ ಬರಬಹುದು.

ವಾಸ್ತವವಾಗಿ, ಅಬಕಾರಿ ಸುಂಕದ ಕಡಿತದ ಕುರಿತು ಸರ್ಕಾರ ಮರುಚಿಂತನೆ ನಡೆಸಬೇಕಿದೆ. ಈಗ ಕಡಿತ ಮಾಡಿರುವುದಕ್ಕೆ ರಾಜ್ಯಗಳಲ್ಲಿ ನಡೆಯಲಿರುವ ಚುನಾವಣೆಗಳು ಕಾರಣ. ಚುನಾವಣೆಗಳ ನಂತರ ಮತ್ತು ಯುದ್ಧವು ಮುಂದುವರಿದರೆ, ತೈಲದ ಬೆಲೆಗಳಲ್ಲಿ ಏರಿಕೆಯಾಗುತ್ತದೆ. ಅಂತಹ ಸಂದರ್ಭದಲ್ಲಿ, ಬೆಲೆ ಹೆಚ್ಚಾದಾಗ, ತೈಲದ ಬೇಡಿಕೆ ತಗ್ಗಬಹುದು. ಅದು ಒಳ್ಳೆಯದು.

ವಿವಿಧ ನೀತಿ ಕ್ರಮಗಳು

ಮಾರ್ಚ್ 27ರಂದು ಕೇಂದ್ರೀಯ ಪರೋಕ್ಷ ತೆರಿಗೆಗಳು ಹಾಗೂ ಕಸ್ಟಮ್ಸ್ ಮಂಡಳಿ [CBIC] ಅಧ್ಯಕ್ಷರು ಹಂಚಿಕೊಂಡಿರುವ ಮಾಹಿತಿಯ ಪ್ರಕಾರ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಕಡಿತದಿಂದ ಸರ್ಕಾರಕ್ಕೆ ಪ್ರತಿ 15 ದಿನಕ್ಕೆ 7,000 ಕೋಟಿ ರೂಪಾಯಿ ನಷ್ಟವಾಗುತ್ತಿದೆ.

ಆದರೆ, ಭಾರತದ ತೈಲ ಕಂಪೆನಿಗಳ ವಿಮಾನ ಇಂಧನದ ರಫ್ತಿನ ಮೇಲಿನ ತೆರಿಗೆಯಿಂದ 1,500 ಕೋಟಿ ರೂಪಾಯಿ ಆದಾಯ ಬರುತ್ತಿದೆ. ಅಂತಿಮವಾಗಿ, ಸರ್ಕಾರಕ್ಕೆ ಪ್ರತಿ 15 ದಿನಕ್ಕೆ ಒಟ್ಟು 5,500 ಕೋಟಿ ರೂಪಾಯಿಯಷ್ಟು ನಷ್ಟವಾಗುತ್ತಿದೆ. ಈ ಬಿಕ್ಕಟ್ಟು ಒಂದು ವರ್ಷ ಮುಂದುವರಿದರೆ, ಸರ್ಕಾರಕ್ಕೆ ಸುಮಾರು 1,32,000 ಕೋಟಿ ರೂಪಾಯಿ ತೆರಿಗೆ ಆದಾಯ ನಷ್ಟವಾಗಲಿದೆ.

ಸಬ್ಸಿಡಿ ಮತ್ತು ಬೆಲೆ ಏರಿಕೆ

2026–27ರ ಬಜೆಟ್ ಅಂದಾಜಿಗಿಂತ ಆಹಾರ, ರಸಗೊಬ್ಬರ ಮತ್ತು ಪೆಟ್ರೋಲಿಯಂ ಸಬ್ಸಿಡಿಗಳು ಹೆಚ್ಚಾಗುವ ಸಾಧ್ಯತೆಯಿದೆ. ನಾವು ಈಗಾಗಲೇ ಸೂಚಿಸಿರುವಂತೆ ಕಚ್ಚಾ ತೈಲ ಬೆಲೆ ಹೆಚ್ಚಿಗೆ ಇರುವವರೆಗೂ, ಚಿಲ್ಲರೆ ಮಾರಾಟ ಬೆಲೆಗಳನ್ನು ಹೆಚ್ಚಾಗುವುದಕ್ಕೆ ಬಿಡುವುದು ಅನಿವಾರ್ಯವಾಗಿದೆ.

ಆರ್ಥಿಕತೆಯ ಮೇಲೆ ಪರಿಣಾಮ ಕೇಂದ್ರ ಬ್ಯಾಂಕಿನ [RBI] ಅಂದಾಜು

ಅಕ್ಟೋಬರ್ 2025ರ ಆರ್‌ಬಿಐ [RBI] ತನ್ನ ವರದಿಯಲ್ಲಿ ಈ ಬಿಕ್ಕಟ್ಟಿನ ಪರಿಣಾಮದ ಬಗ್ಗೆ ಮಾಹಿತಿ ನೀಡಿದೆ. ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 70 ಡಾಲರ್‌ನಿಂದ 7 ಡಾಲರ್ ಏರಿಕೆಯಾದರೆ (ಅಂದರೆ ಶೇ. 10 ರಷ್ಟು ಏರಿಕೆ), ದೇಶದ ಜಿಡಿಪಿ ಬೆಳವಣಿಗೆ ಶೇ. 0.15 ರಷ್ಟು ಕಡಿಮೆಯಾಗಬಹುದು.

ಪ್ರಸ್ತುತ ಬಿಕ್ಕಟ್ಟಿನಿಂದ ಆಗುವ ಪರಿಣಾಮದ ಪ್ರಮಾಣವನ್ನು ಅಂದಾಜು ಮಾಡುವುದು ಕಷ್ಟ. ಭಾರತೀಯ ರಿಸರ್ವ್ ಬ್ಯಾಂಕ್ [RBI] ತನ್ನ ಅಕ್ಟೋಬರ್ 2025ರ ಹಣಕಾಸು ನೀತಿ ವರದಿಯಲ್ಲಿ ಕೆಲವು ಸಂಭಾವ್ಯ ಪರಿಣಾಮಗಳನ್ನು ಉಲ್ಲೇಖಿಸಿದೆ. ಈ ಅಂದಾಜಿನ ಪ್ರಕಾರ, ಬ್ಯಾರೆಲ್‌ಗೆ $70ರ ಮೂಲ ಬೆಲೆಯಿಂದ ಭಾರತೀಯ ಕಚ್ಚಾ ತೈಲ ಮಿಶ್ರಣದ (ಬ್ಯಾಸ್ಕೆಟ್) ಬೆಲೆಯಲ್ಲಿ ಶೇಕಡ 10% ಹೆಚ್ಚಳವಾಗಬಹುದು. ಅಂದರೆ ಪ್ರತಿ ಬ್ಯಾರೆಲ್‌ಗೆ $7ರ ಏರಿಕೆಯಾಗುತ್ತದೆ. ನೈಜ ಜಿಡಿಪಿ ಬೆಳವಣಿಗೆಯಲ್ಲಿ ಸುಮಾರು 15 ಬೇಸಿಸ್ ಪಾಯಿಂಟ್‌ಗಳಷ್ಟು ಕುಸಿಯಬಹುದು. ಇದರ ಪರಿಣಾಮವನ್ನು ದೇಶೀಯ ಉತ್ಪನ್ನಗಳು ಭರಿಸಬೇಕಾಗುತ್ತವೆ. ಅವುಗಳ ಬೆಲೆ ಏರುತ್ತದೆ. ಹಾಗಾದರೆ ಹಣದುಬ್ಬರವು 30 ಬೇಸಿಸ್ ಪಾಯಿಂಟ್‌ಗಳಷ್ಟು ಹೆಚ್ಚಾಗುವ ಸಾಧ್ಯತೆಯಿದೆ.

ಏಪ್ರಿಲ್ 9, 2026ರ ಹೊತ್ತಿಗೆ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 120.28 ಡಾಲರ್ ಆಗಿದೆ. ಇದು ಸಾಮಾನ್ಯ ದರಕ್ಕಿಂತ ಸುಮಾರು 50 ಡಾಲರ್‌ನಷ್ಟು ಹೆಚ್ಚಾಗಿದೆ. ಬೆಲೆ ಏರಿಕೆ ಹೀಗೆಯೇ ಮುಂದುವರಿದರೆ, ದೇಶದ ಜಿಡಿಪಿ ಬೆಳವಣಿಗೆ ಶೇ. 1ರಷ್ಟು ಕುಸಿಯಬಹುದು.

ಹಣದುಬ್ಬರವು ಶೇ. 2ಕ್ಕಿಂತ ಹೆಚ್ಚು ಏರಿಕೆಯಾಗುವ ಅಪಾಯವಿದೆ. ಯುದ್ಧ ಬೇಗ ಮುಗಿದರೆ ಈ ಹಾನಿ ಕಡಿಮೆಯಾಗಬಹುದು. ಆದರೆ ಶಾಂತಿ ನಿಜವಾಗಿ ಯಾವಾಗ ಸಾಧ್ಯವಾಗುತ್ತದೆ ಅನ್ನುವುದರ ಮೇಲೆ ಎಲ್ಲವೂ ನಿಂತಿದೆ.

C. Rangarajan is Former Chairman, Prime Minister's Economic Advisory Council and Former Governor, Reserve Bank of India; D. K. Srivastava is Former Director, Madras School of Economics. Views expressed are personal.

Originally published in The Hindu

ರೂಪಾಯಿಯ ಕುಸಿತದ ವಿಶ್ಲೇಷಣೆ!

ಪ್ರಭಾತ್ ಪಟ್ನಾಯಕ್



ಅಮೆರಿಕ ಮತ್ತು ಇಸ್ರೇಲ್ ಸೇರಿ ಇರಾನ್ ಮೇಲೆ ಯುದ್ಧ ಪ್ರಾರಂಭಿಸಿದಾಗಿನಿಂದ, ಏಷ್ಯಾದ ಬಹುತೇಕ ದೇಶಗಳ ಕರೆನ್ಸಿಯ ಮೌಲ್ಯ ಡಾಲರ್ ಮುಂದೆ ಕುಸಿದಿವೆ. ಅದರಲ್ಲೂ ನಮ್ಮ ರೂಪಾಯಿ ಸ್ಥಿತಿಯಂತೂ ತುಂಬ ಶೋಚನೀಯವಾಗಿದೆ. ಯುದ್ಧ ಶುರು ಆಗೋ ಹಿಂದಿನ ದಿನ ಫೆಬ್ರವರಿ 27ಕ್ಕೆ 91.01 ರೂಪಾಯಿ ಇದ್ದದ್ದು, ಮಾರ್ಚ್ 28ರ ಶನಿವಾರದ ಹೊತ್ತಿಗೆ 94.86 ರೂಪಾಯಿಗೆ ಇಳಿದಿದೆ.

ಈ ರೂಪಾಯಿ ಮೌಲ್ಯ ಇಷ್ಟೊಂದು ಬೀಳೋಕೆ ತಕ್ಷಣದ ಕಾರಣ ಸರಳ – ನಮಗೆ ಬೇಕಿರೋ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್‌ಗಾಗಿ ನಾವು ಬೇರೆ ದೇಶಗಳನ್ನೇ ನಂಬಿಕೊಂಡಿದ್ದೇವೆ. ಇವೆಲ್ಲಾ ಹೆಚ್ಚಾಗಿ ಹಾರ್ಮುಜ್ ಜಲಸಂಧಿಯ ಮೂಲಕವೇ ಹಾದು ಬರಬೇಕು. ಒಂದು ವೇಳೆ ಅದು ಬಂದ್ ಆದ್ರೆ ನಮಗೆ ತೈಲ ಸಿಗೋದು ಕಷ್ಟ ಆಗುತ್ತೆ, ಅಷ್ಟೇ ಅಲ್ಲ ನಮ್ಮ ದೇಶದ ಪಾವತಿ ಶಿಲ್ಕಿನ ಸಮತೋಲನ ತಪ್ಪುತ್ತದೆ. ಹಾಗಾಗಿ ರೂಪಾಯಿಯ ಕಿಮ್ಮತ್ತು ಕಮ್ಮಿಯಾಗುತ್ತದೆ. ಇದರ ಜೊತೆಗೆ, ವಿದೇಶಗಳಲ್ಲಿರೋ ನಮ್ಮವರು ಇಲ್ಲಿಗೆ ಕಳಿಸ್ತಿದ್ದ ಹಣ ಕೂಡ ಕಮ್ಮಿ ಆಗುತ್ತದೆ. ಹೀಗೆ ಅವರು ಕಳುಹಿಸುತ್ತಿದ್ದ ಹಣ ನಮ್ಮ ಪಾವತಿ ಶಿಲ್ಕಿನ ಸಮತೋಲನವನ್ನು ಇಲ್ಲಿಯವರೆಗೂ ಕಾಪಾಡಿಕೊಂಡು ಬರುತ್ತಿತ್ತು..

ನಮ್ಮ ಚಾಲ್ತಿ ಖಾತೆ ಕೊರತೆ ದಿಢೀರನೆ ಹದಗೆಟ್ಟದ್ದಲ್ಲ. ಕೇವಲ ಮೂರು ವಾರಗಳ ಯುದ್ಧದಿಂದ ನಮ್ಮ ಚಾಲ್ತಿ ಖಾತೆಯ ಕೊರತೆ ಅಷ್ಟೊಂದು ತೀವ್ರವಾಗಿ ಬಿಡುವುದಿಲ್ಲ. ನಿಜವಾದ ಕಾರಣ ಅಂದರೆ ಮುಂದೆ ಪರಿಸ್ಥಿತಿ ಇನ್ನೂ ಹದಗೆಡಬಹುದು ಅನ್ನೋ ನಿರೀಕ್ಷೆಯಿಂದ ಜನ ಹಣವನ್ನು ಜಗತ್ತಿನ ಬೇರೆ ಕಡೆಗೆ ಸಾಗಿಸುತ್ತಿದ್ದಾರೆ.

ಈ ಯುದ್ಧಕ್ಕೆ ಅಮೆರಿಕದ ಆಕ್ರಮಣಕಾರಿ ಧೋರಣೆಯೇ ಕಾರಣ. ಈ ಯುದ್ಧ ಪ್ರಾರಂಭಿಸಿದ್ದೂ ಅಮೇರಿಕೆ. ಆದರೂ ವಿಪರ್ಯಾಸವೆಂದರೆ ಎಲ್ಲರೂ ಸುರಕ್ಷತೆಗೆ ಡಾಲರನ್ನೇ ಆಶ್ರಯಿಸುತ್ತಿದ್ದಾರೆ. ಇದೊಂದು ವಿಚಿತ್ರ ವಿದ್ಯಮಾನ: ತೈಲದ ಮುಂದೆ ಡಾಲರ್ ಮೌಲ್ಯ ಕಳೆದುಕೊಂಡರೆ, ಅದೇ ಡಾಲರ್ ಮುಂದೆ ಜಗತ್ತಿನ ಇತರ ದೇಶಗಳ (ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ) ಕರೆನ್ಸಿಗಳು ಮೌಲ್ಯ ಕಳೆದುಕೊಳ್ಳುತ್ತವೆ!

ನಮ್ಮ ರೂಪಾಯಿ ಮೌಲ್ಯ ಬಿದ್ದರೆ, ನಾವು ಆಮದು ಮಾಡಿಕೊಳ್ಳುವ ವಸ್ತುಗಳ ಬೆಲೆ ಹೆಚ್ಚುತ್ತದೆ. ಅಂತಿಮವಾಗಿ ಜನ ಸಾಮಾನ್ಯರು ಈ ಹೆಚ್ಚಿದ ಬೆಲೆಯ ಹೊರೆಯನ್ನು ಹೊರಬೇಕಾಗುತ್ತದೆ. ದುಡಿಯೋ ಜನರ ಆದಾಯ ಅಷ್ಟೇ ಇದ್ದರೂ ಸಾಮಾನುಗಳ ರೇಟ್ ಮಾತ್ರ ಆಕಾಶಕ್ಕೆ ಏರುತ್ತೆ. ಒಂದು ವೇಳೆ ಬೆಲೆ ಏರಿಕೆಗೆ ತಕ್ಕಂತೆ ಸಂಬಳನೂ ಜಾಸ್ತಿ ಆಗ್ತಾ ಹೋದ್ರೆ, ಬೆಲೆ ಇನ್ನಷ್ಟು ಏರುತ್ತದೆ. ಹಣದುಬ್ಬರ ನಿಲ್ಲದೆ ಮುಂದುವರಿಯುತ್ತದೆ.

ಹೀಗಾಗಿ, ಡಾಲರ್ ಲೆಕ್ಕದಲ್ಲಿ ತೈಲದ ಬೆಲೆ ಹೆಚ್ಚಾದರೆ ನಮ್ಮಂತಹ ಜಾಗತಿಕ ದಕ್ಷಿಣದ ದೇಶಗಳಿಗೆ ಎರಡು ಕಡೆಯಿಂದ ಹೊಡೆತ ಬೀಳುತ್ತೆ. ಮೊದಲನೆಯದಾಗಿ, ಡಾಲರ್ ಜೊತೆಗಿನ ನಮ್ಮ ರೂಪಾಯಿಯ ನಮ್ಮ ವಿನಿಮಯ ದರದಲ್ಲಿ ಬದಲಾವಣೆಯಾಗದಿದ್ದರೂ ಅಂದರೆ ರೂಪಾಯಿ ಮೌಲ್ಯ ಕುಸಿಯದಿದ್ದರೂ, ಡಾಲರ್ ಲೆಕ್ಕದಲ್ಲಿ ತೈಲದ ಬೆಲೆಯಲ್ಲಿ ಏರಿಕೆಯಾಗಿರುವುದರಿಂದ ಬೆಲೆ ಏರಿಕೆ ನಮ್ಮನ್ನು ತಟ್ಟುತ್ತದೆ.

ಇನ್ನು ಎರಡನೇ ಹೊಡೆತ ಅಂದ್ರೆ, ಡಾಲರ್ ಎದುರು ನಮ್ಮ ರೂಪಾಯಿ ಮೌಲ್ಯ ಕುಸಿಯುವುದರಿಂದ ಆಗುವ ಹಣದುಬ್ಬರ. ಇದರಿಂದ ನಾವು ಹೊರಗಿನಿಂದ ತರುವ ಬೇರೆ ಎಲ್ಲಾ ವಸ್ತುಗಳ ಬೆಲೆಗಳು ಏರುತ್ತವೆ. ಜೊತೆಗೆ ರೂಪಾಯಿ ಮೌಲ್ಯ ಕುಸಿಯುವುದರಿಂದ ತೈಲದ ಆಮದು ಬೆಲೆ ಇನ್ನೂ ಹೆಚ್ಚುತ್ತದೆ. ಉದಾಹರಣೆಗೆ, ಅಮೆರಿಕದಲ್ಲಿ ತೈಲ ಬೆಲೆ 10% ಏರಿ ಅಲ್ಲಿನ ಜನರಿಗೆ 5% ನಷ್ಟು ಬೆಲೆ ಏರಿಕೆ ತಟ್ಟಿದರೆ, ನಮ್ಮಂತಹ ದೇಶಗಳಲ್ಲಿ ರೂಪಾಯಿ ಮೌಲ್ಯದ ಕುಸಿತದ ಪರಿಣಾಮವೂ ಸೇರಿಕೊಳ್ಳುವುದರಿಂದ ಬೆಲೆ 5% ಗಿಂತ ಹೆಚ್ಚು ಹೆಚ್ಚುತ್ತದೆ. ಇದನ್ನೇ ಹಣದುಬ್ಬರದ ಗುಣಕ [inflation multiplier] ಎನ್ನಬಹುದು. ಅಂದ್ರೆ, ದೊಡ್ಡ ದೇಶಗಳಲ್ಲಿ ಆಗುವ ಸಣ್ಣ ಮಟ್ಟದ ಬೆಲೆ ಏರಿಕೆ, ನಮ್ಮಂತಹ ಅಂಚಿನಲ್ಲಿರುವ ದೇಶಗಳಿಗೆ ಬರುವಷ್ಟರಲ್ಲಿ ವಿಪರೀತವಾಗಿರುತ್ತದೆ.

ಮಾರುಕಟ್ಟೆಯಲ್ಲಿ ರೂಪಾಯಿ ಬಗ್ಗೆ ಎಷ್ಟು ನೆಗೆಟಿವ್ ಅಭಿಪ್ರಾಯ [speculative sentiment] ಮೂಡಿದೆ ಅಂದರೆ, ರಿಸರ್ವ್ ಬ್ಯಾಂಕ್ ಎಷ್ಟೇ ಪ್ರಯತ್ನ ಪಟ್ಟರೂ ರೂಪಾಯಿ ಮೌಲ್ಯ ಬೀಳುವುದನ್ನು ತಡೆಯುವುದಕ್ಕೆ ಆಗುತ್ತಿಲ್ಲ. ಇರಾನ್ ಯುದ್ಧ ಶುರುವಾದಾಗಿನಿಂದ ರೂಪಾಯಿ ಮೌಲ್ಯವನ್ನು ಸ್ಥಿರವಾಗಿಡುವುದಕ್ಕಾಗಿ ಆರ್‌ಬಿಐ ಬರೋಬ್ಬರಿ 20 ಬಿಲಿಯನ್ ಡಾಲರ್ ಹಣವನ್ನು ಮಾರುಕಟ್ಟೆಯಲ್ಲಿ ಹೂಡಿದೆ ಎನ್ನುವ ವರದಿಗಳಿವೆ. ಆದರೂ ರೂಪಾಯಿಯ ತೀವ್ರ ಕುಸಿತವನ್ನು ತಡೆಯುವುದಕ್ಕೆ ಸಾಧ್ಯವಾಗಿಲ್ಲ. ನಿಜ, ಒಂದು ವೇಳೆ ಆರ್‌ಬಿಐ ಈ ರೀತಿ ಮಧ್ಯ ಪ್ರವೇಶ ಮಾಡದಿದ್ದರೆ ರೂಪಾಯಿ ಇನ್ನೂ ತೀವ್ರವಾಗಿ ಕುಸಿಯುತ್ತಿದ್ದಿರಬಹುದು. ಆದರೆ ಇಷ್ಟೆಲ್ಲಾ ಪ್ರಯತ್ನಗಳ ನಂತರವೂ ರೂಪಾಯಿ ಮೌಲ್ಯ ಕುಸಿಯುತ್ತಿದೆ ಅಂದರೆ. ಮಾರ್ಕೆಟ್‌ನಲ್ಲಿ ರೂಪಾಯಿ ಬಗ್ಗೆ ಇರೋ ಆ ನೇತ್ಯಾತ್ಮಕ ಭಾವನೆಗಳು ಎಷ್ಟೊಂದು ಬಲವಾಗಿದೆ ಎನ್ನುವುದು ಅರ್ಥವಾಗುತ್ತದೆ.

ಈ ನೇತ್ಯಾತ್ಮಕ ಭಾವನೆ ಇಷ್ಟೊಂದು ಬಲವಾಗಿರುವುದಕ್ಕೆ ನಿಜವಾದ ಕಾರಣವೆಂದರೆ, ರೂಪಾಯಿಯ ಕುಸಿತ ಯುದ್ಧ ಪ್ರಾರಂಭವಾಗುವುದಕ್ಕಿಂತ ಮೊದಲೇ ಪ್ರಾರಂಭವಾಗಿತ್ತು. ಇರಾನ್ ಮೇಲಿನ ಯುದ್ಧ ಪ್ರಾರಂಭವಾಗಿದ್ದು

ಫೆಬ್ರವರಿ 28ರಂದು. ಆದರೆ ಅದಕ್ಕಿಂತ ಮುಂಚೆಯೇ ಡಾಲರ್ ಎದುರು ರೂಪಾಯಿ ಕುಸಿಯುವುದಕ್ಕೆ ಪ್ರಾರಂಭವಾಗಿತ್ತು. ಅಂದರೆ ಜನವರಿ 1, 2026 ರಂದು 89.94 ಇದ್ದ ರೂಪಾಯಿ ಮೌಲ್ಯ, ಕೇವಲ ಎರಡು ತಿಂಗಳಲ್ಲಿ ಅಂದ್ರೆ ಫೆಬ್ರವರಿ 27ರ ಹೊತ್ತಿಗೆ 91.01 ಕ್ಕೆ ಕುಸಿದಿತ್ತು.

ಈಗ ರೂಪಾಯಿ ಮೌಲ್ಯ ಇಷ್ಟೊಂದು ತೀವ್ರವಾಗಿ ಕುಸಿಯುತ್ತಿರುವುದಕ್ಕೆ ಒಂದು ಮುಖ್ಯ ಕಾರಣವೆಂದರೆ ಯುದ್ಧದಿಂದ ತೈಲ ಬೆಲೆಯ ಏರಿಕೆ ಮತ್ತು ಜನರೆಲ್ಲಾ ಡಾಲರ್‌ಅನ್ನು ಸುರಕ್ಷಿತ ಎಂದುಕೊಂಡು ಅದನ್ನು ಹಿಂಬಾಲಿಸುತ್ತಿರುವುದು. ಇವೆರಡೂ ಈಗಾಗಲೇ ಪ್ರಾರಂಭವಾಗಿದ್ದ ರೂಪಾಯಿಯ ಕುಸಿತದ ಪ್ರಕ್ರಿಯೆಯನ್ನು ಇನ್ನಷ್ಟು ತೀವ್ರಗೊಳಿಸಿದೆ. ನಿಜ ಹೇಳಬೇಕೆಂದರೆ ಆರ್‌ಬಿಐ ಬಳಿಯಲ್ಲಿ ಸುಮಾರು 700 ಬಿಲಿಯನ್ ಡಾಲರ್‌ನಷ್ಟು ದೊಡ್ಡ ಪ್ರಮಾಣದ ವಿದೇಶಿ ವಿನಿಮಯ ಮೀಸಲು ಇದ್ದರೂ ಸಹ, ಮುಂದಿನ ದಿನಗಳಲ್ಲಿ ರೂಪಾಯಿ ಮೌಲ್ಯ ಡಾಲರ್ ಎದುರು 95ಕ್ಕಿಂತ ಕೆಳಗೆ ಹೋಗುತ್ತದೆ ಎನ್ನುವ ನಿರೀಕ್ಷೆಯಲ್ಲಿ ಮಾರುಕಟ್ಟೆ ವಿಶ್ಲೇಷಕರಿದ್ದಾರೆ.

ಇಲ್ಲೊಂದು ಅಚ್ಚರಿಯ ವಿಷಯ ಅಂದ್ರೆ, ನಮ್ಮಲ್ಲಿ ಎಷ್ಟೇ ದೊಡ್ಡ ಪ್ರಮಾಣದ ವಿದೇಶಿ ಹಣದ ಮೀಸಲಿದ್ದರೂ, ಈ ಸಟ್ಟಾ ವ್ಯಾಪಾರಿಗಳು [speculators] ರೂಪಾಯಿ ವಿರುದ್ಧ ತಿರುಗಿಬಿದ್ದಾಗ, ಕರೆನ್ಸಿಯ ಮೌಲ್ಯದ ಕುಸಿತವನ್ನು ತಡೆಯುವುದಕ್ಕೆ ರಿಸರ್ವ್ ಬ್ಯಾಂಕಿಗೂ ಸಾಧ್ಯವಾಗುತ್ತಿಲ್ಲ. ಜನರು ಕರೆನ್ಸಿಯ ಮೌಲ್ಯ ಕುಸಿಯುತ್ತದೆ ಎಂಬ ನಿರೀಕ್ಷೆಯಲ್ಲಿ, ಅಥವಾ ಇನ್ಯಾವುದೋ ಕಾರಣಕ್ಕೆ ಹಣವನ್ನು ಹೊರಗಡೆ ತೆಗೆದುಕೊಂಡು ಹೋಗುವುದಕ್ಕೆ ಪ್ರಾರಂಭಿಸಿದರೆ, ಆರ್‌ಬಿಐ ತನ್ನ ಮೀಸಲನ್ನು ಬಳಸಿ, ಹೊರಹರಿವನ್ನು ತಡೆಯುವುದಕ್ಕೆ ಪ್ರಯತ್ನಿಸಿದರೆ, ಜನರಿಗೆ ಮೀಸಲು ಖಾಲಿ ಆಗುತ್ತಿದೆ ಅನ್ನುವ ಭಯ ಪ್ರಾರಂಭವಾಗುತ್ತದೆ. ರೂಪಾಯಿ ಮೌಲ್ಯ ಇನ್ನೂ ಕುಸಿಯುತ್ತದೆ ಅನ್ನುವ ನಿರೀಕ್ಷೆ ಹೆಚ್ಚುತ್ತದೆ. ಇದನ್ನ ಅರಿತ ರಿಸರ್ವ್ ಬ್ಯಾಂಕ್ ಕೂಡ ಇಂತಹ ಸಂದರ್ಭದಲ್ಲಿ ಮೀಸಲನ್ನು ಬಳಸುವುದಕ್ಕೆ ಮುನ್ನ ಹತ್ತು ಸಲ ಯೋಚಿಸುತ್ತದೆ.

ಹಾಗಾಗಿ, ಒಂದು ದೇಶದಲ್ಲಿ ಎಷ್ಟೇ ದೊಡ್ಡ ಪ್ರಮಾಣದ ವಿದೇಶಿ ವಿನಿಮಯ ಮೀಸಲು ಇದ್ದರೂ, ಕರೆನ್ಸಿಯ ಮೌಲ್ಯ ಕುಸಿಯುತ್ತಾ ಹೋಗಬಹುದು. ವಿದೇಶಿ ವಿನಿಮಯ ಮೀಸಲು ನಿಧಿಯಿದ್ದರೆ ಸಾಲದ ಮರುಪಾವತಿಗೆ ಅನುಕೂಲವಾಗಬಹುದು. ಅಥವಾ [Balance of Payments] ಚಾಲ್ತಿ ಖಾತೆ ಕೊರತೆಯನ್ನು ಸರಿದೂಗಿಸಲು ಪ್ರಯೋಜನವಾಗಬಹುದು. ಅಂದರೆ ಆರ್ಥಿಕತೆಯ ದ್ರವ್ಯತೆಯ ಅಗತ್ಯಗಳನ್ನು ಪೂರೈಸಲು ಸಹಕಾರಿಯಾಗುತ್ತದೆ. ಆದರೆ ಮಾರುಕಟ್ಟೆಯ ನೇತ್ಯಾತ್ಮಕ ಮನೋಭಾವದಿಂದ ರೂಪಾಯಿ ಬೆಲೆ ಕುಸಿಯುತ್ತಿದ್ದರೆ, ರೂಪಾಯಿ ಮೌಲ್ಯವನ್ನು ಮೀಸಲು ಹಣ ಬಳಸಿ ಕಾಪಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನೊಂದು ಮುಖ್ಯವಾದ ವಿಷಯವನ್ನು ನಾವು ಗಮನಿಸಬೇಕು. ನಮ್ಮಲ್ಲಿರುವ ವಿದೇಶಿ ಹಣದ ಮೀಸಲನ್ನು ಹೇಗೆ ಸಂಗ್ರಹಿಸಿಲಾಗಿದೆ ಎಂಬುದನ್ನು ನೋಡಬೇಕು. ಇದು ನಮ್ಮ ದೇಶದ ಚಾಲ್ತಿ ಖಾತೆಯ ಮಿಗುತಾಯದಿಂದ ಅಂದರೆ ಸ್ವಂತ ವ್ಯಾಪಾರದ ಲಾಭದಿಂದ ಬಂದಿರಬಹುದು ಅಥವಾ ವಿದೇಶಿ ಬಂಡವಾಳಿಗರು ನಮ್ಮಲ್ಲಿ ಹೂಡಿಕೆ ಮಾಡಿರಬಹುದು. ಒಂದು ವೇಳೆ ಇದು ವಿದೇಶಿಗರ ಹೂಡಿಕೆಯಾಗಿದ್ದರೆ ನಾವು ಅದಕ್ಕೆ ಹೆಚ್ಚಿನ ಬಡ್ಡಿ ತೆರುತ್ತಿರುತ್ತೇವೆ. ಆದರೆ ಅದರಿಂದ ನಮಗೆ ಸಿಗುವ ಬಡ್ಡಿ ತುಂಬಾ ಕಡಿಮೆ ಇರುತ್ತದೆ. ಅಂದರೆ, ಸಾಲದ ರೂಪದಲ್ಲಿ ಹೀಗೆ ದೊಡ್ಡ ಪ್ರಮಾಣದ ವಿದೇಶಿ ಹಣವನ್ನು ಕೂಡಿಡುವುದು ಎಷ್ಟು ಸರಿ? ಹೀಗೆ ಮಾಡುವುದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚಲ್ಲವೆ ಎನ್ನುವ ಅನುಮಾನ ಬರುವುದು ಸಹಜ.

ಉದಾಹರಣೆಗೆ ಭಾರತವನ್ನೇ ನೋಡಿ. ಆರ್‌ಬಿಐ ಹತ್ತಿರ ಇರುವ ವಿದೇಶಿ ಹಣಕ್ಕೆ ಬರುವ ಬಡ್ಡಿ ಹೆಚ್ಚೆಂದರೆ 1.5% ಅಷ್ಟೇ. ಆದರೆ ಅದೇ ಹಣವನ್ನು ನಮ್ಮ ದೇಶದಲ್ಲಿ ಹೂಡಿಕೆ ಮಾಡುವವರಿಗೆ ನಾವು ಶೇಕಡ 7 ರಿಂದ 8 ರಷ್ಟು ಬಡ್ಡಿ (ಬಂಡವಾಳದ ಹೆಚ್ಚಳವು ಸೇರಿದಂತೆ) ತೆರಬೇಕಾಗುತ್ತದೆ.

ಹೊರಗಿನಿಂದ ಹರಿದುಬರುವ ಹಣದ ಮೂಲಕ ನಾವು ವಿದೇಶಿ ಮೀಸಲನ್ನು ಸಂಗ್ರಹಿಸಿದರೆ, ಅದು 'ಹೆಚ್ಚು ಬಡ್ಡಿ ತೆತ್ತು ಸಾಲ ತೆಗೆದುಕೊಂಡು ಕಡಿಮೆ ಬಡ್ಡಿಗೆ ಸಾಲ ಕೊಟ್ಟಂತೆ' ಆಗುತ್ತದೆ. ಅಂದರೆ, ನಾವು ಅತಿ ದುಬಾರಿಯಾಗಿ ಹಣವನ್ನು ಪಡೆದು, ಅಗ್ಗವಾಗಿ ಬೇರೆಯವರಿಗೆ ನೀಡುತ್ತಿರುತ್ತೇವೆ. ಇಂತಹ ಹಣದ ಮೀಸಲು ಹೆಚ್ಚಾದಷ್ಟೂ, ನಮ್ಮ ದೇಶದಿಂದ ಹೊರಹರಿಯುವ ಹಣದ ಪ್ರಮಾಣ ಹೆಚ್ಚಾಗುತ್ತದೆ.

ಸಾಲದ ಹಣದಿಂದ ಈ ರೀತಿ ದೊಡ್ಡ ಮಟ್ಟದ ವಿದೇಶಿ ಮೀಸಲು ಸಂಗ್ರಹ ಮಾಡುವುದಕ್ಕೆ ಅದರದೇ ಆದ ಸಮಸ್ಯೆಗಳಿವೆ. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, 'ಮುಕ್ತ' ವ್ಯಾಪಾರ ಮತ್ತು ಬಂಡವಾಳ ನೀತಿಯಲ್ಲಿರುವ ಲೋಪದೋಷಗಳು. ಇಂತಹ ವ್ಯವಸ್ಥೆಯಲ್ಲಿ ಆಮದು ಸುಂಕಗಳು [tariffs] ಮತ್ತು ವ್ಯಾಪಾರದ ಪ್ರಮಾಣದ ಮೇಲಿನ ಎಲ್ಲಾ ಮಿತಿಗಳನ್ನು ಸಂಪೂರ್ಣ ತೆಗೆಯಲಾಗುತ್ತದೆ. ಹಣವು ದೇಶದ ಒಳಗೆ ಮತ್ತು ಹೊರಗೆ ಮುಕ್ತವಾಗಿ ಹರಿಯುವುದಕ್ಕೆ ಬಂಡವಾಳಕ್ಕೆ ಮುಕ್ತ ಅವಕಾಶ ಮಾಡಿಕೊಡಲಾಗುತ್ತದೆ. ಕೆಲವು ಅಂತರರಾಷ್ಟ್ರೀಯ ಸಟ್ಟಾ ವ್ಯಾಪಾರಿಗಳು ಮನಸೋ ಇಚ್ಛೆ ಆಡುವ ಆಟಕ್ಕೆ ನಮ್ಮ ವಿನಿಮಯ ದರ ಮತ್ತು ಲಕ್ಷಾಂತರ ದುಡಿಯುವ ಜನರ ಬದುಕು ಸಿಲುಕಿ ನಲುಗಿಹೋಗುತ್ತದೆ. ಇವೆಲ್ಲಾ ನವ-ಉದಾರವಾದಿ ಆರ್ಥಿಕತೆಯ ಲಕ್ಷಣಗಳು. ಭಾರತದಲ್ಲಿ ಈಗ ಅದರ ಕೆಟ್ಟ ಪರಿಣಾಮವನ್ನು ರೂಪಾಯಿ ಮೌಲ್ಯದ ಕುಸಿತದ ರೂಪದಲ್ಲಿ ನಾವು ನೋಡುತ್ತಿದ್ದೇವೆ.

ಡೊನಾಲ್ಡ್ ಟ್ರಂಪ್ ಅವರ ಈ 'ಸುಂಕದ ಆಕ್ರಮಣಕಾರಿ ನೀತಿಯಿಂದ' ಭಾರತವೂ ಸೇರಿದಂತೆ ಇತರ ದೇಶಗಳಿಗೆ ಒಂದು ದಾರಿ ತೆರೆದುಕೊಂಡಿದೆ. ತಮ್ಮ ಚಾಲ್ತಿ ಖಾತೆ ಸಮತೋಲನವನ್ನು ಕಾಪಾಡಿಕೊಳ್ಳಲು ಅವು ಸಹ ತಮ್ಮದೇ ಆದ ಸುಂಕಗಳನ್ನು ವಿಧಿಸಬಹುದು." ಅಮೇರಿಕೆಯ ಸುಂಕಕ್ಕೆ ಗುರಿಯಾಗಿರುವ ಹಲವು ದೇಶಗಳು ಭಾರತದಂತಹ ಇತರ ದೇಶಗಳೊಂದಿಗೆ ಕೈಜೋಡಿಸಿ ತಮ್ಮದೇ ಆದ ದ್ವಿಪಕ್ಷೀಯ ಅಥವಾ ಬಹುಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳಬಹುದು.

ಆದರೆ ವ್ಯವಹಾರವನ್ನು ನಡೆಸುವುದಕ್ಕೆ ಮತ್ತು ಪಾವತಿ ಕೊರತೆಯನ್ನು ಸರಿಪಡಿಸಿಕೊಳ್ಳುವುದಕ್ಕೆ ಅಮೇರಿಕೆಯ ಡಾಲರನ್ನು ಬಳಸಬಾರದು. ಅದರ ಬದಲು, ದೇಶಗಳು ತಮ್ಮದೇ ಆದ ಹಣವನ್ನು ಬಳಸಬೇಕು. ಅವುಗಳ ನಡುವೆ ಒಂದು ಸ್ಥಿರವಾದ ವಿನಿಮಯ ದರವನ್ನು ಕಂಡುಕೊಳ್ಳಬೇಕು. ಒಂದು ವೇಳೆ ಈ ವರ್ಷದ ವ್ಯವಹಾರದಲ್ಲಿ ಬಾಕಿ ಉಳಿದರೆ, ಅದನ್ನು ಮುಂದಿನ ವರ್ಷಕ್ಕೆ ಸೇರಿಸಬಹುದು. ಆ ಬಾಕಿಯನ್ನು ಹಣದ ರೂಪದಲ್ಲಿ ಕೊಡುವ ಬದಲು, ಪರಸ್ಪರ ಸಾಮಾನುಗಳನ್ನು ಕೊಳ್ಳುವ ಮೂಲಕ ಸರಿದೂಗಿಸಬಹುದು. ಹೀಗೆ ಮಾಡುವುದರಿಂದ ಡಾಲರ್ ಅವಶ್ಯಕತೆಯೇ ಇರುವುದಿಲ್ಲ. ಆಗ ವಿದೇಶಿ ಬಂಡವಾಳವನ್ನು ಆಕರ್ಷಿಸುವ ಅಗತ್ಯವೂ ಇರಲ್ಲ. ಮುಖ್ಯವಾಗಿ, ನಮ್ಮ ಆರ್ಥಿಕತೆಯು ಸಾಮ್ರಾಜ್ಯಶಾಹಿ ದೇಶದ ಅಣತಿಯಂತೆ ನಡೆಯುವುದು ತಪ್ಪುತ್ತದೆ. ಇದು ನಮ್ಮ ಉದ್ದೇಶವಾಗಬೇಕು.

ಆದರೆ ಮೋದಿ ಸರ್ಕಾರ ಈಗ ಸಂಪೂರ್ಣ ಬೇರೆಯದೇ ದಾರಿಯಲ್ಲಿ ಸಾಗುತ್ತಿದೆ. ಇದು ಪ್ರಪಂಚದ ಹಲವು ದೇಶಗಳ ಜೊತೆ ಹಲವಾರು ಮುಕ್ತ ವ್ಯಾಪಾರ ಒಪ್ಪಂದಗಳನ್ನು [FTAs] ಮಾಡಿಕೊಳ್ಳುತ್ತಿದೆ. ಇದರಿಂದ ಹೆಚ್ಚಂದರೆ ವ್ಯಾಪಾರದ ಪ್ರಮಾಣ ಹೆಚ್ಚಾಗಬಹುದು. ಆದರೆ ಇದರಿಂದ ನಮ್ಮ ರಫ್ತು ಹೆಚ್ಚಾಗುತ್ತದೆ ಅಥವಾ ಜನರಿಗೆ ಉದ್ಯೋಗ ಸಿಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಮುಖ್ಯವಾಗಿ, ಇಂತಹ ಮುಕ್ತ ವ್ಯಾಪಾರ ಒಪ್ಪಂದಗಳು ನಮ್ಮ ಆರ್ಥಿಕತೆಯನ್ನು ಜಾಗತಿಕ ಹಣಕಾಸು ಬಂಡವಾಳದ ಹಿಡಿತದಿಂದ ಮುಕ್ತಗೊಳಿಸುವುದಿಲ್ಲ.

[Prabhat Patnaik is Professor Emeritus, Centre for Economic Studies and Planning, Jawaharlal Nehru University, New Delhi.]

ಹೊಸ ಜಿಡಿಪಿ ದತ್ತಾಂಶದ ಒಳನೋಟಗಳು




ಅಭಿಮಾನ್ ದಾಸ್ ಮತ್ತು ಸ್ಮಿತ ರಾಯ್ ತ್ರಿವೇದಿ

2026ರಲ್ಲಿ ಬಹುನಿರೀಕ್ಷಿತ ಹೊಸ ಜಿಡಿಪಿ ಸರಣಿ ಬಿಡುಗಡೆಯಾಗಿದೆ. ಆಧಾರವರ್ಷವನ್ನು ಪರಿಷ್ಕರಿಸಲಾಗಿದೆ. ಬಿಡುಗಡೆಯಾದ ಹೊಸದರಲ್ಲಿ ಈ ಹೊಸ ಸರಣಿ ಅತೀವ ಉತ್ಸಾಹವನ್ನು ಮೂಡಿಸಿತ್ತು. ಆದರೆ ಸದ್ಯದ ಆರ್ಥಿಕ ಬೆಳವಣಿಗೆಯ ವಿದ್ಯಮಾನಗಳ ಹಿನ್ನೆಲೆಯಲ್ಲಿ ಆ ಉತ್ಸಾಹ ತಗ್ಗುತ್ತಿದೆ. ಆರಂಭದ ಉತ್ಸಾಹವು ಕ್ರಮೇಣ ಆತಂಕವಾಗಿ ಬದಲಾಗುತ್ತಿದೆ.

ಭಾರತವು 4 ಟ್ರಿಲಿಯನ್ ಡಾಲರ್ ಮೌಲ್ಯದ ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿದೆ ಎಂದು ಬಿಂಬಿಸಲಾಗಿತ್ತು. ಆದರೆ ಹೊಸ ಜಿಡಿಪಿ ಸರಣಿಯು ಈ ಬಗ್ಗೆ ಅನುಮಾನ ಸೃಷ್ಟಿಸಿದೆ. ಇದರ ಅಂದಾಜು ಆರ್ಥಿಕತೆಯ ವಾಸ್ತವ ಸ್ಥಿತಿಗೆ ಹೆಚ್ಚು ಹತ್ತಿರವಿರುವಂತೆ ತೋರುತ್ತದೆ. ಇದನ್ನು ನೋಡಿದಾಗ ನಿಜವಾದ ಅಂಕಿಅಂಶಗಳು ಹೇಳುತ್ತಿರುವ ಕಥೆಯೇ ಬೇರೆಯೇನೋ ಅನ್ನುವ ಅನುಮಾನ ಮೂಡುತ್ತದೆ. ಹಳೆಯ ಅಂದಾಜಿಗೆ ಹೋಲಿಸಿದರೆ ನಾಮಿನಲ್ ಜಿಡಿಪಿ ಕಡಿಮೆ ಇದೆ. ಅಷ್ಟೇ ಅಲ್ಲ ನಿರಂತರವಾಗಿ ಕಡಿಮೆಯಾಗುತ್ತಿದೆ. ಇದನ್ನು ನೋಡಿದರೆ ಈವರೆಗೆ ನಾವು ಜಿಡಿಪಿಯನ್ನು ಉತ್ಪ್ರೇಕ್ಷಿಸಿದ್ದೇವಾ ಅನ್ನುವ ಅನುಮಾನ ಬರುತ್ತದೆ.

ಬದಲಾವಣೆಯ ಹಿನ್ನೆಲೆ ಮತ್ತು ಮಹತ್ವ

ಫೆಬ್ರವರಿ 27ರಂದು, ಕೇಂದ್ರ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು [MoSPI] 2022–23ನ್ನು ಆಧಾರ ವರ್ಷವಾಗಿಟ್ಟುಕೊಂಡ ಹೊಸ ಜಿಡಿಪಿ ಸರಣಿಯನ್ನು ಅಧಿಕೃತವಾಗಿ ಬಿಡುಗಡೆ ಮಾಡಿದೆ. ಮೊದಲು 2011–12ನ್ನು ಆಧಾರವರ್ಷವನ್ನಾಗಿ ತೆಗೆದುಕೊಳ್ಳಲಾಗಿತ್ತು. ಪ್ರಸ್ತುತ ಆರ್ಥಿಕ ವ್ಯವಸ್ಥೆಯನ್ನು ನಿಖರವಾಗಿ ಬಿಂಬಿಸುವ ಉದ್ದೇಶದಿಂದ ಆಧಾರ ವರ್ಷವನ್ನು ಬದಲಿಸಲಾಗಿದೆ.

ಜಿಡಿಪಿಯ ಈ ಪರಿಷ್ಕರಣೆಯು ಅತ್ಯಂತ ಮಹತ್ವದ್ದು ಮತ್ತು ಸಕಾಲಿಕವಾದದ್ದು. ಏಕೆಂದರೆ, ಇತ್ತೀಚೆಗೆ ಅಂತರಾಷ್ಟ್ರೀಯ ಹಣಕಾಸು ನಿಧಿ [IMF] ತನ್ನ 2025ರ ಆರ್ಟಿಕಲ್ ನಾಲ್ಕನೆ ವರದಿಯಲ್ಲಿ ಭಾರತದ ರಾಷ್ಟ್ರೀಯ ಲೆಕ್ಕಪತ್ರ ಅಂಕಿಅಂಶಗಳ [National Accounts Statistics] ಶ್ರೇಣಿಯನ್ನು 'ಸಿ' ದರ್ಜೆಗೆ ಇಳಿಸಿತ್ತು. ತೀರಾ ಹಳೆಯ ವರ್ಷವನ್ನು ಆಧಾರವರ್ಷವನ್ನಾಗಿ ಇಟ್ಟುಕೊಂಡಿದ್ದರಿಂದ ಲೆಕ್ಕಾಚಾರದ ವಿಧಾನ, ದತ್ತಾಂಶದ ಲಭ್ಯತೆ ಮತ್ತು ಗುಣಮಟ್ಟದ ಬಗ್ಗೆ ವರದಿ ಅನೇಕ ಕಳವಳಗಳನ್ನು ವ್ಯಕ್ತಪಡಿಸಿತ್ತು. ವರದಿ ವ್ಯಕ್ತಪಡಿಸಿದ್ದ ಹಲವು ಅನುಮಾನಗಳನ್ನು ಹೊಸ ಸರಣಿಯು ಸರಿಪಡಿಸಿದೆ. ಸದ್ಯಕ್ಕೆ ಮೋಸ್ಪಿ 2022–23ರಿಂದ 2025–26ರವರೆಗಿನ ನಾಲ್ಕು ವರ್ಷಗಳ ಒಟ್ಟು ದತ್ತಾಂಶವನ್ನು ಬಿಡುಗಡೆ ಮಾಡಿದೆ.

ಒಟ್ಟಾರೆ ಬದಲಾವಣೆ

ಈ ಹೊಸ ಸರಣಿಯಲ್ಲಿ ಕೆಲವು ಕುತೂಹಲಕಾರಿ ಸಂಗತಿಗಳು ವ್ಯಕ್ತವಾಗಿದೆ. ಜೊತೆಗೆ ಹೊಸ ಸವಾಲುಗಳು ಎದುರಾಗಿವೆ. ಹಳೆಯ ಸರಣಿಯು 'ನಾಮಿನಲ್ ಜಿಡಿಪಿ'ಯನ್ನು ನಿರಂತರವಾಗಿ ಸುಮಾರು ಶೇ. 3ರಿಂದ4 ರಷ್ಟು ಉತ್ಪ್ರೇಕ್ಷಿಸಿ ಅಂದಾಜು ಮಾಡಿತ್ತು ಎಂಬುದು ಈ ಹೊಸ ದತ್ತಾಂಶದಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ (ಕೋಷ್ಟಕ 1ರಲ್ಲಿ ನೀಡಿದಂತೆ).

ಲೆಕ್ಕಾಚಾರದ ವಿಧಾನ ಮತ್ತು ದತ್ತಾಂಶದ ಆಕರಗಳು

ಹೊಸ ಜಿಡಿಪಿ ಸರಣಿಯಲ್ಲಿ 'ಡಬಲ್ ಡಿಫ್ಲೇಷನ್' (ಎರಡು ಹಂತದ–ಹಣದುಬ್ಬರ ಇಳಿತ) ರೀತಿಯ ([MOSPI], 2025ರ ವರ್ಷಾಂತ್ಯದ ಪರಾಮರ್ಶೆ) ಲೆಕ್ಕಾಚಾರದ ಬದಲಾವಣೆಗಳನ್ನು ಮಾಡಲಾಗಿದೆ. ಜೊತೆಗೆ ಈ ಹೊಸ ಸರಣಿಯು ಅಸಂಘಟಿತ ವಲಯದ ಉದ್ಯಮಗಳ ವಾರ್ಷಿಕ ಸಮೀಕ್ಷೆ [ASUSE] ಮತ್ತು ಅವಧಿವಾರು ಕಾರ್ಮಿಕ ಬಲ ಸಮೀಕ್ಷೆಯಂತಹ [PLFS] ವಾರ್ಷಿಕ ಸಮೀಕ್ಷೆಗಳ ದತ್ತಾಂಶಗಳನ್ನು ಹೇರಳವಾಗಿ ಬಳಸಿಕೊಂಡಿದೆ. ವಿವಿಧ ವಲಯಗಳ ಕೊಡುಗೆಯನ್ನು ನಿಖರವಾಗಿ ದಾಖಲಿಸಲು ಸರ್ಕಾರಿ ಆಡಳಿತಾತ್ಮಕ ದತ್ತಾಂಶಗಳನ್ನು ಅಳವಡಿಸಿಕೊಳ್ಳಲಾಗಿದೆ. ಇದಲ್ಲದೆ, ಕುಟುಂಬಗಳ ಬಳಕೆ ವೆಚ್ಚದ ಸಮೀಕ್ಷೆ, ಉತ್ಪಾದನೆ ಮತ್ತು ಆಡಳಿತಾತ್ಮಕ ದತ್ತಾಂಶಗಳು ಹಾಗೂ ಸರಕು ಹರಿವಿನ ವಿಧಾನಗಳನ್ನು[Commodity Flow Approach] ಒಳಗೊಂಡ ಒಂದು ಮಿಶ್ರ ಪದ್ಧತಿಯನ್ನು ಬಳಸಲಾಗಿದೆ. ಇದು ದೇಶದ ಒಟ್ಟಾರೆ ಬಳಕೆ ವೆಚ್ಚದ ಅಂದಾಜನ್ನು ಇನ್ನಷ್ಟು ಸದೃಢಗೊಳಿಸಿದೆ. ಇದರಿಂದಾಗಿ ಆದಾಯ ಮತ್ತು ವೆಚ್ಚದ ಎರಡೂ ಮಗ್ಗಲಿನ ಆರ್ಥಿಕತೆಯ ನಿಜವಾದ ಚಿತ್ರಣ ಲಭ್ಯವಾಗುತ್ತಿದೆ. ಆದರೆ, ಈ ಪ್ರಕ್ರಿಯೆಯು ಇದುವರೆಗೆ ಜಿಡಿಪಿ ಮೌಲ್ಯವನ್ನು ನಿರಂತರ ಉತ್ಪ್ರೇಕ್ಷಿಸಿ ಅಂದಾಜು ಮಾಡಲಾಗುತ್ತಿದೆ ಎಂಬ ಸಂಗತಿಯನ್ನು ಹೊರಹಾಕಿದೆ (ಕೋಷ್ಟಕ 1 ನೋಡಿ).

ವ್ಯವಸ್ಥಿತ ವ್ಯತ್ಯಾಸಗಳು

ನಾಮಿನಲ್ ಜಿಡಿಪಿಯ ಹಳೆಯ ಮತ್ತು ಹೊಸ ಸರಣಿಗಳನ್ನು 'ವೆಚ್ಚದ ವಿಧಾನ' ಹಾಗೂ 'ಮೌಲ್ಯವರ್ಧಿತ (ಉತ್ಪಾದನಾ) ವಿಧಾನ'ಗಳ ಅಡಿಯಲ್ಲಿ ಪ್ರತ್ಯೇಕವಾಗಿ ಹೋಲಿಸಿದಾಗ, ಈ ಕೆಳಮುಖ ಪರಿಷ್ಕರಣೆಯಲ್ಲಿ ಒಂದು ವ್ಯವಸ್ಥಿತ ವಿನ್ಯಾಸ ನಮಗೆ ಕಂಡುಬರುತ್ತದೆ.

ಹಳೆಯ ಸರಣಿಯು ನಾಮಿನಲ್ ಬಳಕೆ ವೆಚ್ಚದ ದತ್ತಾಂಶವನ್ನು ಸತತವಾಗಿ ಶೇಕಡಾ 10ರಿಂದ 12ರಷ್ಟು ಅತಿಯಾಗಿ ಅಂದಾಜಿಸುತ್ತಿತ್ತು (ಕೋಷ್ಟಕ 2). ಹಾಗೆಯೇ, ಹೂಡಿಕೆಯ ದತ್ತಾಂಶವನ್ನೂ ಸುಮಾರು ಶೇಕಡಾ 1–2ರಷ್ಟು ಹೆಚ್ಚಿಸಿ ತೋರಿಸುತ್ತಿತ್ತು. ಈ ಹೊಸ ಸರಣಿಯು ಕೋವಿಡ್ ಸಾಂಕ್ರಾಮಿಕದ ನಂತರ ಭಾರತೀಯರ ಬಳಕೆಯ ಮಟ್ಟವು ಕುಂಠಿತಗೊಂಡಿದೆ ಎಂಬ ವಾಸ್ತವವನ್ನು ಬಹುತೇಕ ದೃಢಗೊಳಿಸಿದೆ.

ವಲಯವಾರು ವ್ಯತ್ಯಾಸಗಳು

ಒಟ್ಟು ಜಿಡಿಪಿಯ ಪರಿಷ್ಕೃತಿ ಅಂದಾಜಿನಲ್ಲಿ ಕಾಣುವ ಈ ಇಳಿಕೆಯು ಎಲ್ಲಾ ವಲಯಗಳಲ್ಲಿ ಸಮಾನವಾಗಿ ಆಗಿದೆಯೇ? ಖಂಡಿತ ಇಲ್ಲ, ಇಲ್ಲಿಯೂ ನಾವೊಂದು ವ್ಯವಸ್ಥಿತ ಮಾದರಿಯನ್ನು ಕಾಣಬಹುದು. ಸೇವಾವಲಯದಲ್ಲಿ ಶೇಕಡ 7ರಿಂದ 8ರಷ್ಟು ತೀವ್ರವಾದ ಇಳಿಕೆಯಾಗಿದೆ. ಸೇವಾವಲಯ ಒಟ್ಟಾರೆ ಆರ್ಥಿಕತೆಯ ಶೇ. 56ಕ್ಕಿಂತ ಹೆಚ್ಚಿದೆ (ಕೋಷ್ಟಕ 3).

ಮತ್ತೊಂದೆಡೆ, ಮುಖ್ಯವಾಗಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳನ್ನು ಒಳಗೊಂಡಿರುವ ಪ್ರಾಥಮಿಕ ವಲಯದ ಜಿಡಿಪಿಯಲ್ಲಿ ಶೇಕಡ 4ರಿಂದ 6ರಷ್ಟು ಏರಿಕೆಯಾಗಿದೆ. ಭಾರತದ ಬೆಳವಣಿಗೆಯ ಎಂಜಿನ್ ಆಗಿರುವ ಸೇವಾವಲಯದ ಜಿಡಿಪಿ ಕುಸಿದಿರುವುದು ಮತ್ತು ಉತ್ಪಾದನಾ ವಲಯದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಬೆಳವಣಿಗೆಯಾಗದಿರುವುದು ನಿಜಕ್ಕೂ ಆತಂಕದ ಸಂಗತಿಯಾಗಿದೆ.

ರೂಪಾಯಿ ಮೌಲ್ಯದ ಕುಸಿತದ ಪ್ರಭಾವ

ಆರ್ಥಿಕತೆಯ ಒಟ್ಟಾರೆ ಗಾತ್ರದಲ್ಲಿ ದೊಡ್ಡ ಪ್ರಮಾಣದ ಕುಸಿತವಾಗಿದೆ. ಡಾಲರ್ ಎದುರು ರೂಪಾಯಿಯ ಮೌಲ್ಯವು 80 ರೂಪಾಯಿಯಿಂದ 88 ರೂಪಾಯಿಗೆ ಕುಸಿದಿದೆ. ಇನ್ನೊಂದೆಡೆ, ಅಂದಾಜು ನಾಮಿನಲ್ ಜಿಡಿಪಿಯ ಪ್ರಮಾಣವೂ ಕಡಿಮೆಯಾಗಿದೆ. ಈ ಅವಳಿ ಹೊಡೆತಗಳಿಂದಾಗಿ, 2022–23ರಿಂದ 2025–26ರ ಅವಧಿಯಲ್ಲಿ ಡಾಲರ್ ಮೌಲ್ಯದಲ್ಲಿ ಜಿಡಿಪಿ ಬೆಳವಣಿಗೆಯು ತೀರಾ ಕುಂಠಿತಗೊಂಡಿದೆ.

ರೂಪಾಯಿ/ಯುಎಸ್ ಡಾಲರ್ ನಡುವಿನ ಸರಾಸರಿ ವಿನಿಮಯ ದರವನ್ನು ಆಧರಿಸಿ ಲೆಕ್ಕ ಹಾಕಿದಾಗ, ಭಾರತದ ಆರ್ಥಿಕತೆಯು 3.24 ಟ್ರಿಲಿಯನ್ ಡಾಲರ್‌ನಿಂದ 3.93 ಟ್ರಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ (ಕೋಷ್ಟಕ 1). ಅಂದರೆ, ಈ ನಾಲ್ಕು ವರ್ಷಗಳಲ್ಲಿ 0.69 ಟ್ರಿಲಿಯನ್ ಡಾಲರ್‌ನಷ್ಟು ಬೆಳೆದಿದೆ. ರೂಪಾಯಿ ಹಿಂದೆಂದು ಕಾಣದ ಪ್ರಮಾಣದಲ್ಲಿ ಕುಸಿದಿದೆ. ಇದರಿಂದಾಗಿ 2025–26ರ ಅವಧಿಯಲ್ಲಿ ಆರ್ಥಿಕತೆಯ ಬೆಳವಣಿಗೆಯ ವೇಗ ಗಣನೀಯವಾಗಿ ಕಡಿಮೆಯಾಗಿದೆ. ಹೆಚ್ಚುತ್ತಿರುವ ಜಾಗತಿಕ ರಾಜಕೀಯ ಉದ್ವಿಗ್ನತೆ, ನಡೆಯುತ್ತಿರುವ ಯುದ್ಧಗಳು ಮತ್ತು ಟ್ರಂಪ್ ಅವರ ಸುಂಕದ ಹಠಮಾರಿ ಧೋರಣೆಗಳ ನಡುವೆ ರೂಪಾಯಿ ಮೇಲಿನ ಒತ್ತಡ ಮುಂದಿನ ದಿನಗಳಲ್ಲಿ ಮತ್ತಷ್ಟು ತೀವ್ರವಾಗುವ ಸಾಧ್ಯತೆಯಿದೆ.

ಇದರ ಪರಿಣಾಮಗಳು:

2047ರ ವೇಳೆಗೆ ಭಾರತವನ್ನು 30 ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿ ಮಾಡುವ ಗುರಿ ಈಗ ಕಠಿಣವಾಗುತ್ತಿದೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಿದೆ.

ಎರಡನೆಯದಾಗಿ, ಆರ್ಥಿಕ ಬೆಳವಣಿಗೆಯ ನಿರೂಪಣೆಯಲ್ಲಿರುವ ಮಿತಿಗಳನ್ನು ಅರ್ಥಮಾಡಿಕೊಳ್ಳಲು ನಾವು ಲೆಕ್ಕಾಚಾರದ ಕ್ರಮದಲ್ಲಿರುವ ಸಮಸ್ಯೆಗಳನ್ನು ಎತ್ತಿತೋರಿಸುವ ಅವಶ್ಯಕತೆಯಿದೆ. ಅಸಂಘಟಿತ ವಲಯದ ಲೆಕ್ಕಾಚಾರಕ್ಕಾಗಿ ಸಂಘಟಿತ ವಲಯದ ಸಾಧನೆಯನ್ನು ಆಧಾರವಾಗಿಟ್ಟುಕೊಂಡಿರುವುದು ಒಂದು ವೇಳೆ ಜಿಡಿಪಿಯ ಅಂದಾಜು ಹೆಚ್ಚಾಗಿರುವುದಕ್ಕೆ ಕಾರಣವಾಗಿದ್ದರೆ, ಕೋವಿಡ್ ಕಾಲದ ನಾಮಿನಲ್ ಜಿಡಿಪಿ ವಾಸ್ತವವಾಗಿ ಇನ್ನೂ ಕಡಿಮೆ ಇರಬೇಕಿತ್ತು. ಏಕೆಂದರೆ, ಕೋವಿಡ್ ಸಮಯದಲ್ಲಿ ಸಂಘಟಿತ ವಲಯಕ್ಕೆ ಹೋಲಿಸಿದರೆ ಅಸಂಘಟಿತ ವಲಯದ ಮೇಲೆ ವಿಪರೀತ ಪರಿಣಾಮವಾಗಿತ್ತು.

ನಾಮಿನಲ್ ಜಿಡಿಪಿ ಕುಸಿಯುತ್ತಿದ್ದರೂ ನೈಜ ಜಿಡಿಪಿ(ಅಂದರೆ ನಾಮಿನಲ್ ಜಿಡಿಪಿಯಲ್ಲಿ ಹಣದುಬ್ಬರದ ಪರಿಣಾಮವನ್ನು ಕಳೆದ ನಂತರದ ಜಿಡಿಪಿ) ಏರುತ್ತಿರುವುದು ಒಂದು ವೈರುಧ್ಯದ ಸಂಗತಿ. ಇದು 'ಜಿಡಿಪಿ ಡಿಫ್ಲೇಟರ್'ನ ಲೆಕ್ಕಾಚಾರಕ್ಕೆ ಸಂಬಂಧಿಸಿದೆ. ದ್ವಿ–ಹಣದುಬ್ಬರ ಇಳಿತ [Double Deflation] ಪದ್ಧತಿಯನ್ನು ಅಳವಡಿಸಿಕೊಂಡಿದ್ದರೂ (ಅಂದರೆ, ಉತ್ಪಾದನೆ ಮತ್ತು ಇನ್‌ಪುಟ್‌ಗಳಿಗೆ ಪ್ರತ್ಯೇಕ 'ಡಿಫ್ಲೇಟರ್'ಗಳನ್ನು ಬಳಸುವುದು), ನಿರ್ದಿಷ್ಟ ವಲಯವಾರು ಬೆಲೆ ಸೂಚ್ಯಂಕಗಳು (ವಿಶೇಷವಾಗಿ ಸೇವಾ ವಲಯದಲ್ಲಿ) ದೊರೆಯದೇ ಇರುವುದರಿಂದ ನಾವು ಇಂದಿಗೂ ಗ್ರಾಹಕ ಬೆಲೆ ಸೂಚ್ಯಂಕ [CPI] ಮತ್ತು ಸಗಟು ಬೆಲೆ ಸೂಚ್ಯಂಕಗಳ [WPI] ಮಿಶ್ರಣವನ್ನೇ ಬಳಸುವುದನ್ನು ಮುಂದುವರಿಸಿದ್ದೇವೆ.

ಕಚ್ಚಾ ವಸ್ತುಗಳ [Inputs] ಮೌಲ್ಯವನ್ನು ಸರಿಹೊಂದಿಸಲು ನಾವು ಸಗಟು ಬೆಲೆ ಸೂಚ್ಯಂಕವನ್ನು [WPI] ಹೆಚ್ಚಾಗಿ ಬಳಸುತ್ತೇವೆ. ಆದರೆ ಕಳೆದ ಕೆಲವು ವರ್ಷಗಳಿಂದ ಈ ಸಗಟು ಬೆಲೆ ಹಣದುಬ್ಬರವು ತುಂಬಾ ಕಡಿಮೆಯಿದೆ. ಸಗಟು ಬೆಲೆ ಹಣದುಬ್ಬರವು ಕಡಿಮೆ ಇದ್ದಾಗ, ನೈಜ ಜಿಡಿಪಿ [Real GDP)] ಅಂದಾಜು ಹೆಚ್ಚಾಗಿ ಕಾಣಿಸುತ್ತದೆ. ವಾಸ್ತವವಾಗಿ, ಈ ಅಂಶವು ಕಳೆದ ಕೆಲವು ಸಮಯದಿಂದ ಆರ್ಥಿಕ ವಲಯದಲ್ಲಿ ತೀವ್ರ ಚರ್ಚೆಗೆ ಒಳಗಾಗುತ್ತಿದೆ. [(see Subramanian 2019, and Anand, Felman, & Subramanian 2026)]

ಅಂತಿಮವಾಗಿ, ನಾಮಿನಲ್ ಜಿಡಿಪಿ ದರದಲ್ಲಿನ ಕುಸಿತವನ್ನು ನಾವು ಸಂಸ್ಥೆಗಳ ಅಥವಾ ಕಂಪನಿಗಳ ಮಟ್ಟದ ಚಟುವಟಿಕೆಗಳ ದೃಷ್ಟಿಕೋನದಿಂದ ನೋಡಬೇಕಿದೆ. ಬೆಳವಣಿಗೆಗೆ ಅಡ್ಡಿಯಾಗುತ್ತಿರುವ ಅಂಶಗಳು ಯಾವುವು ಎಂಬುದನ್ನು ತಿಳಿಯಲು ಇದು ಸಹಕಾರಿಯಾಗುತ್ತದೆ. ಇದಕ್ಕಾಗಿ ಕಂಪನಿಗಳ ಮಾರಾಟದ ಪ್ರಮಾಣ ಮತ್ತು ಅವುಗಳು ಬೆಲೆಗಳನ್ನು ನಿರ್ಧರಿಸುವ ರೀತಿಯನ್ನು ನಾವು ವಿಶ್ಲೇಷಿಸಬೇಕಿದೆ.

[Das is ICICI Bank Chair Professor, Indian Institute of Management Ahmedabad (IIM-A) and Roy Trivedi is Associate Professor, National Institute of Bank Management (NIBM).]

Originally published in BusinessLine Updated - April 17, 2026 at 06:15 AM.

[https://www.thehindubusinessline.com/opinion/insights-from-new-gdp-data/article70870248.ece]

ಕೋಷ್ಟಕ: 1

ನಾಮಿನಲ್ ಜಿಡಿಪಿಯ ಹೋಲಿಕೆ (ಹೊಸ ವರ್ಸಸ್ ಹಳೆಯ ಸರಣಿಯಲ್ಲಿ)

	2022–23	2023–24	2024–25	2025–26
ಎ. ನಾಮಿನಲ್ ಜಿಡಿಪಿ –ಹೊಸ ಸರಣಿ (ಆಧಾರ:2022–23)	2,61,17,627	2,89,83,909	3,18,07,309	3,45,47,157
	–	–11	–9.7	–8.6
ಬಿ. ನಾಮಿನಲ್ ಜಿಡಿಪಿ –ಹಳೆಯ ಸರಣಿ (ಆಧಾರ:2022–23)	2,68,90,473	3,01,22,956	3,30,68,145	3,57,13,886
ಸಿ. ಎ ಮತ್ತು ಬಿ ನಡುವಿನ ವ್ಯತ್ಯಾಸ(ಎ–ಬಿ)	–	–12	–9.8	–8
ಶೇಕಡವಾರು ವ್ಯತ್ಯಾಸ	–7,72,846	–11,39,047	–12,60,836	–11,66,729
ಸರಣಿ (ಆಧಾರ:2022–23)	–2.9	–3.8	–3.8	–3.3
ರೂಪಾಯಿ/ಡಾಲರ್(ಸರಾಸರಿ)	80.5136	82.7921	84.5698	88.0136
ಡಿ. ನಾಮಿನಲ್ ಜಿಡಿಪಿ (ಟ್ರಿಲಿಯನ್ ಅಮೇರಿಕೆಯ ಡಾಲರಿನಲ್ಲಿ)	3.24	3.5	3.76	3.93
(ಅಧಾರ: 2022–23)				

ಕೋಷ್ಟಕ: 2

ವೆಚ್ಚ ಆಧಾರಿತ ನಾಮಿನಲ್ ಜಿಡಿಪಿಯ ಲೆಕ್ಕಾಚಾರದಲ್ಲಿ ವ್ಯತ್ಯಾಸಗಳು (ಹಳೆಯ ಮತ್ತು ಹೊಸ ಸರಣಿಯಲ್ಲಿ)

ಘಟಕಗಳು	2022–23	2023–24	2024–25	2025–26
ಬಳಕೆ [PFCE]	–16,05,034	–17,53,606	–23,27,804	–23,85,647
ಶೇಕಡಾವಾರು ವ್ಯತ್ಯಾಸ (%)	–9.7	–9.7	–11.5	–10.9
ಸರ್ಕಾರಿ ವೆಚ್ಚ [GFCE]	1,33,281	–30,410	92,217	2,00,723
ಶೇಕಡಾವಾರು ವ್ಯತ್ಯಾಸ (%)	4.8	–1	2.8	5.7
ಹೂಡಿಕೆ [GFCF]	57,468	80,528	1,78.798	2,33,045
ಶೇಕಡಾವಾರು ವ್ಯತ್ಯಾಸ (%)	0.7	0.9	1.8	2.2
ಜಿಡಿಪಿ [GDP]	–7,72,846	–11,39,047	–12,60,836	–11,66,729
ಶೇಕಡಾವಾರು ವ್ಯತ್ಯಾಸ (%)	–2.9	–3.8	–3.8	–3.3

ಕೋಷ್ಟಕ: 3

ವೆಚ್ಚ ಆಧಾರಿತ ನಾಮಿನಲ್ ಜಿಡಿಪಿಯ ಲೆಕ್ಕಾಚಾರದಲ್ಲಿ ವ್ಯತ್ಯಾಸಗಳು (ಹಳೆಯ ಮತ್ತು ಹೊಸ ಸರಣಿಯಲ್ಲಿ)

ವಲಯಗಳು	2022–23	2023–24	2024–25	2025–26
ಎ. ಪ್ರಾಥಮಿಕ ವಲಯ	3,02,196	2,45,375	2,36,165	2,59,971
ಶೇಕಡಾವಾರು ವ್ಯತ್ಯಾಸ (%)	6.1	4.5	4	4.4
ಬಿ. ದ್ವಿತೀಯ ವಲಯ	–1,34,188	–2,21,550	–1,69,343	–52,057
ಶೇಕಡಾವಾರು ವ್ಯತ್ಯಾಸ (%)	–2.1	–3.1	–2.2	–0.6
ಸಿ. ತೃತೀಯ ವಲಯ	–10,50,945	–11,20,610	–12,34,387	–11,94,941
ಶೇಕಡಾವಾರು ವ್ಯತ್ಯಾಸ (%)	–7.9	–7.5	–7.5	–6.6
ಮೂಲ ಬೆಲೆಗಳಲ್ಲಿ ಜಿವಿಎ [GVA]	–8,82,937	–10,96,785	–11,67,565	–9,87,027
ಶೇಕಡಾವಾರು ವ್ಯತ್ಯಾಸ (%)	–3.6	–4	–3.9	–3.1

ಜಾಗತಿಕವಾಗಿ ಫಲವತ್ತತೆಯೇಕೆ ಕ್ಷೀಣಿಸುತ್ತಿದೆ?

ಕ್ಲಾಡಿಯಾ ಗೋಲ್ಡಿನ್



ಅಮೆರಿಕ, ಹಲವು ಯುರೋಪ್ ದೇಶಗಳು ಮತ್ತೆ ಏಷ್ಯಾದ ಫಲವತ್ತತೆ (ಮಕ್ಕಳ ಜನನ ಪ್ರಮಾಣ) ಕಡಿಮೆಯಾಗುತ್ತಿದೆ ಅಂತ ತುಂಬಾ ಚರ್ಚೆಯಾಗುತ್ತಿದೆ. ಆದರೆ ವಾಸ್ತವವೆಂದರೆ ಕಳೆದ 50 ವರ್ಷಗಳಿಂದ ಈ ಬದಲಾವಣೆ ಎಲ್ಲಾ ಕಡೆಯೂ ಆಗುತ್ತಿದೆ. ಪ್ರಪಂಚದ ಬಹುತೇಕ ಎಲ್ಲಾ ದೇಶಗಳಲ್ಲೂ ಈಗ ಜನನ ದರ ಗಣನೀಯವಾಗಿ ಕಡಿಮೆಯಾಗುತ್ತಿದೆ.

ಸಂಯುಕ್ತ ಸಂಸ್ಥಾನದಲ್ಲಿ 193 ದೇಶಗಳಿವೆ. ಈ ಗುಂಪಿನಲ್ಲಿನ ಅರ್ಧದಷ್ಟು ದೇಶಗಳಲ್ಲಿ ಒಟ್ಟಾರೆಯಾಗಿ ವಿಶ್ವದ ಎರಡನೇ ಮೂರರಷ್ಟು ಜನಸಂಖ್ಯೆಯಿದೆ. 2022ರ ಹೊತ್ತಿಗೆ ಈ ದೇಶಗಳಲ್ಲಿ ಪ್ರತಿ ಮಹಿಳೆಗೆ ಸರಾಸರಿ 2.1ಕ್ಕಿಂತ ಕಡಿಮೆ ಮಕ್ಕಳಾಗುತ್ತಿದ್ದವು. ಅಂದರೆ ಜನಸಂಖ್ಯೆ ಈಗಿರುವಷ್ಟೇ ಪ್ರಮಾಣದಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಿಲ್ಲದ ಸ್ಥಿತಿಯಲ್ಲಿದ್ದೇವೆ (ಕನಿಷ್ಠ ಈಗಿರುವಷ್ಟೇ ಪ್ರಮಾಣದ ಜನಸಂಖ್ಯೆಯನ್ನು ಕಾಪಾಡಿಕೊಳ್ಳಬೇಕಾದರೆ ಪ್ರತಿ ಕುಟುಂಬದಲ್ಲಿ 2.1ಕ್ಕಿಂತ ಹೆಚ್ಚು ಅಂದರೆ ಕನಿಷ್ಠ ಇಬ್ಬರು ಮಕ್ಕಳು ಇರಬೇಕು). ಅಮೇರಿಕೆಯಲ್ಲಿ ಫಲವತ್ತತೆ ಕುಸಿಯುವ ಪ್ರಕ್ರಿಯೆ ಹಲವು ದಶಕಗಳ ಹಿಂದೆಯೇ ಪ್ರಾರಂಭವಾಯಿತು. ಇತ್ತೀಚೆಗೆ ಪ್ರಪಂಚದ ಉಳಿದ ಹಲವು ದೇಶಗಳೂ ಈ ಗುಂಪಿಗೆ ಸೇರಿವೆ. ಈ ಫಲವತ್ತತೆ ಕುಸಿತ ಆಧುನಿಕ ಯುಗದ ಜನಸಂಖ್ಯಾಶಾಸ್ತ್ರದ ಅತಿ ದೊಡ್ಡ ಅಚ್ಚರಿಗಳಲ್ಲಿ ಒಂದು. ಏಕೆಂದರೆ ಈಗ ಫಲವತ್ತತೆ ಮತ್ತು ತಲಾ ಆದಾಯದ ಮಟ್ಟಗಳ ನಡುವೆ ನೇತ್ಯಾತ್ಮಕ ಸಂಬಂಧವನ್ನು ನೋಡುತ್ತಿದ್ದೇವೆ (ತಲಾ ಆದಾಯ ಹೆಚ್ಚಾದಂತೆಲ್ಲ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ).

ಈ ಸಂಬಂಧವನ್ನು 1960ರಿಂದಲೇ ಅರ್ಥಶಾಸ್ತ್ರಜ್ಞರು ಅಧ್ಯಯನ ಮಾಡುತ್ತಿದ್ದಾರೆ. ಬಗೆಬಗೆಯ ವಿವರಣೆಗಳನ್ನು ನೀಡಿದ್ದಾರೆ. ಕಡಿಮೆ ಆದಾಯ ಹೊಂದಿರುವ ಕುಟುಂಬಗಳಿಗೆ ಹಾಗೂ ದೇಶಗಳಿಗೆ ಗರ್ಭನಿರೋಧಕಗಳ ತಿಳುವಳಿಕೆ ಇರಲಿಲ್ಲ ಮತ್ತು ತಂತ್ರಜ್ಞಾನದ ಕೊರತೆಯಿತ್ತು ಅನ್ನುವ ವಾದ ಒಂದು ಕಡೆಯಾದರೆ, ಇನ್ನೊಂದು ಕಡೆಯಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಅತ್ಯುತ್ತಮ ಆರೋಗ್ಯ, ಶಿಕ್ಷಣ ಮತ್ತು ತರಬೇತಿಯನ್ನು ನೀಡಲು ಬಯಸುತ್ತಾರೆ. ಹಾಗಾಗಿ ಆದಾಯ ಹೆಚ್ಚಾದಂತೆ ಮಕ್ಕಳನ್ನು ಬೆಳೆಸುವ ವೆಚ್ಚವೂ ಹೆಚ್ಚಾಗುತ್ತದೆ ಎನ್ನುವ ವಿವರಣೆ ನೀಡಲಾಗಿದೆ. ಆದರೆ ಇವುಗಳಲ್ಲಿ ಹೆಚ್ಚಿನ ವಿವರಣೆಗಳು ತಪ್ಪು ಅಥವಾ ಅಪೂರ್ಣ ಅನ್ನುವುದು ಸಾಬೀತಾಗಿದೆ. .

ಉದಾಹರಣೆಗೆ, ಆಧುನಿಕ ಕುಟುಂಬಯೋಜನೆಯ ವಿಧಾನಗಳು ವ್ಯಾಪಕವಾಗಿ ಬಳಕೆಯಾಗಲು ಪ್ರಾರಂಭವಾದ ನಂತರವೂ ಜನನ ದರದಲ್ಲಿ ಕುಸಿತದ ಪ್ರವೃತ್ತಿ ಮುಂದುವರಿಯಿತು. ಹಾಗಾಗಿ ಹೆಚ್ಚಿನ ಆದಾಯದ ಕುಟುಂಬಗಳಲ್ಲಿ ಕಡಿಮೆ ಆದಾಯದ ಕುಟುಂಬಗಳಿಗಿಂತ ಕಡಿಮೆ ಮಕ್ಕಳಿರುವುದಕ್ಕೆ ಬೇರೇನೋ ಕಾರಣವಿರಬೇಕು ಎನ್ನುವುದನ್ನು ಇದು ಸೂಚಿಸುತ್ತಿತ್ತು. ಕೇವಲ ಪರಿಣಾಮಕಾರಿಯಾದ ಗರ್ಭನಿರೋಧಕಗಳನ್ನು ಒದಗಿಸಿದರೆ ಅಥವಾ ಕಾನೂನುಬದ್ಧ ಗರ್ಭಪಾತ ಸೌಲಭ್ಯ ಒದಗಿಸಿದರೆ ಸಾಲುವುದಿಲ್ಲ. ಅದು ಯಾವಾಗಲೂ ಅವಶ್ಯಕ ಅಂತಲೂ ಅಲ್ಲ. 19ನೇ ಶತಮಾನದಲ್ಲಿ ಅಮೇರಿಕೆಯಲ್ಲಿ ಈ ಸೌಲಭ್ಯಗಳು ಇರಲಿಲ್ಲ. ಆಗ ಜನನ ದರ ಗಣನೀಯವಾಗಿ ಕಮ್ಮಿಯಾಗಿದ್ದನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಜನನ ದರದಲ್ಲಿ ನಿರಂತರವಾಗಿ, ಗಣನೀಯ ಪ್ರಮಾಣದಲ್ಲಿ ಇಳಿಯಬೇಕಾದರೆ, ಸಂತಾನೋತ್ಪತ್ತಿಯ ವಯೋಮಾನದ ವ್ಯಕ್ತಿಗಳು ಕಡಿಮೆ ಮಕ್ಕಳನ್ನು ಹೊಂದಲು ನಿರ್ಧರಿಸಬೇಕು. ಅದು ಮುಖ್ಯ. ಹಾಗೆಯೇ ಜನನ ದರದಲ್ಲಿ ಏರಿಕೆಯಾಗಬೇಕಾದರೆ ದಂಪತಿಗಳಿಗೆ ಹೆಚ್ಚು ಮಕ್ಕಳನ್ನು ಹೊಂದುವ ಇಚ್ಛೆ ಇರಬೇಕು. ಹಾಗೆಯೇ ಮಹಿಳೆಯರಿಗೆ ತಮ್ಮ ಮಕ್ಕಳಿಗೆ ಸರಿಯಾದ ಪೋಷಣೆ ದೊರೆಯುತ್ತದೆ ಎಂಬ ಭರವಸೆ ಇರಬೇಕು.

ಸ್ವತಃ ನನ್ನ ಸಂಶೋಧನೆಯ ಪ್ರಕಾರ ಫಲವತ್ತತೆ ಕುಸಿತಕ್ಕೆ ಮಹಿಳೆಯರಲ್ಲಿ ಹೆಚ್ಚುತ್ತಿರುವ ಕರ್ತೃತ್ವಶಕ್ತಿಯೇ [agency] ಕಾರಣ. ತಾವು ಪಡೆದ ಶಿಕ್ಷಣದಿಂದ ಸಿಗಬೇಕಾದ ಆರ್ಥಿಕ ಮತ್ತು ವೈಯಕ್ತಿಕ ಲಾಭಗಳು ತಮಗೆ ದೊರಕುತ್ತವೆಯೋ ಇಲ್ಲವೋ ಎನ್ನುವ ಅನಿಶ್ಚಿತತೆ ಅವರನ್ನು ಕಾಡುತ್ತಿದೆ. ಹಾಗೆಯೇ ತಮ್ಮ ಮಕ್ಕಳಿಗೆ ಅವಶ್ಯಕವಾಗಿರುವಷ್ಟು ಸಂಪನ್ಮೂಲಗಳು ದೊರಕುತ್ತವೆಯೋ ಇಲ್ಲವೋ ಎಂಬ ಆತಂಕವೂ ಅವರನ್ನು ಕಾಡುತ್ತಿರುತ್ತದೆ. ಮಹಿಳೆಯರು ತಮ್ಮ ಸ್ವಾತಂತ್ರ್ಯದ ಫಲವನ್ನು ಅನುಭವಿಸಿ, ಆನಂದಿಸಲು ಬೆಂಬಲವನ್ನು ಬಯಸುತ್ತಾರೆ. ಆದರೆ ಪುರುಷರಿಗೆ (ಮತ್ತು ಸರ್ಕಾರಗಳಿಗೆ) ಅದಕ್ಕೆ ವಿಶ್ವಾಸಾರ್ಹವಾದ ಭರವಸೆಗಳನ್ನು ಕೊಡಲಾಗುತ್ತಿಲ್ಲ. ಇವರಿಬ್ಬರ ನಡುವೆ ಹೊಂದಾಣಿಕೆಯಾಗುತ್ತಿಲ್ಲ. ಇದು ಫಲವತ್ತತೆಯ ಸಮಸ್ಯೆಯ ನಿಜವಾದ ಕಾರವಿರಬಹುದು.

ಹೆಚ್ಚಿನ ಶಿಕ್ಷಣವನ್ನು ಪಡೆದು, ಒಂದು ವೃತ್ತಿಯಲ್ಲಿ ಮುಂದುವರಿಯಲು ಸಾಧ್ಯವಿರುವ ಮಹಿಳೆ ತಾಯಿಯಾಗುವ ಮೊದಲು ಮಗುವಿನ ತಂದೆ ಕುಟುಂಬದೊಳಗಿನ ಹೊಣೆಗಾರಿಕೆಯನ್ನು ಹಂಚಿಕೊಳ್ಳುತ್ತಾನೆಯೇ, ಇಲ್ಲವೋ ಎನ್ನುವುದನ್ನು ಮುಖ್ಯವಾಗಿ ಪರಿಗಣಿಸುತ್ತಾಳೆ. ಸಂಭಾವ್ಯ ತಂದೆಯಿಂದ (ಅಥವಾ ಸರ್ಕಾರಗಳಿಂದ ಶಿಶುಪಾಲನಾ ಸೌಲಭ್ಯಗಳ) ಸೂಕ್ತ ಭರವಸೆಗಳು ದೊರಕದಿದ್ದಲ್ಲಿ ಅವಳು ತಾಯಾಗುವುದನ್ನು ಮುಂದೂಡಬಹುದು. ಅಥವಾ ತನ್ನ ವೃತ್ತಿಯಲ್ಲಿ ಹೆಚ್ಚಿನ ಅವಕಾಶ ಪಡೆಯುವುದಕ್ಕಾಗಿ ತಾಯಿ ಆಗುವುದೇ ಬೇಡವೆಂದು ನಿರ್ಧರಿಸಬಹುದು. ಪುರುಷರು ತಾವು ನಿಷ್ಪ್ರಯೋಜಕರಲ್ಲ, ಒಳ್ಳೆಯ ತಂದೆ ಆಗಬಲ್ಲವರು ಎನ್ನುವ ವಿಶ್ವಾಸ ಮತ್ತು ಭರವಸೆಯನ್ನು ಮೂಡಿಸಬೇಕು. ಆಗಷ್ಟೇ ಮಹಿಳಾ ಕರ್ತೃತ್ವ ಶಕ್ತಿಯಲ್ಲಿ ಹೆಚ್ಚಳವಿದ್ದಾಗ್ಯೂ ಜನನ ದರದಲ್ಲಿ ಏರಿಕೆಯಾಗುತ್ತದೆ. ಮಹಿಳೆಯರ ಈ ಆದ್ಯತೆಗಳು ಪುರುಷರ ಆದ್ಯತೆಗಳೂ ಆಗದೇ ಹೋದಲ್ಲಿ, ಈ ಅಸಾಮರಸ್ಯದಿಂದ ಫಲವತ್ತತೆಯಲ್ಲಿ ಇನ್ನೂ ದೊಡ್ಡ ಮಟ್ಟದ ಇಳಿಕೆಯಾಗಬಹುದು.

ಅಮೇರಿಕಾ ಅಥವಾ ಎರಡನೆಯ ಮಹಾಯುದ್ಧದ ನಂತರ ಒಂದು ಹಂತದಲ್ಲಿ ವೇಗವಾಗಿ ಅಭಿವೃದ್ಧಿ ಹೊಂದಿದ ಬೇರೆ ದೇಶಗಳಲ್ಲಿ, ಫಲವತ್ತತೆ ಇಳಿಕೆಗೆ ಹೆಂಗಸರ ಕರ್ತೃತ್ವಶಕ್ತಿಯಲ್ಲಿ ಆಗಿರುವ ಹೆಚ್ಚಳವೇ ಪ್ರಮುಖ ಕಾರಣ. ಜೊತೆಗೆ ಪುರುಷರು ಬದಲಾಗದೇ ಇರುವುದು ಈ ಪ್ರವೃತ್ತಿಯನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಹಾಗೆಂದ ಮಾತ್ರಕ್ಕೆ ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಇದೇ ರೀತಿಯ ಬೆಳವಣಿಗೆಯಾಗಿದೆ ಎಂದರ್ಥವಲ್ಲ.

ಅಮೇರಿಕೆಯಲ್ಲಿ ಜನನ ದರ ಕೆಲವು ಸಮಯದ ಹಿಂದೆ ಏಕಾಏಕಿ

ಕುಸಿಯಿತು. ಅಲ್ಲಿ ಮಹಿಳೆಯರಿಗೆ ತಡವಾಗಿ ಮದುವೆಯಲು, ಹೆಚ್ಚಿನ ಶಿಕ್ಷಣ ಪಡೆಯಲು ಮತ್ತು ವಿವಾಹಕ್ಕೆ ಮೊದಲೇ ವೃತ್ತಿಯಲ್ಲಿ ಹೆಚ್ಚಿನ ಅನುಭವ ಪಡೆಯಲು ಹೆಂಗಸರಿಗೆ ಸಾಮರ್ಥ್ಯವಿತ್ತು. ಹಾಗಾಗಿ ಅವರಿಗೆ ಹೆಚ್ಚಿನ ಸ್ವಾಯತ್ತತೆ ಇತ್ತು. ಮತ್ತು ಹೆಚ್ಚಿನ ಆಯ್ಕೆಗಳಿಗೆ ಅವಕಾಶವಿತ್ತು. ಜೊತೆಗೆ ಕಾಲೇಜು ಶಿಕ್ಷಣ ಪಡೆದ ಕಾರ್ಮಿಕರ ಆದಾಯದಲ್ಲೂ ಗಣನೀಯವಾಗಿ ಹೆಚ್ಚಳವಾಯಿತು. ಅದರಿಂದ ಮಹಿಳೆಯರ ಆಯ್ಕೆಗಳು ಹೆಚ್ಚು ಬೆಲೆಯುಳ್ಳದ್ದಾದವು. ಈ ನಡುವೆ ನಂಬಿ, ಆತುಕೊಳ್ಳಬಲ್ಲ ಪುರುಷರ (ತಂದೆಯರ ಸಂಖ್ಯೆ, ನಿಷ್ಪ್ರಯೋಜಕ ಅಪ್ಪಂದಿರದ್ದಲ್ಲ) ಸಂಖ್ಯೆ ಪ್ರಾಯಶಃ ಹೆಚ್ಚಾಗಲಿಲ್ಲ. ಇದರಿಂದ ಹೆಚ್ಚು ಶಿಕ್ಷಣ ಪಡೆದ ಹೆಂಗಸರಿಗೆ ಮಕ್ಕಳನ್ನು ಸಾಕುವುದರಿಂದ ಹೆಚ್ಚಿನ ಇತರ ಅವಕಾಶಗಳನ್ನು ಕಳೆದುಕೊಳ್ಳಬೇಕಾಗುತ್ತದೆ [the opportunity cost].

ಇನ್ನುಳಿದ ಪ್ರಕರಣಗಳಲ್ಲಿ, ಆರ್ಥಿಕ ಪ್ರಗತಿಯ ವೇಗ ಹಾಗೂ ಅದರ ಪರಿಣಾಮವಾಗಿ ವಿಭಿನ್ನ ತಲೆಮಾರುಗಳು ಮತ್ತು ಸ್ತ್ರೀ–ಪುರುಷರ ನಡುವೆ ತಲೆದೋರಿದ ಸಂಘರ್ಷಗಳಿಂದಾಗಿ ಜನನ ದರ ಕುಸಿಯುತ್ತಿದೆ ಎನ್ನಲಾಗಿದೆ. ಸ್ವತಃ ನಾನೇ ಅಭಿವೃದ್ಧಿ ಪಡಿಸಿರುವ ಮಾದರಿಯ ಪ್ರಕಾರ ತಲಾ ಆರ್ಥಿಕ ಪ್ರಗತಿಯ ವೇಗ ಹೆಚ್ಚಿದಷ್ಟೂ ಮಕ್ಕಳು ಬೇಕು ಅನ್ನೋ ವಿಷಯದಲ್ಲಿ ಗಂಡಸರ ಮತ್ತು ಹೆಣ್ಣುಮಕ್ಕಳ ಆಸೆಗಳು ಬೇರೆ ಬೇರೆ ಆಗುತ್ತಾ ಹೋಗುತ್ತವೆ. ಹೆಂಗಸರಿಗೆ ಹೋಲಿಸಿದರೆ ಪುರುಷರು ಹೆಚ್ಚಾಗಿ ಮಕ್ಕಳನ್ನು ಬಯಸುತ್ತಾರೆ. ಯುದ್ಧದ ನಂತರ ಆರ್ಥಿಕ ಸ್ಥಗಿತತೆ ಅನುಭವಿಸುತ್ತಿದ್ದ ದೇಶಗಳು 1950, 1960 ಮತ್ತು 1970ರಲ್ಲಿ ದಿಢೀರ್ ಆರ್ಥಿಕ ಪ್ರಗತಿಯನ್ನು ಸಾಧಿಸಿದವು. ಆ ಎಲ್ಲಾ ದೇಶಗಳಲ್ಲಿ ಫಲವತ್ತತೆಯು ದೊಡ್ಡ ಪ್ರಮಾಣದಲ್ಲಿ ಕುಸಿಯಿತು. ಯುದ್ಧದ ನಂತರ ಸ್ಥಿರವಾಗಿ ಆರ್ಥಿಕ ಪ್ರಗತಿಯನ್ನು ಸಾಧಿಸಿದ ದೇಶಗಳಿಗೆ ಹೋಲಿಸಿದರೆ, ದಿಢೀರ್ ಆರ್ಥಿಕ ಪ್ರಗತಿ ಸಾಧಿಸಿದ ದೇಶಗಳಲ್ಲಿ ಫಲವತ್ತತೆ ಕುಸಿತದ ಪ್ರಮಾಣ ಹೆಚ್ಚಾಗಿತ್ತು.

ಇದಕ್ಕೆ ಕಾರಣವೇನೆಂದರೆ, ಆರ್ಥಿಕ ವಾಸ್ತವತೆಗಳ ಸಮಕ್ಕೆ ಹೆಜ್ಜೆ ಹಾಕಲು ಸಂಪ್ರದಾಯಗಳಲ್ಲಿ ಒಂದಿಷ್ಟು ಬದಲಾವಣೆ ಆಗಬೇಕು. ಇದಕ್ಕೆ ಸ್ವಲ್ಪ ಸಮಯಾವಕಾಶ ಬೇಕು. ಆದರೆ ಅಭಿವೃದ್ಧಿ ತ್ವರಿತವಾಗಿ ಆದಾಗ ಇದಕ್ಕೆ ಸಮಯಾವಕಾಶವೇ ಇರುವುದಿಲ್ಲ. ಸಾಮಾನ್ಯವಾಗಿ ಪುರುಷರು ತಮ್ಮ ತಂದೆ ಮತ್ತು ತಾತಂದಿರ ಸಂಪ್ರದಾಯಗಳಿಗೆ ತುಂಬಾ ಅಂಟಿಕೊಂಡಿರುತ್ತಾರೆ. ಆದರೆ ಹೆಂಗಸರಿಗೆ ಅವುಗಳಿಂದ ಕಳಚಿಕೊಳ್ಳುವುದು ಹೆಚ್ಚು ಲಾಭದಾಯಕ. ಇದರರ್ಥ ಪುರುಷರು ಸ್ವಭಾವತಃ ಹೆಂಗಸರಿಗಿಂತ ಹೆಚ್ಚು ಸಂಪ್ರದಾಯಸ್ಥರು ಅಂತಲ್ಲ. ಬದಲಾಗಿ ಪುರುಷಪ್ರಧಾನ ಸಂಪ್ರದಾಯಗಳು ಗಂಡಸರಿಗೆ ಹೆಚ್ಚು ಲಾಭದಾಯಕವಾಗಿರುತ್ತವೆ. ಆದರೆ ಹೆಂಗಸರಿಗೆ ಲಿಂಗ ಸಮಾನತೆ ಹೆಚ್ಚು ಲಾಭದಾಯಕ. ಪ್ರಗತಿ ವೇಗವಾಗಿ ಆಗುತ್ತಿದ್ದಾಗ ಜನ ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ದೊಡ್ಡ ಪ್ರಮಾಣದಲ್ಲಿ ವಲಸೆ ಬರುತ್ತಾರೆ. ಅಂತಹ ಸಂದರ್ಭಗಳಲ್ಲಿ ಹಳೆಯ ಸಂಪ್ರದಾಯಗಳಿಗೆ ಅಂಟಿಕೊಳ್ಳುವುದು ಗಂಡುಮಕ್ಕಳಿಗೆ ಹೆಚ್ಚು ಲಾಭದಾಯಕ. ಆದರೆ ಹೆಣ್ಣು ಮಕ್ಕಳಿಗೆ ಬದಲಾಗುತ್ತಿರುವ ಈಗಿನ ಕಾಲಕ್ಕೆ ತಕ್ಕ ಹಾಗೆ ಹೆಚ್ಚಿನ ಶಿಕ್ಷಣ ಪಡೆಯುವುದು ಮತ್ತು ಉದ್ಯೋಗ ಪಡೆದುಕೊಳ್ಳುವುದು ಹೆಚ್ಚು ಲಾಭದಾಯಕ.

ವಾಸ್ತವವಾಗಿ ಮನೆಯೊಳಗಿನ ಶ್ರಮವಿಭಜನೆ ಗಂಡುಮಕ್ಕಳಿಗೆ ಲಾಭದಾಯಕ ಎನ್ನುವುದು ತುಂಬಾ ಸ್ಪಷ್ಟ. ಈಗಿನ ಅಭಿವೃದ್ಧಿ ಹೊಂದಿರುವ ಮತ್ತು ತ್ವರಿತವಾಗಿ ಆಧುನೀಕರಣಗೊಂಡಿರುವ ದೇಶಗಳಲ್ಲಿ ಕುಟುಂಬದೊಳಗೆ ಹೆಂಗಸರಿಗೆ ಹೋಲಿಸಿದರೆ ಗಂಡಸರು ತುಂಬಾ ಕಡಿಮೆ ಮನೆಗೆಲಸ ಮಾಡುತ್ತಾರೆ ಮತ್ತು ಮಕ್ಕಳ ಲಾಲನೆಯಲ್ಲಿಯೂ ಅವರ ಪಾತ್ರ ತುಂಬಾ ಕಡಿಮೆ. ನಿರಂತರವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿನ ಪುರುಷರು ಮನೆಗೆಲಸ ಮತ್ತು ಮಕ್ಕಳ ಪಾಲನೆಯಲ್ಲಿ ಗಮನಾರ್ಹ ಪಾತ್ರ ವಹಿಸುತ್ತಾರೆ.

ತೀರಾ ವಿಭಿನ್ನವಾಗಿರುವ ದೇಶಗಳಲ್ಲಿ ಮತ್ತು ಸಮಾಜಗಳಲ್ಲಿ ಫಲವತ್ತತೆ ಕ್ಷೀಣಿಸುತ್ತಿರುವುದರ ಹಿಂದೆ ಒಂದು ಸಮಾನ ಅಂಶ ಕೆಲಸ ಮಾಡುತ್ತಿದೆ ಎನ್ನುವುದನ್ನು ಇವೆಲ್ಲವೂ ಸೂಚಿಸುತ್ತಿವೆ. ಫಲವತ್ತತೆಯ ಕ್ಷೀಣಿಸುವಿಕೆ ಕೆಳಕಂಡ ಕೆಲವು ಅಂಶಗಳ ಜೊತೆ ನಿಕಟ ಸಂಬಂಧ ಹೊಂದಿದೆ. ಹೆಂಗಸರು ತಮ್ಮ ಇಷ್ಟದ ಹುಡುಗನನ್ನು, ತಮಗಿಷ್ಟ ಬಂದಾಗ ಮದುವೆಯಾಗುವ ಸಾಧ್ಯತೆಗಳು ಹೆಚ್ಚಾಗಿರುವುದು. ಅವರಿಗೆ ತಮ್ಮ ಶಿಕ್ಷಣ ಮತ್ತು ಭವಿಷ್ಯಕ್ಕೆ ಸಂಬಂಧಿಸಿದಂತೆ ಹೆಚ್ಚು ತೊಡಗಿಸಿಕೊಳ್ಳಲು ಆಗಿರುವುದು. ಸುರಕ್ಷಿತ ಮತ್ತು ವಿಶ್ವಾಸಾರ್ಹ ಸಂತಾನೋತ್ಪತ್ತಿಯ ಸ್ವಾತಂತ್ರ್ಯ ಹೊಂದಿರುವುದು. ಹಾಗೆಯೇ ಸಮಾಜದಲ್ಲಿ ಮತ್ತು ವೈಯಕ್ತಿಕ ಸಂಬಂಧಗಳಲ್ಲಿ ಉಂಟಾಗಿರುವ ಹೊಂದಾಣಿಕೆಯ ಕೊರತೆ, ಪರಸ್ಪರರಲ್ಲಿ ಭರವಸೆ ಹುಟ್ಟಿಸುವ ಬದ್ಧತೆ ಇಲ್ಲದಿರುವ ಸಮಸ್ಯೆ, ಹಾಗೂ ದೀರ್ಘಕಾಲ ಉಳಿಯುವಂತಹ ಸಂಬಂಧಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗದಿರುವುದು ಜನನ ದರಗಳು ಒಂದು ಸೂಕ್ತ ಮಟ್ಟಕ್ಕಿಂತ ಕಡಿಮೆ ಆಗಿರುವುದಕ್ಕೆ ಕೊಡುಗೆ ನೀಡಿವೆ.

ಒಟ್ಟಾರೆಯಾಗಿ ನೋಡಿದರೆ, ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಮತ್ತು ಸಮಾಜಗಳಲ್ಲಿ ಈ ಜನನ ಪ್ರಮಾಣ ಕಡಿಮೆಯಾಗಿರುವುದಕ್ಕೆ ಒಂದು ಸಾಮಾನ್ಯ ಕಾರಣ ಇರುವಂತೆ ತೋರುತ್ತದೆ. ಈ ಬದಲಾವಣೆ ಪ್ರಾರಂಭವಾಗಿದ್ದು ಮಹಿಳೆಯರಿಗೆ ತಮಗೆ ಇಷ್ಟ ಬಂದವರನ್ನು ಮತ್ತು ಇಷ್ಟ ಬಂದಾಗ ಮದುವೆಯಾಗುವುದಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಮತ್ತು ಮಹಿಳೆಯರಿಗೆ ತಮ್ಮ ಶಿಕ್ಷಣ ಮತ್ತು ಭವಿಷ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಗಮನ ಕೊಡುವುದಕ್ಕೆ ಸಾಧ್ಯವಾದಾಗ ಮತ್ತು ತಮಗೆ ಯಾವಾಗ ಮಗು ಬೇಕು ಅನ್ನುವುದನ್ನು ನಿರ್ಧರಿಸುವ ಅಧಿಕಾರ ಅವರಿಗೆ ಸಿಕ್ಕಾಗ.

ಆದರೆ ಅದೇ ಸಮಯದಲ್ಲಿ, ಸಮಾಜದಲ್ಲಿ ಮತ್ತೆ ವೈಯಕ್ತಿಕ ಸಂಬಂಧಗಳಲ್ಲಿ ಸರಿಯಾದ ಹೊಂದಾಣಿಕೆ ಸಾಧ್ಯವಾಗುತ್ತಿಲ್ಲ. ಒಬ್ಬರಿಗೊಬ್ಬರು ಕೊಟ್ಟ ಭರವಸೆಯನ್ನು ಉಳಿಸಿಕೊಳ್ಳುತ್ತಾರೆ ಅನ್ನುವ ವಿಶ್ವಾಸ ಕಡಿಮೆಯಾಗುತ್ತಿದೆ. ಮತ್ತೆ ಜವಾಬ್ದಾರಿಯನ್ನು ಪರಸ್ಪರ ಸಮಾನವಾಗಿ ಹಂಚಿಕೊಳ್ಳುವುದಕ್ಕೆ ಯಾವುದೇ ಗಟ್ಟಿಯಾದ ಒಪ್ಪಂದ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗದೇ ಇರುವುದು. ಇವೆಲ್ಲಾ ಸೇರಿಕೊಂಡು ಜನನ ದರ ಇರಬೇಕಾದ ಪ್ರಮಾಣಕ್ಕಿಂತ ಕಡಿಮೆಯಾಗಿದೆ.


ಹಾಗಾದರೆ ಈಗೇನು ಮಾಡಬೇಕು? ಅಮೇರಿಕೆಯಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ಖಾಸಗಿ ವಲಯದ ಮುಖ್ಯಸ್ಥರು ನೀಡಿರುವ ಹೇಳಿಕೆಗಳು, ಮತ್ತು ಇತ್ತೀಚಿನ ಸಮೀಕ್ಷೆಗಳು ಸೂಚಿಸುವ ಪ್ರಕಾರ ಈಗಿನ ಸಾಮಾಜಿಕ ನೀತಿ ನಿಯಮಗಳು ಲಿಂಗಸಮಾನತೆ ನೆಲೆಗೊಳಿಸುವ ನಿಟ್ಟಿನಲ್ಲಿ ಬಹಳಷ್ಟು ಕೆಲಸ ಮಾಡಿವೆ. ಈಗ ಅದನ್ನು ಹಿಮ್ಮೊಗವಾಗಿ ಬದಲಿಸಲು ಪ್ರಯತ್ನಿಸಿದರೆ ಈಗಾಗಲೆ ಸಮಾಜದಲ್ಲಿರುವ ಹೊಂದಾಣಿಕೆಯ ಸಮಸ್ಯೆಯನ್ನು ಇದು ಮತ್ತಷ್ಟು ತೀವ್ರಗೊಳಿಸಬಹುದು. ಜನನ ದರಗಳು ಮತ್ತಷ್ಟು ಕುಸಿಯುವಂತೆ ಆಗಬಹುದು.

ಸಂಭಾವ್ಯ ತಾಯಿಯರಲ್ಲಿ ಬೆಂಬಲದ ಭರವಸೆಯನ್ನು ಮೂಡಿಸುವುದಕ್ಕೆ ಬೇಕಾದ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳದೇ ಹೋದಲ್ಲಿ, ಹೆಚ್ಚಿನ ಮಹಿಳಾ ಸ್ವಾಯತ್ತತೆಯಿಂದ ಜನನ ದರಗಳು ಮತ್ತಷ್ಟು ಕುಸಿಯುತ್ತವೆ. ಸುದೈವವಶಾತ್, ಇದರರ್ಥ ಮಹಿಳೆಯರಿಗೆ ಬೇಕಾದ ಬೆಂಬಲ ಸಿಗುತ್ತದೆ ಎನ್ನುವ ಭರವಸೆ ಸಿಕ್ಕರೆ, ಮಹಿಳೆಯರಿಗೆ ಸ್ವಾಯತ್ತತೆ ಹೆಚ್ಚುವುದರಿಂದ ಜನನ ದರದಲ್ಲಿ ಏರಿಕೆಯೂ ಆಗುತ್ತದೆ. ಅಷ್ಟೇ ಅಲ್ಲ, ಕಾರ್ಮಿಕ ಮಾರುಕಟ್ಟೆಯಲ್ಲಿ ಮಹಿಳಾ ಉತ್ಪಾದಕತೆಯೂ ಹೆಚ್ಚಾಗುತ್ತದೆ ಮತ್ತು ಕುಟುಂಬಗಳಲ್ಲಿ ಹೆಚ್ಚಿನ ಸಮಾನತೆಯು ಸಾಧ್ಯವಾಗುತ್ತದೆ. ಸಂಸಾರಗಳು ಹೆಚ್ಚು ಸಂತೋಷದಿಂದ ಇರುತ್ತವೆ.

Claudia Goldin, the 2023 Nobel laureate in economics, is Professor of Economics at Harvard University and Co-Director of the Gender in the Economy group at the National Bureau of Economic Research.

ಇವ ನಮ್ಮವ–5
ಪಿ ಸಿ ಮಹಲನೋಬಿಸ್ ಭಾರತದ ಸಾಂಖ್ಯಿಕ ವ್ಯವಸ್ಥೆಯ ಭದ್ರ ಬುನಾದಿ ಹಾಕಿದ ‘ಸಾಂಸ್ಥಿಕ ಶಿಲ್ಪಿ’

ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದ ಭಾರತೀಯ ಅರ್ಥಶಾಸ್ತ್ರಜ್ಞರನ್ನು ಪರಿಚಯಿಸುವ ಉದ್ದೇಶದಿಂದ ಪ್ರಾರಂಭಿಸಿರುವ ಮಾಲಿಕೆಯಲ್ಲಿ ಐದನೆಯದು



ಟಿ ಎಸ್ ವೇಣುಗೋಪಾಲ್

ಬ್ರಿಟಿಷರಿಂದ ಬಿಡುಗಡೆಯಾದ ಕೂಡಲೆ ರಾಜಕೀಯ ಸಮಾನತೆ ಸಾಧ್ಯವಾಗಬಹುದು. ಆದರೆ ಆ ರಾಜಕೀಯ ಸ್ವಾತಂತ್ರ್ಯವನ್ನು ಅನುಭವಿಸಲು ಜನರಿಗೆ ಸಾಧ್ಯವಾಗಬೇಕಾದರೆ ಅವರಿಗೆ ಭೌತಿಕ ಸಾಮರ್ಥ್ಯವೂ ಇರಬೇಕು. ಇಲ್ಲದೇ ಹೋದರೆ ರಾಜಕೀಯ ಪ್ರಜಾಸತ್ತೆಗೆ ಅರ್ಥವೇ ಇರುವುದಿಲ್ಲ. ಅದು ಉಳಿಯುವುದಕ್ಕೂ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ದೇಶದ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ದೇಶದ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗಬೇಕು. ರಾಷ್ಟ್ರವನ್ನು ಕಟ್ಟುವುದಕ್ಕೆ ವ್ಯವಸ್ಥಿತವಾದ ಯೋಜನೆಯನ್ನು ರೂಪಿಸಬೇಕೆಂಬ ಅರಿವನ್ನು ರಷ್ಯಾದ ಅನುಭವ ಕಲಿಸಿತ್ತು. ಆದರೆ ಯೋಜನೆಯನ್ನು ಭಾರತದ ಪ್ರಜಾಸತ್ತೆಯ ವ್ಯವಸ್ಥೆಯೊಂದಿಗೆ ಬೆಸೆಯಬೇಕು ಎಂಬುದು ಆಗಿನ ನಾಯಕರ ನಿಲುವಾಗಿತ್ತು. ಯೋಜನೆ ಅನ್ನುವುದು ಪ್ರಜಾಸತ್ತೆಗೆ ಪೂರಕ ಮಾತ್ರವಲ್ಲ, ಪ್ರಜಾಸತ್ತೆ ಉಳಿಯಲು ಅದು ಅನಿವಾರ್ಯವೂ ಹೌದು ಎಂಬುದು ಅವರಿಗೆ ಸ್ಪಷ್ಟವಿತ್ತು. ಅಷ್ಟೇ ಅಲ್ಲ ಅನಕ್ಷರಸ್ಥರು, ಬಡವರು ಹೆಚ್ಚಿಗೆ ಇರುವ ಭಾರತದಂತಹ ದೊಡ್ಡ ದೇಶಗಳಲ್ಲಿ ಕೂಡ ಯೋಜನೆಗಳು ತಾಂತ್ರಿಕವಾಗಿ ಸಾಧ್ಯ ಹಾಗೂ ರಾಜಕೀಯವಾಗಿ ಸಾಧುವಾದದ್ದು ಎನ್ನುವುದು ಸರ್ಕಾರಕ್ಕೆ ಮನವರಿಕೆಯಾಗಿತ್ತು.

ಸೂಕ್ತ ಯೋಜನೆಯನ್ನು ರೂಪಿಸಬೇಕಾದರೆ ದೇಶದ ವಸ್ತುಸ್ಥಿತಿಯ ಬಗ್ಗೆ, ಪ್ರಗತಿಗೆ ಇರುವ ಅಡ್ಡಿಗಳು ಹಾಗೂ ದೇಶ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳ ಬಗ್ಗೆ ನಿಖರವಾದ ಮಾಹಿತಿ ಅವಶ್ಯಕ. ನೆಹರೂ ಹೇಳುತ್ತಿದ್ದಂತೆ “ಯೋಜನೆಯ ಯಶಸ್ಸಿಗೆ ವಿಶ್ವಾಸಾರ್ಹವಾದ ಹಾಗೂ ವೈಜ್ಞಾನಿಕವಾದ ಅಂಕಿಅಂಶಗಳು ಅವಶ್ಯಕ.” ಅದನ್ನು ಸಂಗ್ರಹಿಸುವುದಕ್ಕೆ ಸುಸಜ್ಜಿತ ವ್ಯವಸ್ಥೆಯನ್ನು ಹಾಗು ಮೂಲಸೌಕರ್ಯವನ್ನು ನಿರ್ಮಿಸಬೇಕಿತ್ತು.

ಭಾರತದಲ್ಲಿ ಇಂತಹ ಸಾಂಖ್ಯಿಕ ವ್ಯವಸ್ಥೆಯನ್ನು ಕಟ್ಟುವ ಕೆಲಸದಲ್ಲಿ ಪ್ರಧಾನಿ ಜವಾಹರಲಾಲ್ ನೆಹರೂ ಅವರೊಂದಿಗೆ ಪಿ ಸಿ ಮಹಲನೋಬಿಸ್ ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಿದರು. ‘ಪ್ರೊಫೆಸರ್’ ಎಂದೇ ಪ್ರಖ್ಯಾತರಾಗಿದ್ದ ಮಹಲನೋಬಿಸ್ ಭಾರತದ ಸಾಂಖ್ಯಿಕ ವ್ಯವಸ್ಥೆಗೆ ಸಂಪೂರ್ಣವಾಗಿ ಹೊಸ ರೂಪವನ್ನು ನೀಡಿದರು. ಭಾರತದಲ್ಲಿ ಪ್ರಮುಖ ಆರ್ಥಿಕ ಸಂಗತಿಗಳ ಬಗ್ಗೆ ಅಂಕಿಅಂಶವನ್ನು ಸಂಗ್ರಹಿಸುವುದಕ್ಕೆ, ವಿಶ್ಲೇಷಿಸುವುದಕ್ಕೆ ಮತ್ತು ಪ್ರಕಟಿಸುವುದಕ್ಕೆ ಒಂದು ಸಮಗ್ರವಾದ ವ್ಯವಸ್ಥೆಯನ್ನು ರೂಪಿಸಿದರು. ಅದಕ್ಕಾಗಿ ರಾಷ್ಟ್ರೀಯ ಸಾಂಖ್ಯಿಕ ಕಛೇರಿ (ಎನ್‌ಎಸ್‌ಒ), ಕೇಂದ್ರ ಸಾಂಖ್ಯಿಕ ಸಂಘಟನೆ (ಸಿಎಸ್‌ಒ) ರಾಷ್ಟ್ರೀಯ ಸ್ಯಾಂಪಲ್ ಸಮೀಕ್ಷೆ ಸಂಘಟನೆ(ಎನ್‌ಎಸ್‌ಎಸ್‌ಒ) ಅಂತಹ ಸಂಸ್ಥೆಗಳನ್ನು ಸ್ಥಾಪಿಸಿದರು. ಎನ್‌ಎಸ್‌ಒ ಒಟ್ಟಾರೆ ಸಾಂಖ್ಯಿಕ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿತ್ತು. ಅದರ ಅಡಿಯಲ್ಲಿ ಸಿಎಸ್‌ಒ ರಾಷ್ಟ್ರೀಯ ಆದಾಯ, ಜಿಡಿಪಿ, ಬಳಕೆದಾರರ ಬೆಲೆ ಸೂಚಿ ಮತ್ತು ಹಣದುಬ್ಬರ ಇತ್ಯಾದಿ ಸಮಗ್ರ ಆರ್ಥಿಕ (ಮ್ಯಾಕ್ರೊ ಎಕಾನಮಿಕ್) ಅಂಕಿಅಂಶಗಳನ್ನು ಸಂಗ್ರಹಿಸುತ್ತಿತ್ತು. ಎನ್‌ಎಸ್‌ಎಸ್‌ಒ ರಾಷ್ಟ್ರೀಯ ಮಾದರಿ ಸಮೀಕ್ಷೆಯನ್ನೂ ನಡೆಸುತ್ತಿತ್ತು. ಅದು ಬಳಕೆ, ಬಡತನ, ನಿರುದ್ಯೋಗ ಇತ್ಯಾದಿ ಸೂಕ್ಷ್ಮ ಆರ್ಥಿಕ (ಮೈಕ್ರೊ ಎಕಾನಮಿಕ್) ಅಭಿವೃದ್ಧಿ ಸೂಚಿಗಳ ಅಂದಾಜನ್ನು ತಯಾರಿಸುತ್ತಿತ್ತು. ರಾಷ್ಟ್ರೀಯ ಮಾದರಿ ಸಮೀಕ್ಷೆಯಿಂದ ಸಂಗ್ರಹಿಸಿದ ಅಪಾರ ಅಂಕಿ ಅಂಶಗಳು, ಸಂಕೀರ್ಣವಾದ ಯೋಜನೆಯ ಮಾಡೆಲ್ಲುಗಳು ಸರ್ಕಾರದ ಅಂಕಿಅಂಶಗಳನ್ನು ಕ್ರೋಡೀಕರಿಸುವ, ಪರಿಷ್ಕರಿಸುವ, ವಿಶ್ಲೇಷಿಸುವ ಕೆಲಸವನ್ನು ಹೆಚ್ಚಿಸಿತು. ಭಾರತದಲ್ಲಿ ಈ ಉದ್ದೇಶಕ್ಕೆ ಮಹಲನೋಬಿಸ್ ಕಂಪ್ಯೂಟರ್ ಬಳಸತೊಡಗಿದರು. ಸಾಮಾನ್ಯವಾಗಿ ಬೇರೆ ದೇಶಗಳಲ್ಲಿ ಕಂಪ್ಯೂಟರುಗಳನ್ನು ಮಿಲಿಟರಿ ಉದ್ದೇಶಗಳಿಗೆ ಬಳಸಲಾಗುತ್ತಿತ್ತು. ತಾಂತ್ರಿಕ ಪರಿಣತಿಯನ್ನು ಪ್ರಜಾಸತ್ತಾತ್ಮಕ ಪ್ರಕ್ರಿಯೆಯೊಂದಿಗೆ ಬೆಸೆಯುವುದು ಕೂಡ ಒಂದು ಸವಾಲಿನ ಕೆಲಸವೇ ಆಗಿತ್ತು. ಮಹಲನೋಬಿಸ್ ರಷ್ಯಾಕ್ಕೆ ಹೆಚ್ಚು ಒಲವು ತೋರಿಸುತ್ತಿದ್ದಾರೆ ಅನ್ನುವ ಕಾರಣಕ್ಕೆ ಅಮೇರಿಕೆ ಆಗ ಭಾರತಕ್ಕೆ ಕಂಪ್ಯೂಟರ್ ನೀಡಲಿಲ್ಲ.

ಮಹಲನೋಬಿಸ್ ಅವರ ನೇತೃತ್ವದಲ್ಲಿ ಭಾರತ ಸಂಖ್ಯಾಶಾಸ್ತ್ರ ಕ್ಷೇತ್ರದಲ್ಲಿ ಸಾಕಷ್ಟು ಪ್ರಯೋಗಗಳನ್ನು ನಡೆಸಿತು. ಭಾರತ 60 ಕೋಟಿಗೂ ಹೆಚ್ಚು ಜನರಿದ್ದ ದೊಡ್ಡ ದೇಶ. ಪ್ರತಿಯೊಬ್ಬರಿಂದ ಬೇಕಾದ ಮಾಹಿತಿಯನ್ನು ಸಂಗ್ರಹಿಸುವುದು ಕಷ್ಟದ, ದುಬಾರಿಯಾದ ಹಾಗೂ ಸಮಯ ಹಿಡಿಯುವ ಕೆಲಸ. ಅದಕ್ಕಾಗಿ ಸಾಮಾನ್ಯವಾಗಿ ನಿರ್ದಿಷ್ಟ ಸಂಖ್ಯೆಯ ಪ್ರಾತಿನಿಧಿಕ ವ್ಯಕ್ತಿಗಳನ್ನು ಆರಿಸಿಕೊಂಡು ಅಂದರೆ ಸ್ಯಾಂಪಲ್ ಕ್ರಮವನ್ನು ಅನುಸರಿಸಿ ಮಾಹಿತಿಯನ್ನು ಸಂಗ್ರಹಿಸುವ ಕ್ರಮ ಇದೆ. ಭಾರತ ಈ ಸಾಹಸಕ್ಕೆ ಕೈಹಾಕಿದಾಗ ಜಗತ್ತು ಅಚ್ಚರಿಯಿಂದ ನೋಡಿತು. ಅಷ್ಟೇ ಅಲ್ಲ ತೀವ್ರವಾದ ಅನುಮಾನಗಳು ವ್ಯಕ್ತವಾದವು. ಜಗತ್ತಿನಲ್ಲೇ ಈ ಪ್ರಮಾಣದ, ವ್ಯಾಪಕವಾದ ಹಾಗೂ ಸಮಗ್ರವಾದ ಸಮೀಕ್ಷೆ ನಡೆದಿರಲಿಲ್ಲ. 5,60,000 ಹಳ್ಳಿಗಳಿಂದ ಕೇವಲ 1833 ಪ್ರಾತಿನಿಧಿಕ ಹಳ್ಳಿಗಳನ್ನು ಅಧ್ಯಯನ ಮಾಡಿ ಇಡೀ ದೇಶಕ್ಕೆ ಅನ್ವಯವಾಗುವಂತಹ ಮಾಹಿತಿಯನ್ನು ಪ್ರಕಟಿಸಲಾಯಿತು. ಭಾರತದ

ಈ ಪ್ರಯೋಗ ಜಗತ್ತಿಗೆ ಮಾದರಿಯಾಯಿತು. ಇದೊಂದು ಪರಿಣಾಮಕಾರಿ ಹಾಗೂ ವಿಶ್ವಾಸಾರ್ಹ ಕ್ರಮ ಎಂದು ಸ್ಪಷ್ಟವಾದ ಮೇಲೆ ಹಲವು ದೇಶಗಳು ಮಾದರಿ ಸಮೀಕ್ಷೆಯ ಕ್ರಮವನ್ನು ವಿಭಿನ್ನ ಕ್ಷೇತ್ರಗಳಲ್ಲಿ ಬಳಸತೊಡಗಿದವು.


ಆದರೆ ಇದು ಕಾಣುವಷ್ಟು ಸಲೀಸು ಕೆಲಸವಾಗಿರಲಿಲ್ಲ. ಅವಶ್ಯಕವಿದ್ದಷ್ಟು ಸಿಬ್ಬಂದಿಗಳು ಇರಲಿಲ್ಲ. ನುರಿತ ತನಿಖಾಧಿಕಾರಿಗಳು ಇರಲಿಲ್ಲ. ಜೊತೆಗೆ ಮಹಾಲನೋಬಿಸ್ ಅವರೇ ದಾಖಲಿಸಿರುವಂತೆ "ಒಡಿಶಾದಲ್ಲಿ ದಟ್ಟ ಕಾಡುಗಳನ್ನು ದಾಟಿಹೋಗಬೇಕಿತ್ತು. ಕಾಡುಪ್ರಾಣಿಗಳು, ವನವಾಸಿಗಳು, ಸಾಂಕ್ರಾಮಿಕ ಖಾಯಿಲೆಗಳು ಇವೆಲ್ಲವನ್ನೂ ಎದುರಿಸಬೇಕಾಗುತ್ತಿತ್ತು. ಕೇವಲ ನಾಗರಿಕರನ್ನು ಮಾತ್ರವಲ್ಲ, ಅಪರಿಚಿತ ಭಾಷೆಯಲ್ಲಿ ವ್ಯವಹರಿಸುತ್ತಿದ್ದ, ಹಣ ಎಂದರೆ ಏನೆಂದೇ ಅರಿಯದ, ಆರ್ಥಿಕ ಬೆಳವಣಿಗೆ ಅಂದರೆ ನಗುತ್ತಿದ್ದ ಬುಡಕಟ್ಟು ಜನರಿಂದಲೂ ಅತಿ ಪ್ರಯಾಸದಿಂದ ಮಾಹಿತಿ ಸಂಗ್ರಹಿಸಬೇಕಾಗುತ್ತಿತ್ತು."

ಆದರೆ ಸಮೀಕ್ಷೆಯ ಫಲಿತಾಂಶಗಳು ಮಾತ್ರ ಅಸಾಧಾರಣವಾಗಿತ್ತು. ಮೊತ್ತಮೊದಲ ಬಾರಿಗೆ ಯೋಜನೆ ಹಾಗೂ ನೀತಿಗಳನ್ನು ರೂಪಿಸುವವರಿಗೆ ಭಾರತೀಯ ವಾಸ್ತವತೆಯ, ಜನರ ದೈನಂದಿನ ಜೀವನದ ವಾಸ್ತವದ ಅರಿವಾಯಿತು. ಭಾರತದ ಅಂಕಿಅಂಶಗಳು ಜಗತ್ತಿನ ವಿಶ್ವಾಸಕ್ಕೂ ಪಾತ್ರವಾಯಿತು.

1950ರಲ್ಲಿ ಪಿ ಸಿ ಮಹಲನೋಬಿಸ್ ಅವರ ನೇತೃತ್ವದಲ್ಲಿ ಸ್ಥಾಪಿತವಾದ ಭಾರತದ ಸಾಂಖ್ಯಿಕ ವ್ಯವಸ್ಥೆ ಜಾಗತಿಕವಾಗಿ ಮೆಚ್ಚುಗೆಗೆ ಪಾತ್ರವಾಗಿತ್ತು. ಈ ಸಂಸ್ಥೆಗಳು ಅಂದಿನ ಹೊಸ ಪೀಳಿಗೆಯ ಅರ್ಥಶಾಸ್ತ್ರಜ್ಞರಿಗೆ ಆರ್ಥಿಕ ಮಾದರಿಗಳನ್ನು ರೂಪಿಸುವ ವಿಧಾನವನ್ನು ಕಲಿಸಿತು. ಮಹಲನೋಬಿಸ್ ನೇತೃತ್ವದಲ್ಲಿ ರೂಪಗೊಂಡ ಸ್ಯಾಂಪಲ್ ಸಮೀಕ್ಷೆಗಳು, ರಾಷ್ಟ್ರೀಯ ಜೀವನ ಮಟ್ಟ ಹಾಗೂ ಬಡತನವನ್ನು ಅಳೆಯುವುದಕ್ಕೆ ಅವರು ನಡೆಸಿದ ವಿಸ್ತೃತವಾದ ಕುಟುಂಬದ ಮಟ್ಟದ ಸಮೀಕ್ಷೆಗಳು ಇವೆಲ್ಲಾ ಆರ್ಥಿಕತೆಯ ವಾಸ್ತವ ಚಿತ್ರವನ್ನು ಗ್ರಹಿಸುವುದಕ್ಕೆ ಸರ್ಕಾರಕ್ಕೆ ನೆರವಾಯಿತು. ಸೂಕ್ತ ಯೋಜನೆಗಳನ್ನು ರೂಪಿಸುವುದಕ್ಕೆ ಸಹಾಯಮಾಡಿತು. ಒಟ್ಟಿನಲ್ಲಿ ಯೋಜನೆ ಹಾಗೂ ಅಂಕಿಅಂಶಗಳ ನಡುವಿನ ನಂಟು ಬಲವಾಗುತ್ತಾ ಹೋಯಿತು. ಹಾಗಾಗಿ ಮಹಲನೋಬಿಸ್ ಅಂತಹ ಸಂಖ್ಯಾಶಾಸ್ತ್ರಜ್ಞರ ಪಾತ್ರ ಯೋಜನೆಯಲ್ಲಿ ಕೇಂದ್ರವಾಯಿತು.



ಯೋಜನೆಗಳನ್ನು ರೂಪಿಸುವುದರಲ್ಲಿ ಮಾತ್ರವಲ್ಲ, ಸರ್ಕಾರಕ್ಕೆ ಆಗಿದ್ದಾಗ್ಗೆ ಎದುರಾಗುವ ಹಲವಾರು ಸಂಕೀರ್ಣ ಆಡಳಿತಾತ್ಮಕ ಸಮಸ್ಯೆಗಳಿಗೆ ಹೆಚ್ಚು ಪರಿಣಾಮಕಾರಿಯಾದ ಪರಿಹಾರ ಒದಗಿಸುವಲ್ಲಿ ಈ ಸಾಂಖ್ಯಿಕ ವ್ಯವಸ್ಥೆ ನೆರವಾಗುತ್ತಿತ್ತು. ಪ್ರಖ್ಯಾತ ಸಂಖ್ಯಾಶಾಸ್ತ್ರಜ್ಞ ಸಿ.ಆರ್. ರಾವ್ ಉಲ್ಲೇಖಿಸುವ ಒಂದು ಪ್ರಸಂಗ ಸಾಂಖ್ಯಿಕ ತಜ್ಞರು ಸರ್ಕಾರಕ್ಕೆ ನೆರವಾಗುತ್ತಿದ್ದ ಬಗೆಯನ್ನು ವಿವರಿಸುತ್ತದೆ. 1947ರಲ್ಲಿ ಆಗಷ್ಟೇ ಸ್ವಾತಂತ್ರ್ಯ ಬಂದಿತ್ತು. ದೆಹಲಿಯಲ್ಲಿ ಭಯಂಕರ ಕೋಮು ಗಲಭೆ ಪ್ರಾರಂಭವಾಗಿತ್ತು. ಸಾವಿರಾರು ನಿರಾಶ್ರಿತರು ಕೆಂಪುಕೋಟೆಯಲ್ಲಿ ಆಶ್ರಯ ಪಡೆದುಕೊಂಡಿದ್ದರು. ಸರ್ಕಾರ ಅವರಿಗೆ ಆಹಾರ ಒದಗಿಸಬೇಕಿತ್ತು. ಸರ್ಕಾರಕ್ಕೆ ನಿರಾಶ್ರಿತರು ಎಷ್ಟಿದ್ದಾರೆಂಬು ನಿಖರವಾದ ಮಾಹಿತಿಯಿರಲಿಲ್ಲ. ಹಾಗಾಗಿ ಗುತ್ತಿಗೆದಾರರು ನೀಡುತ್ತಿದ್ದ ಬಿಲ್ಲುಗಳನ್ನು ನಂಬಿ ಸರ್ಕಾರ ಹಣ ಪಾವತಿ ಮಾಡಬೇಕಾಗುತ್ತಿತ್ತು. ಆದರೆ ಗುತ್ತಿಗೆದಾರರು ಸುಳ್ಳು ಲೆಕ್ಕ ನೀಡುತ್ತಿದ್ದಾರೆ ಎಂಬ ಅನುಮಾನ ದಟ್ಟವಾಗಿತ್ತು. ಅಂತಹ ಬೀಕರ ಗಲಭೆಯ ಸಂದರ್ಭದಲ್ಲಿ ಜನಗಣತಿ ಮಾಡುವುದಕ್ಕೆ ಸಾಧ್ಯವಿರಲಿಲ್ಲ. ಐಎಸ್ಐ ಇದನ್ನು ಪತ್ತೆ ಹಚ್ಚಲು ಒಂದು ದಾರಿ ಕಂಡುಕೊಂಡಿತು. ಲೆಕ್ಕ ಹಾಕುವುದಕ್ಕೆ ಗುತ್ತಿಗೆದಾರರು ನೀಡುತ್ತಿದ್ದ ಬಿಲ್ಲುಗಳನ್ನು ಬಳಸಿಕೊಂಡಿತು. ಬಿಲ್ಲುಗಳನ್ನು ಆಧರಿಸಿ ಪ್ರತಿದಿನ ಬಳಕೆಯಾಗುತ್ತಿದ್ದ ಒಟ್ಟು ಅಕ್ಕಿ, ಬೇಳೆ ಮತ್ತು ಉಪ್ಪಿನ ಪ್ರಮಾಣವನ್ನು ಲೆಕ್ಕ ಹಾಕಲಾಯಿತು. ನಂತರ ಲಭ್ಯವಿರುವ ಬಳಕೆ ಸಮೀಕ್ಷೆಗಳನ್ನು ಗಮನಿಸಿ ಒಬ್ಬ ವ್ಯಕ್ತಿಗೆ ಸರಾಸರಿ ಎಷ್ಟು ಅಕ್ಕಿ, ಬೇಳೆ ಮತ್ತು ಉಪ್ಪು ಬೇಕಾಗುತ್ತದೆ ಎಂಬ ಮಾಹಿತಿಯನ್ನು ಸಂಗ್ರಹಿಸಲಾಯಿತು. ಈ ಎಲ್ಲಾ ಮಾಹಿತಿಗಳನ್ನು ಬಳಸಿಕೊಂಡು ಕೆಂಪುಕೋಟೆಯಲ್ಲಿ ಆಶ್ರಯ ಪಡೆದುಕೊಂಡಿದ್ದ ಜನರ ಸಂಖ್ಯೆಯ ಮೂರು ಪ್ರತ್ಯೇಕ ಅಂದಾಜುಗಳನ್ನು ಮಾಡಲಾಯಿತು. ಒಂದು ಅಕ್ಕಿಯ ಆಧಾರದ ಮೇಲೆ, ಇನ್ನೊಂದು ಬೇಳೆಯ ಆಧಾರದ ಮೇಲೆ, ಮೂರನೆಯದು ಉಪ್ಪಿನ ಆಧಾರದ ಮೇಲೆ.



ಈ ಮೂರು ಅಂದಾಜುಗಳಲ್ಲಿ, ಉಪ್ಪಿನ ಲೆಕ್ಕವನ್ನು ಆಧರಿಸಿ ಲೆಕ್ಕ ಹಾಕಿದ ಅಂದಾಜು ಅತ್ಯಂತ ಕಡಿಮೆಯಿತ್ತು. ಅಕ್ಕಿಯನ್ನು ಆಧರಿಸಿ ಮಾಡಿದ ಅಂದಾಜು ಅತಿ ಹೆಚ್ಚು ಇತ್ತು. ಅಕ್ಕಿ ಅತ್ಯಂತ ದುಬಾರಿಯಾಗಿದ್ದರಿಂದ, ಗುತ್ತಿಗೆದಾರರು ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅಕ್ಕಿಯ ಪ್ರಮಾಣವನ್ನು ಬಿಲ್ಲಿನಲ್ಲಿ ಹೆಚ್ಚಾಗಿ ತೋರಿಸುತ್ತಿದ್ದರು ಎಂದು ಸಂಖ್ಯಾಶಾಸ್ತ್ರಜ್ಞರು ಊಹಿಸಿದರು. ಉಪ್ಪು ಅಗ್ಗದ ವಸ್ತುವಾಗಿದ್ದರಿಂದ ಅದರಲ್ಲಿ ಸಿಗುತ್ತಿದ್ದ ಲಾಭದ ಪ್ರಮಾಣ ತೀರಾ ಕಡಿಮೆಯಿತ್ತು. ಹಾಗಾಗಿ, ಉಪ್ಪಿನ ಬಳಕೆಯ ಆಧಾರದ ಮೇಲೆ ಲೆಕ್ಕ ಹಾಕಿದ ಸಂಖ್ಯೆಯೇ ನಿಖರವಾದ ನಿರಾಶ್ರಿತರ ಸಂಖ್ಯೆ ಎಂದು ಅವರು ನಿರ್ಧರಿಸಿದರು. ಐಎಸ್ಐನ ಅಂದಾಜು ಲೆಕ್ಕಾಚಾರ ವಾಸ್ತವಕ್ಕೆ ತೀರಾ ಸಮೀಪವಿತ್ತು ಅನ್ನುವುದು ನಂತರದ ಅಧ್ಯಯನದಿಂದ ದೃಢಪಟ್ಟಿತು. ಹೀಗೆ 1949ರಿಂದ ಅವರು ಸಾಯುವವರೆಗೂ ಮಹಲನೋಬಿಸ್ ಸರ್ಕಾರದ ಬೆನ್ನೆಲುಬಾಗಿ ನಿಂತು ದೇಶದ ಅಂಕಿಅಂಶಗಳ ವ್ಯವಸ್ಥೆಯನ್ನು ಮುನ್ನಡೆಸಿದರು.



ಮಹಲನೋಬಿಸ್ ಅವರ ಬದುಕು

ಮಹಲನೋಬಿಸ್ ಅವರು 1893ರ ಜೂನ್ 29ರಂದು ಕಲ್ಕತ್ತಾದಲ್ಲಿ ಜನಿಸಿದರು. ಇವರ ತಾತ ಗುರುಚರಣ್ ಬಾಂಗ್ಲಾದೇಶದ ಪಂಚಸಾರ್ ಎಂಬ ಹಳ್ಳಿಯಿಂದ ಕಲ್ಕತ್ತಾಗೆ ವಲಸೆ ಬಂದು ಅಲ್ಲಿ ವ್ಯಾಪಾರ ಆರಂಭಿಸಿದ್ದರು. ಮಹಲನೋಬಿಸ್ ಅವರ ತಂದೆ ಪ್ರಬೋಧ್ ಚಂದ್ರ ಕೂಡ ಒಬ್ಬ ಉದ್ಯಮಿಯಾಗಿದ್ದರು. ಅವರೂ ಕೂಡ ಬಂಗಾಳದ ಪ್ರಸಿದ್ಧ ಸಮಾಜ ಸುಧಾರಣಾ ಚಳವಳಿ 'ಬ್ರಹ್ಮ ಸಮಾಜ'ದ ಸಕ್ರಿಯ ಸದಸ್ಯರಾಗಿದ್ದರು. ಪ್ರಶಾಂತ ಮಹಲನೋಬಿಸ್ ಕೂಡ ಬ್ರಹ್ಮ ಸಮಾಜದ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದರು. ಬ್ರಹ್ಮ ಸಮಾಜದ ಯುವ ಘಟಕದ ಸದಸ್ಯರಾಗಿದ್ದರು. ಅವರ ಪ್ರಾರಂಭಿಕ ಶಿಕ್ಷಣವೂ ಆಗಿದ್ದು ಅವರ ತಾತ ಸ್ಥಾಪಿಸಿದ್ದ ಬ್ರಹ್ಮ ಬಾಯ್ಸ್ ಶಾಲೆಯಲ್ಲಿ. 1912ರಲ್ಲಿ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಭೌತಶಾಸ್ತ್ರದ ಪದವಿ ಮುಗಿಸಿ, 1913ರಲ್ಲಿ ಇಂಗ್ಲೆಂಡಿನ ಕೇಂಬ್ರಿಡ್ಜ್‌ಗೆ ತೆರಳಿದರು. 1915ರಲ್ಲಿ ಅಲ್ಲಿಂದ 'ಟ್ರೈಪೋಸ್' ಪದವಿ ಪಡೆದರು. ಅಲ್ಲಿ ಆಕಸ್ಮಿಕವಾಗಿ ಬಯೋಮೆಟ್ರಿಕಾ ಪತ್ರಿಕೆ ಅವರ ಕಣ್ಣಿಗೆ ಬಿತ್ತು. ಅದರ ಓದಿನಿಂದ ಅವರಿಗೆ ಸಂಖ್ಯಾಶಾಸ್ತ್ರದ ಬಗ್ಗೆ ಒಲವು ಪ್ರಾರಂಭವಾಯಿತು.

ಭಾರತಕ್ಕೆ ಮರಳಿದ ಅವರು, ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲೇ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದರು. ಅಲ್ಲಿ ಅವರು ಭೌತಶಾಸ್ತ್ರ ಬೋಧಿಸುತ್ತಿದ್ದರೂ, ಸಂಖ್ಯಾಶಾಸ್ತ್ರವು ಅವರ ಅತ್ಯಂತ ಆಸಕ್ತಿಯ ಕ್ಷೇತ್ರವಾಯಿತು. ಅಂಕಿ ಅಂಶಗಳ ಅಭ್ಯಾಸ ಅವರಿಗೊಂದು ಹವ್ಯಾಸವಾಯಿತು. 1916ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯವು ತತ್ವಶಾಸ್ತ್ರದ ಪ್ರಾಧ್ಯಾಪಕ ಬ್ರಜೇಂದ್ರನಾಥ್ ಸೀಲ್ ಅವರ ನೇತೃತ್ವದಲ್ಲಿ ಪರೀಕ್ಷಾ ಸುಧಾರಣಾ ಸಮಿತಿಯನ್ನು ರಚಿಸಿತು. ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳನ್ನು ವಿಶ್ಲೇಷಿಸಲು ಸೀಲ್ ಅವರು ಮಹಲನೋಬಿಸ್ ಅವರ ಸಹಾಯ ಕೋರಿದರು. ಮಹಲನೋಬಿಸ್ ಅವರಿಗೆ ಸಂಖ್ಯಾಶಾಸ್ತ್ರದ ಪರಿಚಯವಾಗಿತ್ತು. ಆದರೆ ಅವರು ಅದನ್ನು ಪ್ರಾಯೋಗಿಕವಾಗಿ ಅನ್ವಯಿಸಿರಲಿಲ್ಲ. ಅಲ್ಲಿಂದ ಮುಂದೆ ಅವರು ಮಳೆಗಾಲದ ಮುನ್ಸೂಚನೆ, ನದಿಗಳ ಪ್ರವಾಹ ನಿಯಂತ್ರಣ ಮತ್ತು ಮಾನವಶಾಸ್ತ್ರದ ದತ್ತಾಂಶಗಳನ್ನು ವಿಶ್ಲೇಷಿಸಲು ಅವರು ಸಾಂಖ್ಯಿಕ ವಿಧಾನಗಳನ್ನು ಬಳಸಲು ಪ್ರಾರಂಭಿಸಿದರು.

1920ರ ದಶಕದ ಹೊತ್ತಿಗೆ ಅವರು ಪ್ರೆಸಿಡೆನ್ಸಿ ಕಾಲೇಜಿನಲ್ಲಿ 'ಸಾಂಖ್ಯಿಕ ಪ್ರಯೋಗಾಲಯ'ವನ್ನು ಸ್ಥಾಪಿಸಿದರು. ಒಡಿಶಾ ಮತ್ತು ಪಶ್ಚಿಮ ಬಂಗಾಳದಲ್ಲಿ ಪ್ರವಾಹವನ್ನು ನಿಯಂತ್ರಿಸುವುದಕ್ಕೆ ಕ್ರಮಗಳನ್ನು ರೂಪಿಸಲು ಇವರ ತಂಡವು ಮಳೆ ಮತ್ತು ಪ್ರವಾಹದ ಹಳೆಯ ದತ್ತಾಂಶಗಳನ್ನು ವಿಶ್ಲೇಷಿಸಿ ಸಹಾಯ ಮಾಡಿತು. 1931ರಲ್ಲಿ ಭಾರತೀಯ ಕೃಷಿ ಸಂಶೋಧನಾ ಮಂಡಳಿಯಿಂದ [ICAR] ಬಂದ ಅನುದಾನದ ನೆರವಿನಿಂದ ಭಾರತೀಯ ಸಾಂಖ್ಯಿಕ ಸಂಸ್ಥೆ [ISI] ಒಂದು ಪೂರ್ಣ ಪ್ರಮಾಣದ ಸಂಶೋಧನಾ ಕೇಂದ್ರವಾಗಿ ರೂಪಪಡೆದುಕೊಂಡಿತು.

1933ರಲ್ಲಿ ಭಾರತದ ಸಂಖ್ಯಾಶಾಸ್ತ್ರಜ್ಞರ ಸಂಶೋಧನೆಗಳನ್ನು ಪ್ರಕಟಿಸಲು ಅನುಕೂಲಮಾಡಿಕೊಡುವ ಉದ್ದೇಶದಿಂದ ಐಎಸ್ಐ ಮೂಲಕ ಭಾರತದ ಮೊದಲ ಸಂಖ್ಯಾಶಾಸ್ತ್ರದ ಪತ್ರಿಕೆ 'ಸಂಖ್ಯಾ' ಆರಂಭಿಸಿದರು. ಆ ಪತ್ರಿಕೆಯಲ್ಲಿ ಮಹಲನೋಬಿಸ್ ಅವರ ಪ್ರಸಿದ್ಧ 'ಡಿ-ಸ್ಕ್ವೇರ್' ಅಥವಾ 'ಮಹಲನೋಬಿಸ್ ದೂರ' ಸೂತ್ರವು ಪ್ರಕಟವಾಯಿತು. ಅವರು 1920ರ ದಶಕದಲ್ಲಿ ಮಾನವಶಾಸ್ತ್ರದ ದತ್ತಾಂಶಗಳನ್ನು ವಿಶ್ಲೇಷಿಸುವಾಗ ಈ ವಿಧಾನವನ್ನು ಅವರು ರೂಪಿಸಿದ್ದರು. ವಿವಿಧ ಬುಡಕಟ್ಟು ಅಥವಾ ಜನಾಂಗದ ಜನರ ದೈಹಿಕ ಅಳತೆಗಳನ್ನು (ತಲೆಬುರುಡೆಯ ಗಾತ್ರ, ಮೂಗಿನ ಉದ್ದ ಇತ್ಯಾದಿ) ಹೋಲಿಸುವಾಗ, ಯಾವ ಎರಡು ಗುಂಪುಗಳ ನಡುವೆ ಹೆಚ್ಚಿನ ಸಾಮ್ಯತೆ ಇದೆ ಮತ್ತು ಯಾವ ಗುಂಪುಗಳು ತೀರಾ ಭಿನ್ನವಾಗಿವೆ ಎಂಬುದನ್ನು ನಿಖರವಾಗಿ ತಿಳಿಯಲು ಡಿ-ಸ್ಕ್ವೇರ್ ವಿಧಾನವನ್ನು ಬಳಸಿಕೊಂಡರು. ಈಗ ಅದನ್ನು ಹಲವು ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ಕ್ರೆಡಿಟ್ ಕಾರ್ಡ್ ವಂಚನೆಗಳನ್ನು ಪತ್ತೆಹಚ್ಚಲು, ಡಿಎನ್ಎ ಸಂರಚನೆಗಳ ನಡುವಿನ ಹೋಲಿಕೆಯನ್ನು ಅಳೆಯಲು, ಒಟ್ಟಾರೆಯಾಗಿ ಅಶೋಕ್ ರುದ್ರ ಅವರು ಹೇಳುವಂತೆ ಈ ಪರಿಕಲ್ಪನೆಯು ಇಂದು ಬಹುಚರ ದತ್ತಾಂಶ ವಿಶ್ಲೇಷಣೆಯ [Multivariate Analysis] ಭದ್ರ ಬುನಾದಿಯಾಗಿದೆ.

ಮಹಲನೋಬಿಸ್ ಪ್ರತಿಯೊಂದು ವಿಷಯದಲ್ಲೂ ಅಂಕಿಅಂಶಗಳನ್ನು ಹೇಗೆ ಬಳಸಬಹುದು ಎಂದು ತೋರಿಸಿಕೊಟ್ಟವರು. ಮಳೆ-ಪ್ರವಾಹದ ಬಗ್ಗೆ ತಿಳಿಯಲು, ಮನುಷ್ಯರ ಲಕ್ಷಣಗಳ ಬಗ್ಗೆ ಸಂಶೋಧನೆ ಮಾಡಲು, ಬಡತನವನ್ನು ತಿಳಿಯಲು ಅಥವಾ ಜನರ ಆರೋಗ್ಯದ ಸ್ಥಿತಿಯನ್ನು ತಿಳಿಯಲು ಅವರು ಗಣಿತವನ್ನೇ ಅಸ್ತ್ರವಾಗಿ ಬಳಸಿದರು. ಕೃಷಿ ಸಂಶೋಧನೆ ಮತ್ತು ಕಾರ್ಖಾನೆಗಳಲ್ಲಿ ಆಧುನಿಕ ತಂತ್ರಗಳನ್ನು ಪರಿಚಯಿಸಲು ಅವರು ತುಂಬಾ ಶ್ರಮಪಟ್ಟರು. ಇವರ ಕೆಲಸದಿಂದಾಗಿ ಭಾರತದಲ್ಲಿ ಆರ್ಥಿಕತೆಯನ್ನು ಅಂಕಿಅಂಶಗಳ ಮೂಲಕ ಅಳೆದು, ಸಂಶೋಧನೆ ಮಾಡುವ ಅಭ್ಯಾಸ ಶುರುವಾಯಿತು.

ಸ್ವಾತಂತ್ರ್ಯ ಬಂದ ಶುರುವಿನಲ್ಲಿ ಭಾರತದಲ್ಲಿ ಒಂದು ಬಗೆಯ "ಸಾಂಖ್ಯಿಕ ಶೂನ್ಯತೆ"ಯಿತ್ತು. ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಲು ಯೋಜನಾ ಆಯೋಗಕ್ಕೆ ಜನರ ಬಳಕೆ, ಉತ್ಪಾದನೆ ಮತ್ತು ಬಡತನ ಇತ್ಯಾದಿಗಳ ಬಗ್ಗೆ ನಿಖರವಾದ ದತ್ತಾಂಶ ಬೇಕಿತ್ತು. ಆದರೆ ಅಂತಹ ಯಾವುದೇ ಮಾಹಿತಿ ಆಗ ಲಭ್ಯವಿರಲಿಲ್ಲ. ಜೊತೆಗೆ 60 ಕೋಟಿ ಜನರಿಂದ ಅಂಕಿ ಅಂಶಗಳನ್ನು ಸಂಗ್ರಹಿಸಲು ಸಾಧ್ಯವಿಲ್ಲ. ಆದ್ದರಿಂದ ಸ್ಯಾಂಪಲ್ ಕ್ರಮದಿಂದ ಇಡೀ ದೇಶಕ್ಕೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸಬೇಕೆನ್ನುವುದು ಮಹಲನೋಬಿಸ್ ಅವರ ವಾದವಾಗಿತ್ತು. ಭಾರತದ ಆರ್ಥಿಕತೆಯ ಸಮಗ್ರ ಚಿತ್ರಣವನ್ನು ನೀಡಲು ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ ಮಾದರಿ ಸಮೀಕ್ಷೆಗಳನ್ನು ನಿರಂತರವಾಗಿ ನಡೆಸಬೇಕೆಂದು ಮಹಲನೋಬಿಸ್ ವಾದಿಸುತ್ತಿದ್ದರು. ಅವರು ತಮ್ಮ 'ಬೃಹತ್ ಪ್ರಮಾಣದ ಮಾದರಿ ಸಮೀಕ್ಷೆ' [Large Scale Sample Surveys] ಸಿದ್ಧಾಂತಗಳನ್ನು ಇಲ್ಲಿ

ಅನ್ವಯಿಸಿದರು. ಮಹಲನೋಬಿಸ್ ಅವರ ಅತ್ಯಂತ ಮಹತ್ವದ ಸಾಧನೆಯೆಂದರೆ ರಾಷ್ಟ್ರೀಯ ಮಾದರಿ ಸಮೀಕ್ಷೆ [NSS] ಯೋಜನೆ. ಇದು ದೇಶದ ಬಳಕೆ ವೆಚ್ಚದಿಂದ ಹಿಡಿದು ಕೃಷಿ ಭೂಮಿಯವರೆಗೆ ಹತ್ತು ಹಲವು ವಿಷಯಗಳ ದತ್ತಾಂಶವನ್ನು ಸಂಗ್ರಹಿಸಿತು. ಇಂದಿಗೂ ಉದ್ಯೋಗ, ಬಡತನ ಮತ್ತು ಕಲ್ಯಾಣ ಯೋಜನೆಗಳ ಮೇಲ್ವಿಚಾರಣೆಗೆ ಎನ್‌ಎಸ್‌ಎಸ್ ದತ್ತಾಂಶವೇ ಆಧಾರ. ಪ್ರಾರಂಭದಲ್ಲಿ ಮಾದರಿ ಸಮೀಕ್ಷೆಯ ಬಗ್ಗೆ ಅನುಮಾನಗಳಿದ್ದರೂ, ಅದು ಯಶಸ್ವಿಯಾದ ಮೇಲೆ ಜಗತ್ತು ಅದನ್ನು ಮೆಚ್ಚಿಕೊಂಡಿತು. ದೇಶದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ನಿರಂತರವಾಗಿ ಅಳೆಯಲು ಎನ್‌ಎಸ್‌ಎಸ್ ಇಡೀ ಜಗತ್ತಿಗೆ ಒಂದು ಮಾದರಿಯಾಗಿದೆ.



ಪಿ ಸಿ ಮಹಲನೋಬಿಸ್, ಸತ್ಯೇಂದ್ರನಾಥ್ ಬೋಸ್ ಮತ್ತು ರೋನಾಲ್ಡ್ ಫಿಷರ್

ಅಂಕಿಅಂಶಗಳ ಜಗತ್ತಿನ ದಿಗ್ಗಜ ಎಡ್ವರ್ಡ್ ಡೆಮಿಂಗ್ ಅವರೇ ಭಾರತ ಕ್ರಮವನ್ನು ಶ್ಲಾಘಿಸುತ್ತಾ

“ಜಗತ್ತಿನ ಯಾವುದೇ ದೇಶದಲ್ಲೂ ಅಲ್ಲಿಯ ಜನರ ಬಗ್ಗೆ ಈ ಪ್ರಮಾಣದ ಮಾಹಿತಿ ಸಿಗುವುದಿಲ್ಲ. ಜನರ ದಿನನಿತ್ಯದ ಖರ್ಚು, ಅನಾರೋಗ್ಯದಿಂದ ವ್ಯರ್ಥವಾಗುವ ಸಮಯ, ಕೆಲಸ, ನಿರುದ್ಯೋಗ, ಕೃಷಿ ಮತ್ತು ಉತ್ಪಾದನೆ, ಹೀಗೆ ಪ್ರತಿಯೊಂದು ವಿಷಯದಲ್ಲೂ ಭಾರತದಲ್ಲಿ ಇರುವಷ್ಟು ಪೂರ್ಣಪ್ರಮಾಣದ ಮಾಹಿತಿ ಬೇರೆ ಯಾವ ದೇಶದಲ್ಲೂ ಇಲ್ಲ.” ಎಂದಿದ್ದರು.

1949ರಲ್ಲಿ ಪ್ರಧಾನಿ ನೆಹರೂ ಅವರು ಮಹಲನೋಬಿಸ್ ಅವರನ್ನು ಕೇಂದ್ರ ಸಚಿವ ಸಂಪುಟದ ಗೌರವ ಸಾಂಖ್ಯಿಕ ಸಲಹೆಗಾರರನ್ನಾಗಿ ಮತ್ತು ರಾಷ್ಟ್ರೀಯ ಆದಾಯ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿದರು. ಈ ಸಮಿತಿಯು ಭಾರತದ ಮೊದಲ ರಾಷ್ಟ್ರೀಯ ಆದಾಯದ ಅಂದಾಜನ್ನು ಸಿದ್ಧಪಡಿಸಿತು.

ದೇಶದ ಸಾಮಾಜಿಕ–ಆರ್ಥಿಕ ದತ್ತಾಂಶದ ಸಂಗ್ರಹಕ್ಕೆ ಬೇಕಾದ ವ್ಯವಸ್ಥೆಯನ್ನು ನಿರ್ಮಿಸುವುದರ ಜೊತೆಗೆ, ಮಹಲನೋಬಿಸ್ ಅವರು ಆರ್ಥಿಕ ಯೋಜನೆಗೆ ದೊಡ್ಡ ಕೊಡುಗೆ ನೀಡಿದ್ದಾರೆ; ಭಾರತದ ಎರಡನೇ ಪಂಚವಾರ್ಷಿಕ ಯೋಜನೆಯನ್ನು (1956–61) ರೂಪಿಸುವಲ್ಲಿ ಮಹಲನೋಬಿಸ್ ಅವರ ಪಾತ್ರ ನಿರ್ಣಾಯಕವಾಗಿತ್ತು. ‘ಮಹಲನೋಬಿಸ್ ಮಾದರಿ’ ಎಂದೇ ಪ್ರಖ್ಯಾತವಾಗಿರುವ ಯೋಜನೆಯ ಮಾದರಿಯಲ್ಲಿ ಭಾರಿ ಕೈಗಾರಿಕೆಗಳಿಗೆ ಮತ್ತು ಬಂಡವಾಳ ಸರಕುಗಳಿಗೆ ಹೆಚ್ಚಿನ ಆದ್ಯತೆ ನೀಡಲಾಯಿತು. ಇದರಿಂದ ತಕ್ಷಣದಲ್ಲಿ ಅಂತಹ ಬೆಳವಣಿಗೆ ಸಾಧ್ಯವಾಗದಿದ್ದರೂ, ದೀರ್ಘಾವಧಿಯ ಬೆಳವಣಿಗೆಗೆ ಇದು ಅಗತ್ಯವೆಂದು ಅವರು ನಂಬಿದ್ದರು. ಅವರ ಮಾದರಿಯ ಬಗ್ಗೆ ಹಲವು ಟೀಕೆಗಳಿತ್ತು. ಆದರೂ ಪ್ರತಿಯೊಂದು ಪಂಚವಾರ್ಷಿಕ ಯೋಜನೆಗೂ ಆರ್ಥಿಕ ಮಾದರಿಗಳನ್ನು ರೂಪಿಸುವ ಪದ್ಧತಿ ಹಲವು ದಶಕಗಳು ಮುಂದುವರಿಯಿತು. ಮಹಲನೋಬಿಸ್ ಅವರು 1955ರಿಂದ 1967ರವರೆಗೆ ಯೋಜನಾ ಆಯೋಗದ ಸದಸ್ಯರಾಗಿದ್ದರು. ಅವರ ಮಾರ್ಗದರ್ಶನದಲ್ಲಿ ಬೆಳೆದ ಅರ್ಥಶಾಸ್ತ್ರಜ್ಞರ ಪ್ರಭಾವವನ್ನು ಇಂದಿಗೂ ಭಾರತದ ಆರ್ಥಿಕ ಚಿಂತನೆಯಲ್ಲಿ ಕಾಣಬಹುದು.

ಜಗತ್ತು ಮಹಲನೋಬಿಸ್ ಅವರ ಸಾಧನೆಯನ್ನು ಗುರುತಿಸಿತ್ತು. 1946ರಲ್ಲಿ ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಸಾಂಖ್ಯಿಕ ಆಯೋಗದ [UNSC] ಸಭೆಯಲ್ಲಿ ಮಹಲನೋಬಿಸ್ ಏಷ್ಯಾದ ಏಕೈಕ ಪ್ರತಿನಿಧಿಯಾಗಿದ್ದರು. ಆಡಳಿತಾತ್ಮಕ ದತ್ತಾಂಶಗಳ ಕೊರತೆಯಿರುವ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ‘ದೊಡ್ಡ ಪ್ರಮಾಣದ ಮಾದರಿ ಸಮೀಕ್ಷೆಗಳು’ [Large-scale sample surveys] ವರದಾನವಾಗಲಿವೆ ಎಂದು ಅವರು ಪ್ರತಿಪಾದಿಸಿದರು. ಇವರ ಸಲಹೆಯನ್ನು ಒಪ್ಪಿದ ವಿಶ್ವಸಂಸ್ಥೆಯು ಮಾದರಿ ಸಮೀಕ್ಷೆಗಳ ಮೊದಲ ಉಪಸಮಿತಿಯ ಅಧ್ಯಕ್ಷರನ್ನಾಗಿ ಇವರನ್ನು ನೇಮಿಸಿತು. ಪೈಲಟ್ ಸಮೀಕ್ಷೆ ಇತ್ಯಾದಿ ಇವರು ಕಂಡುಕೊಂಡು ಹೊಸ ವಿಧಾನಗಳು ಜಾಗತಿಕ ಸಮೀಕ್ಷಾ ಪದ್ಧತಿಯ ಭಾಗವಾದವು.

.ಮಹಲನೋಬಿಸ್ ಅವರು ಸಂಖ್ಯಾಶಾಸ್ತ್ರಕ್ಕೆ ನೀಡಿದ ಕೊಡುಗೆಯನ್ನು ಜಗತ್ತು ಇಂದು ನೆನಸಿಕೊಳ್ಳುತ್ತದೆ. ಅದು ಗಣನೀಯವಾದ ಕೊಡುಗೆ ಕೂಡ ಹೌದು. ಆದರೆ ಅವರು ಮೂಲತಃ ಭೌತಶಾಸ್ತ್ರದ ಪ್ರಾಧ್ಯಾಪಕರು. ಅದರೆ ಅವರು ಭೌತಶಾಸ್ತ್ರಕ್ಕೆ ಯಾವುದೇ ಸಂಶೋಧನಾ ಕೊಡುಗೆಗಳನ್ನು ನೀಡಿರಲಿಲ್ಲ. ಅವರು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದಾಗಲೂ ಅಲ್ಲಿ ಅವರು ಸ್ಥಾಪಿಸಿದ್ದ ಸಾಂಖ್ಯಿಕ ಪ್ರಯೋಗಾಲಯದಲ್ಲಿ ಹೆಚ್ಚು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಅಲ್ಲಿ ಕೆಲಸ ಮಾಡುವ ಅವಕಾಶ ತಪ್ಪಿಹೋಗುತ್ತದೆ ಅನ್ನುವ ಕಾರಣಕ್ಕೆ ಅಲ್ಲಿಂದ ವರ್ಗಾವಣೆಯನ್ನು ಒಪ್ಪಿಕೊಳ್ಳಲಿಲ್ಲ. ಅದರಿಂದಾಗಿ ಹಲವು ಬಡ್ತಿಗಳನ್ನು ಕಳೆದುಕೊಂಡರು. ಅದನ್ನು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ತನ್ನ ವೈಜ್ಞಾನಿಕ ಕೆಲಸವನ್ನು ಮುಂದುವರಿಸುವ ಅವಕಾಶಕ್ಕಾಗಿ ತೆತ್ತ ಸಣ್ಣ ಬೆಲೆ ಎಂದೇ ಅವರು ಭಾವಿಸಿದ್ದರು. ಆದರೂ ಸಹ, ಎಂ. ಎನ್. ಸಹಾ ಮತ್ತು ಎಸ್. ಎನ್. ಬೋಸ್ ಅವರಂತಹ ಉನ್ನತ ಭೌತವಿಜ್ಞಾನಿಗಳು ಅವರೊಂದಿಗೆ ಜಂಟಿಯಾಗಿ ಲೇಖನಗಳನ್ನು ಬರೆದಿದ್ದಾರೆ. ಸಿ ವಿ ರಾಮನ್ ಕೂಡ ತಮ್ಮ ಶಿಷ್ಯನ ಡಿಎಸ್ಸಿ ಪ್ರಬಂಧಕ್ಕೆ ಮಹಲನೋಬಿಸ್ ಅವರನ್ನು ಪರೀಕ್ಷಕರನ್ನಾಗಿ ನೇಮಿಸಿದ್ದರು. ಅಂದರೆ ಭೌತಶಾಸ್ತ್ರದಲ್ಲೂ ಅವರಿಗೆ ಒಂದು ವಿಶಿಷ್ಟ ಸ್ಥಾನವಿತ್ತು ಅನ್ನುವುದು ಸ್ಪಷ್ಟ.

ಮಹಲನೋಬಿಸ್ ಜಗತ್ತಿನ ಹಲವು ಪ್ರಖ್ಯಾತರು ಭಾರತಕ್ಕೆ ಬಂದು ಹೋಗುವುದಕ್ಕೆ ಕಾರಣವಾಗಿದ್ದರು. ರಬೀಂದ್ರನಾಥ್ ಟಾಗೂರ್ ಅವರೊಂದಿಗೂ ತೀರಾ ಆತ್ಮೀಯ ಸಂಬಂಧ ಇಟ್ಟುಕೊಂಡಿದ್ದರು. ಶಾಂತಿನಿಕೇತನವೂ ಸೇರಿದಂತೆ ಹಲವು ಸಂಸ್ಥೆಗಳೊಂದಿಗೆ ಅವರಿಗೆ ನಿಕಟ ಸಂಪರ್ಕವಿತ್ತು. ಆದರೂ ‘ಪ್ರೊಫೆಸರ್’ ಅವರೊಂದಿಗೆ ವ್ಯವಹರಿಸುವುದು ಅಷ್ಟು ಸುಲಭವಾಗಿರಲಿಲ್ಲ. ಮಹಲನೋಬಿಸ್ ಜೀವನ ಚರಿತ್ರೆ ಬರೆದ ಅಶೋಕ್ ರುದ್ರ ಅವರನ್ನು “ಮಹಾನ್ ಸರ್ವಾಧಿಕಾರಿ” [The Great Dictator] ಎಂದು ಕರೆದಿದ್ದಾರೆ. “ಐಎಸ್ಐ ವ್ಯವಹಾರಗಳಲ್ಲಿ ಅವರ ಮಾತೇ ವೇದವಾಕ್ಯವಾಗಿತ್ತು. ಅದಕ್ಕೆ ಅವರ ವ್ಯಕ್ತಿತ್ವವಷ್ಟೇ ಕಾರಣವಲ್ಲ. ಬದಲಿಗೆ ಅವರನ್ನು ಪ್ರಶ್ನಿಸುವವರ ಸಂಖ್ಯೆಯೂ ತುಂಬಾ ಕಡಿಮೆ ಇತ್ತು.” ಎನ್ನುವ ಮಾತುಗಳೂ ಇವೆ.

ಇವೆಲ್ಲದರ ನಡುವೆ ಮಹಲನೋಬಿಸ್ ಒಬ್ಬ ಮಹಾನ್ ಶೈಕ್ಷಣಿಕ ಸಂಶೋಧಕ ಅನ್ನುವುದರಲ್ಲಿ ಅನುಮಾನವಿಲ್ಲ. ಅದಕ್ಕಿಂತ ಹೆಚ್ಚಾಗಿ ಅವರು ಆಧುನಿಕ ಭಾರತದ ಸಾಂಖ್ಯಿಕ ವ್ಯವಸ್ಥೆಯ ಭದ್ರ ಬುನಾದಿ ಹಾಕಿದ ‘ಸಾಂಸ್ಥಿಕ ಶಿಲ್ಪಿ’.

ಅಕರ:

1. MAHALANOBIS: A BIOGRAPHY By Ashok Rudra

2. P.C. Mahalanobis, Father of the Indian statistical system, By Pramit Bhattacharya. Azim Premzi University

ಅಭಿವೃದ್ಧಿಯ ಭ್ರಮೆ

ನಾವು ಹಲವು ದಶಕಗಳಿಂದ ಜಿಡಿಪಿಯ ಕನ್ನಡಿಯಲ್ಲಿ ನಮ್ಮ ಬೆಳವಣಿಗೆಯನ್ನು ನೋಡಿಕೊಂಡು ಸಂಭ್ರಮಿಸುತ್ತಿದ್ದೇವೆ. ನಮ್ಮ ದೇಶ, ನಮ್ಮ ಸಮಾಜ ಎಷ್ಟು ಸುಂದರವಾಗಿದೆ ಅಂತ ಹೆಮ್ಮೆ ಪಟ್ಟುಕೊಳ್ಳುತ್ತಿದ್ದೇವೆ. ಒಂದೋ ಎರಡೋ ಅಂಶ ಕುಸಿದರೆ ತಬ್ಬಿಬ್ಬಾಗಿ ಅದಕ್ಕೆ ಸಮರ್ಥನೆಯನ್ನು ಹೆಣೆಯುವುದರಲ್ಲೇ ನಮ್ಮ ಶಕ್ತಿಯನ್ನೆಲ್ಲಾ ವ್ಯಯಮಾಡುತ್ತಿದ್ದೇವೆ. ಹೇಗೋ ಒಟ್ಟಲ್ಲಿ ಜಿಡಿಪಿ ಹೆಚ್ಚುತ್ತಿರಬೇಕು. ಆಗಲೇ ನಮಗೆ ನೆಮ್ಮದಿ. ಆದರೆ ನಾವು ನೋಡುತ್ತಿರುವ ಕನ್ನಡಿಯಲ್ಲೇ ಏನೋ ಐಬಿದೆ, ಅದು ಹೇಳೊ ಕಥೆಗೂ ಜನರ ವಾಸ್ತವ ಬದುಕಿಗೂ ತಾಳೆ ಆಗುತ್ತಿಲ್ಲ.


ನಾವೆಲ್ಲಾ ಜಿಡಿಪಿ ಅನ್ನೋದು ಅನಾದಿಕಾಲದಿಂದ ಇದ್ದ ಕಲ್ಪನೆಯೇನೋ ಅನ್ನುವಂತೆ ಮಾತನಾಡುತ್ತಿದ್ದೇವೆ. ವಾಸ್ತವವಾಗಿ ಅದು ಇತ್ತೀಚಿನ ಪರಿಕಲ್ಪನೆ. 1930ರಲ್ಲಿ ಮಹಾನ್ ಆರ್ಥಿಕ ಕುಸಿತವನ್ನು ಎದುರಿಸುವುದಕ್ಕೆ ಹುಟ್ಟಕೊಂಡ ಸಾಧನ. ಹಾಗೆಯೇ 'ಆರ್ಥಿಕತೆ' ಅನ್ನೊ ಪರಿಕಲ್ಪನೆ ಕೂಡ 1930ರ ನಂತರದ್ದೆ. 1930ರಲ್ಲಿ ರಾಷ್ಟ್ರದ ಆರ್ಥಿಕತೆಯನ್ನು ಅಳೆಯೋದಕ್ಕೆ ಒಂದು ಕ್ರಮ ಇರಲಿಲ್ಲ. ಸಿಮನ್ ಕುಜ್ನೆಟ್ ಮನುಷ್ಯನ ಎಲ್ಲಾ ಚಟುವಟಿಕೆಗಳನ್ನು ಒಂದು ಸಂಖ್ಯೆಗೆ ಇಳಿಸೋದಕ್ಕೆ ಇದನ್ನು ಸೃಷ್ಟಿಸಿದ. ಜಿಡಿಪಿಯನ್ನು 20ನೇ ಶತಮಾನದ ಮಹಾನ್ ಅನ್ವೇಷಣೆ ಅಂತ ಬಣ್ಣಿಸಲಾಯಿತು. ಆದರೆ ಅವನ ಕಲ್ಪನೆ ಬೇರೆ ಇತ್ತು. ಇದು ನಂತರ ಫ್ರೆಂಕಿನ್‌ಸ್ಟೈನ್ ತರಹ ಜೀವಪಡೆದುಕೊಂಡು ತನ್ನಷ್ಟಕ್ಕೆ ಬೆಳೆಯುತ್ತಾ ಹೋಯಿತು.

ಜಿಡಿಪಿ ಎಲ್ಲಾ ರೀತಿಯ ಉತ್ಪಾದನೆಯನ್ನು ಅಳತೆಮಾಡುತ್ತದೆ. ಅದು ಒಳ್ಳೆಯದೋ ಕೆಟ್ಟದ್ದೋ ಅನ್ನುವುದನ್ನು ಅದು ನೋಡುವುದಿಲ್ಲ. ಮಾಲಿನ್ಯ ಕಂಡರೆ ಅದಕ್ಕೆ ಇಷ್ಟ. ಅದನ್ನು ಶುಚಿಮಾಡುವುದಕ್ಕೆ ಹಣ ಖರ್ಚುಮಾಡುತ್ತೀರಿ. ಆಗ ನಮ್ಮ ಜಿಡಿಪಿ ಏರುತ್ತದೆ. ಅದಕ್ಕೆ ಕ್ರೈಮ್ ಕಂಡರೆ ಎಲ್ಲಿಲ್ಲದ ವ್ಯಾಮೋಹ. ಯಾಕೆಂದರೆ ಆಗ ಪೋಲಿಸ್ ದಳದ ಮೇಲೆ ಹಣ ಖರ್ಚುಮಾಡಬಹುದು, ಮುರಿದ ಗಾಜು ಇತ್ಯಾದಿಗಳನ್ನು ರಿಪೇರಿಮಾಡುವುದಕ್ಕೆ ಹಣ ಖರ್ಚು ಆಗುತ್ತದೆ. ಹಾಗೆಯೇ ಯುದ್ಧ ಆದರೂ ಒಳ್ಳೆಯದೇ. ಶಸ್ತ್ರಾಸ್ತ್ರಗಳನ್ನು ನೀವು ಮತ್ತೆ ಕೊಳ್ಳಬಹುದು. ಅಷ್ಟೇ ಅಲ್ಲ ಹಾಳಾದ ಊರನ್ನು ಪುನರ್‌ನಿರ್ಮಿಸುವುದಕ್ಕೂ ಹಣ ಖರ್ಚು. ಜಿಡಿಪಿ ಲೆಕ್ಕ ಹಾಕುವುದರಲ್ಲಿ ನಿಸ್ಸೀಮ, ಆದರೆ ಗುಣದ ವಿಷಯಕ್ಕೆ ಬಂದಾಗ ಅದು ಕುರುಡು.

ಅದು ವ್ಯಾಪಾರಿ ಇದ್ದ ಹಾಗೆ. ಹಣ ವಿನಿಮಯ ಆಗದ ವ್ಯವಹಾರದಲ್ಲಿ ಅದಕ್ಕೆ ಆಸಕ್ತಿಯಿಲ್ಲ. ಮನೆಯಲ್ಲಿ ಮಹಿಳೆಯರು ಮಾಡುವ ಕೆಲಸ ಅದಕ್ಕೆ ದೊಡ್ಡ ವಿಷಯವಲ್ಲ. ಮಾಲುಗಳಲ್ಲಿ ಮಾರುವ ನೀರು ಬಾಟಲ್ ಅದರಲ್ಲಿ ಸೇರುತ್ತದೆ ಆದರೆ ಕಿಲೋಮೀಟರ್ಗಟ್ಟಲೇ ನಡೆದು ಗ್ರಾಮೀಣ ಮಹಿಳೆಯರು ಹೊತ್ತು ತರುವ ನೀರು ಅದರಲ್ಲಿ ಬರುವುದಿಲ್ಲ.

ಬೆಳವಣಿಗೆ ಅನ್ನುವುದು ಸರಕುಗಳ ಉತ್ಪಾದನೆಯೊಂದಿಗೆ ಶುರುವಾಯಿತು. ಅದು ಹುಟ್ಟಿಕೊಂಡದ್ದೇ ಭೌತಿಕ ಉತ್ಪಾದನೆಯನ್ನು ಅಳೆಯುವುದಕ್ಕೆ. ಇಟ್ಟಿಗೆ, ಸ್ಟೀಲ್, ಕಾರು ಇತ್ಯಾದಿಗಳ ಉತ್ಪಾದನೆಯೆಲ್ಲಾ ಅದರ ಲೆಕ್ಕದಲ್ಲಿ ಬರುತ್ತದೆ. ಆದರೆ ನೀವು ಡೌನ್‌ಲೋಡು ಮಾಡಿಕೊಂಡ ಸಂಗೀತ, ಮನೋವಿಜ್ಞಾನಿಯು ನಿಮ್ಮೊಂದಿಗೆ ಆತ್ಮಸಮಾಲೋಚನೆಯಲ್ಲಿದ್ದ ಸಮಯ ಇಂಥವೆಲ್ಲಾ ಬಂದಾಗ ಅದು ಸೋಲುತ್ತದೆ. ನಿಜವಾಗಿ ಪ್ರಗತಿಯನ್ನು ಅಳತೆ ಮಾಡುವುದಕ್ಕೆ ಅದು ಖಂಡಿತಾ ಒಳ್ಳೆಯ ಮಾಪಕವಲ್ಲ. ಕೆಲ ದಶಕಗಳ ಹಿಂದೆ ಒಬ್ಬ ಸಿಫಿಲಿಸ್ ಪೀಡಿತ ಕೋಟ್ಯಾಧೀಶ್ವರ ಒಂದು ವಾರಕ್ಕೆ ಬೇಕಾದ ಆಂಟಿಬಯೋಟಿಕ್ ಕೊಳ್ಳಲು ತನ್ನ ಸಂಪತ್ತಿನ ಅರ್ಧಭಾಗ ಖರ್ಚುಮಾಡಬೇಕಿತ್ತು. ಈಗ ನಿಮಗೆ ಅದು ಕೆಲವು ರೂಪಾಯಿಗಳಿಗೆ ಸಿಗುತ್ತದೆ. ಇಂತಹ ಪ್ರಗತಿಯ ಬಗ್ಗೆ ಜಿಡಿಪಿ ಏನೂ ಹೇಳುವುದಿಲ್ಲ.

ಮಾರುಕಟ್ಟೆಯನ್ನು ಅದರಷ್ಟಕ್ಕೆ ಕೆಲಸಮಾಡಲು ಬಿಟ್ಟರೆ ಅದು ಏಳುಬೀಳುಗಳನ್ನು ತನ್ನಷ್ಟಕ್ಕೆ ಸರಿಪಡಿಸಿಕೊಂಡು ನಮ್ಮ ಆರ್ಥಿಕತೆಯನ್ನು ಯಾವಾಗಲೂ ಸಂತಸದ ಸ್ಥಿತಿಯಲ್ಲಿ ಇಟ್ಟಿರುತ್ತದೆ ಅನ್ನುವುದು ನಮ್ಮ ಅರ್ಥಶಾಸ್ತ್ರದ ನಂಬಿಕೆ. ಅದು ನಿಂತಿರುವುದೇ ಆ ನಂಬಿಕೆಯ ಮೇಲೆ.



ಆರ್ಥಿಕತೆಯ ಲೆಕ್ಕದ ಪ್ರಕಾರ, ನಾವೆಲ್ಲಾ ಈಗ ಹಿಂದೆಂದಿಗಿಂತಲೂ ಹೆಚ್ಚು ಶ್ರೀಮಂತರು, ಜೊತೆಗೆ ಸುಖವಾಗಿದ್ದೀವಿ. ಆದ್ರೆ ನಮಗ್ಯಾಕೆ ಹಂಗೆ ಅನ್ನಿಸ್ತಾ ಇಲ್ಲ? ಡೇವಿಡ್ ಪಿಲ್ಲಿಂಗ್ ಅವರ 'ಅಭಿವೃದ್ಧಿಯ ಭ್ರಮೆ' [The Growth Delusion] ಕೃತಿ, ನಾವು ಅಭಿವೃದ್ಧಿಯ ಸಾಧಕ–ಬಾಧಕಗಳ ಬಗ್ಗೆ ಯೋಚಿಸದೆ ಕೇವಲ 'ಅಭಿವೃದ್ಧಿ' ಹೆಚ್ಚಿಸೋದ್ರಲ್ಲೇ ಬಿಜಿಯಾಗಿದ್ದೇವೆ ಅನ್ನುವುದನ್ನು ವಿವರಿಸುತ್ತದೆ.

ಸುರಕ್ಷಿತ ರಸ್ತೆಗಳಿಂದ ಹಿಡಿದು ಮಾನಸಿಕ ನೆಮ್ಮದಿಯವರೆಗೆ, ನಮ್ಮ ಜೀವನಕ್ಕೆ ಬೇಕಾದ ಎಷ್ಟೋ ಮುಖ್ಯ ವಿಷಯಗಳು ಜಿಡಿಪಿಯ ಅಂಕಿ–ಅಂಶಗಳ ಲೆಕ್ಕಕ್ಕೆ ಸಿಗೋದಿಲ್ಲ.

ಈ ಪುಸ್ತಕ ನಮ್ಮನ್ನು ಇಡೀ ಬೆಳವಣಿಗೆಯ ಪ್ರಕ್ರಿಯೆಯ ಬಗ್ಗೆಯೇ ಯೋಚನೆಗೆ ಹಚ್ಚುತ್ತದೆ. ನಾವೂ ಬರೀ ಗ್ರೋತ್ ಅನ್ನೇ ನೆಚ್ಚಿಕೊಂಡಿರೋದರಿಂದ ಹೇಗೆ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ ಅನ್ನುವುದನ್ನು ಈ ಪುಸ್ತಕದಲ್ಲಿ ಡೇವಿಡ್ ಪಿಲ್ಲಿಂಗ್ ವಿವರಿಸುತ್ತಾರೆ. ಜೊತೆಗೆ, ನಮ್ಮ ಯಶಸ್ಸನ್ನು ಅಳೆಯುವುದಕ್ಕೆ ನಾವು ಹಿಡಿಯಬಹುದಾದ ಬೇರೆ ದಾರಿಗಳನ್ನು ಚರ್ಚಿಸಿದ್ದಾರೆ.

2008ರ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ನಮ್ಮ ಅರ್ಥಶಾಸ್ತ್ರದ ಈ ನಂಬಿಕೆ ಹುಸಿಯಾಗುತ್ತಿದೆ ಅಂತ ಹಲವರಿಗೆ ಅನ್ನಿಸಿತು. ಆರ್ಥಿಕ ಬೆಳವಣಿಗೆ ಅನ್ನೋದು ಹೆಚ್ಚುತ್ತಿರುವ ಅಸಮಾನತೆಯ ಬಗ್ಗೆಯಾಗಲಿ, ಜಾಗತಿಕ ಅಸಮತೋಲನದ ಬಗ್ಗೆಯಾಗಲಿ, ನಾಶವಾಗುತ್ತಿರುವ ಪರಿಸರದ ಬಗ್ಗೆಯಾಗಲಿ ನಮಗೆ ಏನನ್ನೂ ಹೇಳುವುದಿಲ್ಲ.

ಈ ರೀತಿಯ ಬೆಳವಣಿಗೆಯ ಒಂದು ದೊಡ್ಡ ಸಮಸ್ಯೆಯೆಂದರೆ ಅದು ಸಾಗುತ್ತಿರಬೇಕಾದರೆ ಉತ್ಪಾದನೆ ನಿರಂತರವಾಗಿ ಆಗುತ್ತಿರಬೇಕು. ಜೊತೆಜೊತೆಗೆ ಅದರ ಬಳಕೆಯೂ ಆಗುತ್ತಿರಬೇಕು. ನಮಗೆ ಇನ್ನೂ ಬೇಕು,

ಬೇಕು ಅನ್ನುವ ಹಪಹಪಿ ಇರುವ ತನಕ ಬೆಳವಣಿಗೆ ಆಗುತ್ತಿರುತ್ತದೆ. ಒಮ್ಮೆ ನಮ್ಮ ಆಸೆ ಇಂಗಿಹೋದರೆ ಆರ್ಥಿಕತೆ ಮುಗ್ಗರಿಸಿ ಬೀಳುತ್ತದೆ. ಆಧುನಿಕ ಅರ್ಥಶಾಸ್ತ್ರ ನಿಂತಿರುವುದೇ ನಮ್ಮ ಇಂಗದ ಆಸೆಯ ಮೇಲೆ. ಇದೊಂದು ಹುಚ್ಚು ಅನ್ನೋದು ನಮ್ಮ ಅಂತರಾಳಕ್ಕೆ ಗೊತ್ತು. ನಿರಂತರ ವಿಸ್ತರಣೆಯನ್ನು ಕೇವಲ ಅರ್ಥಶಾಸ್ತ್ರದಲ್ಲಿ ಮಾತ್ರ ಒಳ್ಳೆಯ ಬೆಳವಣಿಗೆಯಾಗಿ ನೋಡಲಾಗುತ್ತದೆ. ಜೀವಶಾಸ್ತ್ರದಲ್ಲಿ ಇದನ್ನು ಕ್ಯಾನ್ಸರ್ ಅಂತ ಕರೆಯುತ್ತಾರೆ.

ನಮಗೆ ಬೇಕೋ ಬೇಡವೋ, ನಾವು ಬಳಸುತ್ತೇವೋ ಇಲ್ಲವೋ, ಸುಮ್ಮನೇ ಕೊಳ್ಳುತ್ತಲೇ ಇದ್ದೇವೆ. ಹೊಸ ಹೊಸ ಮಾಡೆಲ್ಲುಗಳಿಗಾಗಿ ಹಪಹಪಿಸುತ್ತಿರುತ್ತೇವೆ. ಈಗ ಐಫೋನ್ 8 ಹಳತಾಗಿದೆ. ನಾವು ಕೊಳ್ಳುವ ವಾಷಿಂಗ್ ಮೆಷಿನ್, ಟೋಸ್ಟರ್ ಇವೆಲ್ಲವನ್ನೂ ಬೇಗ ಕೆಟ್ಟುಹೋಗುವ ರೀತಿಯಲ್ಲೇ ಡಿಸೈನ್ ಮಾಡಲಾಗಿರುತ್ತದೆ. ನಾವು ಮತ್ತೆ ಮತ್ತೆ ಕೊಳ್ಳುತ್ತಲೇ ಇರುತ್ತೇವೆ. ಆ ಚಕ್ರ ನಿಲ್ಲುವುದೇ ಇಲ್ಲ. ಮನೆಯಲ್ಲೇ ಕುಳಿತು ಹಲವಾರು ವಸ್ತುಗಳನ್ನು ಖರೀದಿ ಮಾಡುತ್ತಾ ಹೋಗುತ್ತಿರುತ್ತೇವೆ. ಅವೆಲ್ಲಾ ನಿಮಗೆ ಬೇಕೇ ಬೇಕು ಅಂತ ಜಾಹಿರಾತುಗಳು ನಮ್ಮನ್ನು ನಂಬಿಸಿವೆ. ನಿಮ್ಮ ನಾಯಿಗೆ ಹಳೆಯ ಕಾಲದ ರಾಜರ ಡ್ರೆಸ್ಸುಗಳನ್ನು ಹಾಕಬೇಕು, ಕಾಡಿನಲ್ಲಿ ಮರಕ್ಕೆ ಜೋತುಬಿದ್ದಿರುವ ರೀತಿಯ ಕೋತಿಯ ಗೊಂಬೆ ನಿಮ್ಮ ಮನೆ ಶೋಕೇಸಿನಲ್ಲಿರಬೇಕು, ನಿಮ್ಮ ಬೆಕ್ಕಿಗೆ ಯಾವುದೋ ಡ್ರೆಸ್ ಬೇಕು, ಆಹಾರ ಬೇಕು ಹೀಗೆ ಏನೇನೋ ಕೊಳ್ಳುತ್ತಲೇ ಇರುತ್ತೇವೆ. ಇಷ್ಟಾದರೂ ನಮ್ಮ ಅರ್ಥಶಾಸ್ತ್ರಜ್ಞರು ಇಂದಿನ ಜಾಗತಿಕ ಸಮಸ್ಯೆಗೆ ತೀವ್ರ ಬೇಡಿಕೆ ಕೊರತೆ ಕಾರಣ ಅಂತಿದ್ದಾರೆ. ಹಾಗಾದರೆ ಜನ ಇನ್ನೇನು ಕೊಳ್ಳಬೇಕು ಅಂತ ದಿಗಿಲಾಗುತ್ತದೆ.

ಆಧುನಿಕ ಆರ್ಥಿಕತೆಯ ಪರಿಕಲ್ಪನೆಯ ದೃಷ್ಟಿಯಿಂದ ಜಗತ್ತು ಬೆಳೆಯುತ್ತಿದೆ. ಅದು ಹಿಂದೆಂದೂ ಇಷ್ಟು ಸುಂದರವಾಗಿರಲಿಲ್ಲ. ಈ ರೀತಿಯ ಬೆಳವಣಿಗೆಯನ್ನೇ ನಾವು ನೆಮ್ಮದಿಯೆಂದು ಒಪ್ಪಿಕೊಳ್ಳುವುದಾದರೆ, ಇದಕ್ಕಿಂತ ನೆಮ್ಮದಿಯ ಬದುಕು ನಮಗೆ ಸಿಗುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಇಂತಹ ಬೆಳವಣಿಗೆಯ ಒಂದು ದೊಡ್ಡ ಸಮಸ್ಯೆಯೆಂದರೆ ಇಲ್ಲಿ ಬೆಳವಣಿಗೆಯ ಫಲವನ್ನು ಸಮವಾಗಿ ಹಂಚುವುದಿಲ್ಲ. ಜಿಡಿಪಿ ಅಂದಾಗ ನಾವು ಲೆಕ್ಕ ಹಾಕುವುದು ಸರಾಸರಿ ವರಮಾನವನ್ನು. ಒಟ್ಟಾರೆ ಜಗತ್ತಿನ, ದೇಶದ ವರಮಾನವನ್ನು ಒಟ್ಟು ಜನರ ಸಂಖ್ಯೆಯಿಂದ ಭಾಗಿಸಿಬಿಟ್ಟರೆ ನಮಗೆ ನಮ್ಮ ದೇಶದ ಸ್ಥಿತಿಗತಿ ತೋರಿಸುವ ಒಂದು ಸೂಚಿ ಸಿಕ್ಕಿಬಿಡುತ್ತದೆ. ನೂರಾರು ಜನ ಹೊಟ್ಟೆಗಿಲ್ಲದೇ ಸತ್ತರೂ ಅಂಬಾನಿಯಂತಹ ಕೆಲವರ ವರಮಾನ ಏರುತ್ತಾ ಹೋದರೆ ಸಾಕು, ಈ ಸೂಚಿಯೂ ಏರುತ್ತಾ ಹೋಗುತ್ತದೆ. ದೇಶದ ಬೆಳವಣಿಗೆಯಾಯಿತು ಅಂತ ನಾವು ಸಂಭ್ರಮಿಸುತ್ತಾ ಹೋಗುತ್ತೇವೆ. ಈಗ ಆಗುತ್ತಿರುವುದು ಅದೇ. ನೀವು ಅಸಮಾನತೆಗೆ ಸಂಬಂಧಿಸಿದ ಯಾವುದೇ ಅಧ್ಯಯನವನ್ನು ನೋಡಿದರೂ ಇದು ಸ್ಪಷ್ಟವಾಗುತ್ತದೆ. ಸಂಪತ್ತು ಕೆಲವರ ಕೈಯಲ್ಲೇ ಹೆಚ್ಚೆಚ್ಚು ಶೇಖರವಾಗುತ್ತಿರುವುದು ಎದ್ದು ಕಾಣುತ್ತದೆ.

ಕೈಗಾರಿಕಾ ಕ್ರಾಂತಿಯ ನಂತರವಷ್ಟೇ ನಮಗೆ ಈ ರೀತಿಯ ಆರ್ಥಿಕತೆಯ ಪರಿಕಲ್ಪನೆ ಹಾಗೂ ಅದನ್ನು ಅಳತೆ ಮಾಡುವ ಜಿಡಿಪಿಯ ಪರಿಕಲ್ಪನೆ ಪ್ರಾರಂಭವಾಗಿದ್ದು. ಇದು ನಮ್ಮ ಸ್ಥಿತಿಯನ್ನು ಸಮರ್ಪಕವಾಗಿ ಅಳೆಯುವುದಿಲ್ಲ ಅಂತಾದರೆ ಸರ್ಕಾರಗಳಿಗೂ ನಮ್ಮ ಸಮಾಜದ ವಾಸ್ತವ ಪರಿಸ್ಥಿತಿ ಅರ್ಥವಾಗುವುದಿಲ್ಲ. ಅದನ್ನು ಆಧರಿಸಿದ ನೀತಿಯ ನಿಯಮಗಳು ತಪ್ಪಾಗಿಯೇ ಇರುತ್ತವೆ. ಎಲ್ಲಾ ಸರ್ಕಾರಗಳು ಬೆಳವಣಿಗೆಯನ್ನು ಗರಿಷ್ಠಗೊಳಿಸುವುದಕ್ಕಾಗಿಯೇ ನಿಯಮಗಳನ್ನು, ಯೋಜನೆಗಳನ್ನು ರೂಪಿಸುತ್ತಿವೆ.

ನಮ್ಮ ಆರ್ಥಿಕ ಸಾಧನೆಯನ್ನು ಅಳೆಯುವ ಸಾಧನೆಗಳನ್ನು ಬದಲಿಸದೇ ಹೋದರೆ ನಮ್ಮ ನಡತೆಯೂ ಬದಲಾಗುವುದಿಲ್ಲ ಅಂತ ಫ್ರಾನ್ಸಿನ ಮಾಜಿ ಅಧ್ಯಕ್ಷ ನಿಕೊಲಸ್ ಸರ್ಕೋಜಿ ಹೇಳಿದ್ದರು. ಬ್ರಿಟನ್ನಿನಲ್ಲಿ ಹಿಂದಿನ ಇಬ್ಬರು ಪ್ರಧಾನ ಮಂತ್ರಿಗಳು ಟೋನಿ ಬ್ಲೇರ್ ಹಾಗೂ ಡೇವಿಡ್ ಕ್ಯಾಮರಾನ್ ಆರ್ಥಿಕ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಮನುಷ್ಯನ ಕ್ಷೇಮವನ್ನು ಅಳೆಯುವ ಯೋಜನೆಗಳನ್ನು ರೂಪಿಸಲು ಪ್ರಯತ್ನ ಮಾಡಿದರು. ಅದರಲ್ಲಿ ಶಿಕ್ಷಣ, ಆರೋಗ್ಯ ಇತ್ಯಾದಿ ಸಾರ್ವಜನಿಕ ಸೇವೆಗಳನ್ನು ಸೇರಿಸಲು ಪ್ರಯತ್ನಿಸಿದ್ದರು. ಅವೆಲ್ಲಾ ಸಾಂಪ್ರದಾಯಿಕ ಅರ್ಥಶಾಸ್ತ್ರ ಬಳಸುವ ಮಾಪಕದಲ್ಲಿ ಸೇರುವುದಿಲ್ಲ.

ಜಿಡಿಪಿಯನ್ನು ಸಮರ್ಥಿಸಿ ಮಾತನಾಡುವವರು ಅದು ಜನರ ಕ್ಷೇಮವನ್ನು ಅಳತೆ ಮಾಡಲು ಇರುವ ಸಾಧನವಲ್ಲ. ಅದನ್ನು ದೂಷಿಸುವುದು ಅಂದರೆ, ಅಳತೆ ಟೇಪು ನಿಮ್ಮ ತೂಕವನ್ನು ಅಳತೆ ಮಾಡುವುದಿಲ್ಲ ಎಂದು ಹೇಳಿದಂತೆ ಆಗುತ್ತದೆ. ನಮ್ಮ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಇರುವ ಹಲವಾರು ಸಾಧನಗಳಲ್ಲಿ ಅದೂ ಒಂದು ಎಂದಾಗಿದ್ದರೆ ಅವರು ಹೇಳುವುದು ಸರಿ. ಆದರೆ ಇಂದು ಆರ್ಥಿಕ ಬೆಳವಣಿಗೆ ಅನ್ನುವುದು ನಮಗೆ ಎಲ್ಲವನ್ನೂ ಅಳೆಯುವ ಸಾಧನವಾಗಿಬಿಟ್ಟಿದೆ. ಅದೇ ನಮಗೆ ಸರ್ವಸ್ವವೂ ಆಗಿದೆ. ಅದೇ ನಮ್ಮ ಗುರಿಯಾಗಿದೆ. ಅದನ್ನು ಸಾಧಿಸುವುದಕ್ಕೆ ನೀವು ಹೆಚ್ಚು ಕೆಲಸಮಾಡಬೇಕು, ತ್ಯಾಗ ಮಾಡಬೇಕು, ಗ್ಯಾಸ್ ಸಬ್ಸಿಡಿ ಬಿಟ್ಟುಕೊಡಬೇಕು, ಹೆಚ್ಚಿನ ಅಸಮಾನತೆಯನ್ನು ಒಪ್ಪಿಕೊಳ್ಳಬೇಕು, ಮಡಿಕೇರಿಯಲ್ಲಿ ಬೆಟ್ಟ ಕುಸಿದರೆ ಸಹಿಸಿಕೊಳ್ಳಬೇಕು, ನಮ್ಮ ಖಾಸಗಿತನವನ್ನು ಬಿಟ್ಟುಕೊಡಬೇಕು ಹೀಗೆ ಎಲ್ಲವನ್ನೂ ಮಾಡಬೇಕು.

ಹೀಗೆಲ್ಲಾ ಹೇಳುವಾಗ ನಾವು ಬೆಳವಣಿಗೆಯನ್ನು ವಿರೋಧಿಸುತ್ತಿದ್ದೇವೆ, ಅದರ ವಿರುದ್ಧ ಸಮರ ಸಾರುತ್ತಿದ್ದೇವೆ ಅಂತ ಭಾವಿಸಬೇಕಾಗಿಲ್ಲ. ಇದು ಕೇವಲ ನಮ್ಮ ಮಾಪನದಲ್ಲಿ ಇರುವ ಸಮಸ್ಯೆಗಳನ್ನು ತೋರಿಸುವ, ವಾಸ್ತವವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಅಷ್ಟೇ. ನಮ್ಮ ದೃಷ್ಟಿಕೋನ ಹೆಚ್ಚೆಚ್ಚು ವಿಶಾಲವಾದಷ್ಟೂ ನಮ್ಮ ಬದುಕಿನ ವಾಸ್ತವ ಹೆಚ್ಚು ಚೆನ್ನಾಗಿ ಅರ್ಥವಾಗುತ್ತಾ ಹೋಗುತ್ತದೆ. ಇದು ನಮ್ಮ ಅರ್ಥಶಾಸ್ತ್ರಜ್ಞರ ಭಾವಕೋಶದೊಳಕ್ಕೆ ಹೊಕ್ಕರೆ ಅವರು ರೂಪಿಸುವ ನೀತಿಗಳಿಂದ ಜನರಿಗೆ ಹೆಚ್ಚು ನೆಮ್ಮದಿ ಸಿಗುತ್ತದೆ.

ಹೀಗೆ ಹರಿಯುತ್ತಾ ಹೋಗುತ್ತದೆ ಡೇವಿಡ್ ಪಿಲ್ಲಿಂಗ್ ಅವರ ವಿಚಾರ ಲಹರಿ. ಅವರ 'ದಿ ಗ್ರೋತ್ ಡೆಲ್ಯೂಷನ್' ಪುಸ್ತಕ ಅರ್ಥಿಕತೆಯ ಪರಿಧಿಗೆ ಶುದ್ಧ ಗಾಳಿಯಿಂದ ಸುರಕ್ಷಿತ ಬೀದಿಯವರೆಗೆ, ಸ್ಥಿರ ಉದ್ಯೋಗದಿಂದ ಒಳ್ಳೆಯ ಮನಸ್ಸಿನವರೆಗೆ ಎಲ್ಲವನ್ನು ತರುವ ಪ್ರಯತ್ನ ಮಾಡಿದೆ. ಇವೆಲ್ಲವನ್ನು ಕೇವಲ ಆರ್ಥಿಕ ತಜ್ಞರ ಮರ್ಜಿಗೆ ಬಿಡದೆ, ಅವರ ನೀತಿಗಳನ್ನು ಎಚ್ಚರದಿಂದ ಗಮನಿಸುವ, ಪ್ರತಿಕ್ರಿಯಿಸುವ ಕಡೆ ನಮ್ಮ ಅರಿವನ್ನು ಹೆಚ್ಚಿಸುವ ಕಡೆ ಒಂದು ಒಳ್ಳೆಯ ಪ್ರಯತ್ನ ಮಾಡಿದೆ.

The Growth Delusion:

The Wealth and Well-Being of Nations

David Pilling

ಅಮರ್ತ್ಯ ಸೇನ್– ಬದುಕು ಹಾಗು ಆಲೋಚನೆಗಳು–೫


ಅಮರ್ತ್ಯ ಸೇನ್ ನಮ್ಮ ನಡುವಿನ ಅಪರೂಪದ ಅರ್ಥಶಾಸ್ತ್ರಜ್ಞ, ತತ್ತ್ವಶಾಸ್ತ್ರಜ್ಞ, ಮತ್ತು ಚಿಂತಕ. ಅವರ ಅಧ್ಯಯನದ ಹರವು ತೀರಾ ವಿಶಾಲ. ಸೇನ್ ಅವರ ಅಧ್ಯಯನ ಒಂದು ವಿಷಯಕ್ಕೆ ಸೀಮಿತವಾಗಿಲ್ಲ. ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಸಮಾಜವು ನಿರ್ಧಾರಗಳನ್ನು ಹೇಗೆ ತೆಗೆದುಕೊಳ್ಳುತ್ತದೆ ಎಂದು ಚಿಂತಿಸಲು ಸಾಮಾಜಿಕ ಆಯ್ಕೆಯ ಸಿದ್ಧಾಂತ, ಜನರ ಏಳಿಗೆಯನ್ನು ಅಳೆಯುವ ಕಲ್ಯಾಣ ಅರ್ಥಶಾಸ್ತ್ರ, ಹಸಿವು ಹಾಗು ಬಡತನಕ್ಕೆ ಆಹಾರದ ಕೊರತೆ ಕಾರಣವಲ್ಲ, ಜನರ ಆಯ್ಕೆ ಹಾಗೂ ಹಕ್ಕುಗಳ ಕೊರತೆ ಕಾರಣ ಎನ್ನುವ ಕ್ಷಾಮ ಮತ್ತು ಬಡತನವನ್ನು ಕುರಿತ ಚಿಂತನೆ, ಒಬ್ಬ ವ್ಯಕ್ತಿಗೆ ಏನು ಮಾಡಲು ಸಾಧ್ಯ ಮತ್ತು ಅವನು ಏನಾಗಲು ಬಯಸುತ್ತಾನೆ ಎಂಬ ಸಾಮರ್ಥ್ಯವೇ ನಿಜವಾದ ಅಭಿವೃದ್ಧಿ ಎನ್ನುವ ಸಾಮರ್ಥ್ಯದ ದೃಷ್ಟಿಕೋನ ಹೀಗೆ ಹಲವು ಕ್ಷೇತ್ರಗಳಲ್ಲಿ ಮೌಲಿಕ ಸಂಶೋಧನೆ ಮಾಡಿದ್ದಾರೆ.

ವೈಯಕ್ತಿಕ ಮೌಲ್ಯಗಳನ್ನು ಸಮಾಜದ ಒಟ್ಟಾರೆ ನಿರ್ಧಾರಗಳಾಗಿ ಹೇಗೆ ಬದಲಿಸಬಹುದು ಎಂಬುದನ್ನು ಅವರು ವಿವರಿಸಿದರು. ವ್ಯಕ್ತಿಗಳ ಮೂಲಭೂತ ಹಕ್ಕುಗಳಿಗೆ ಧಕ್ಕೆ ಬಾರದಂತೆ ಸಮಾಜವು ಹೇಗೆ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು ಎಂಬ ನಿಯಮಗಳನ್ನು ರೂಪಿಸಿದರು. ಬಡತನ ಮತ್ತು ಕ್ಷಾಮವನ್ನು ಅಳೆಯುವ ಹೊಸ ದಾರಿಗಳನ್ನು ತೋರಿಸಿಕೊಟ್ಟರು. ಈ ಕಾರಣಕ್ಕೆ ಅಮರ್ತ್ಯ ಸೇನ್ ಅವರಿಗೆ 1998ರಲ್ಲಿ ಅರ್ಥಶಾಸ್ತ್ರದಲ್ಲಿ ನೋಬೆಲ್ ಪ್ರಶಸ್ತಿ ನೀಡಲಾಯಿತು.
ಅವರ ಬಗ್ಗೆ ಕನ್ನಡದಲ್ಲಿರುವ ಬರಹಗಳು ತುಂಬಾ ಕಡಿಮೆ. ಅವರ ಬದುಕು ಚಿಂತನೆಗಳನ್ನು ಪರಿಚಯ ಮಾಡಿಕೊಳ್ಳುವ ದೃಷ್ಟಿಯಿಂದ ಪ್ರಾರಂಭಿಸಿರುವ ಸರಣಿಯ ಐದನೆಯ ಭಾಗ ಇದು. ಇದರಲ್ಲಿ ಅವರ ನ್ಯಾಯದ ಕಲ್ಪನೆಯನ್ನು ಪರಿಚಯಿಸಲಾಗಿದೆ.



ಅಮರ್ತ್ಯ ಸೇನ್ ನ್ಯಾಯದ ಕಲ್ಪನೆ

ಟಿ ಎಸ್ ವೇಣುಗೋಪಾಲ್



ಇಂದು ಹೆಚ್ಚಿನ ರಾಜಕೀಯ ತಜ್ಞರು ಮತ್ತು ತತ್ವಜ್ಞಾನಿಗಳು 'ನ್ಯಾಯ'ದ ಬಗ್ಗೆ ಚರ್ಚಿಸುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ಅವರು ವಿತರಣೆಗೆ ಸಂಬಂಧಿಸಿದಂತೆ ನ್ಯಾಯದ ಪ್ರಶ್ನೆಯನ್ನು ಚರ್ಚಿಸುತ್ತಿದ್ದಾರೆ. ಅಮರ್ತ್ಯ ಸೇನ್ ಅವರಿಗೂ ನ್ಯಾಯದ ಪ್ರಶ್ನೆ ತುಂಬಾ ಮುಖ್ಯ. ಸೇನ್ ಅವರಿಗೆ ಸ್ವಾತಂತ್ರ್ಯ ಎನ್ನುವುದು ನ್ಯಾಯದ ಹೃದಯ ಭಾಗವಿದ್ದಂತೆ. ಅವರ ಪ್ರಕಾರ ನ್ಯಾಯ ಎಂದರೆ ಕೇವಲ ವಸ್ತುಗಳನ್ನು ಹಂಚುವುದಲ್ಲ. ಅವರ ದೃಷ್ಟಿಯಲ್ಲಿ ಜನರಿಗೆ ಅವರ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ನ್ಯಾಯ ನೆರವಾಗಬೇಕು. ಪ್ರತಿಯೊಬ್ಬರಿಗೂ ಅವರದ್ದೇ ಆದ ಆದ್ಯತೆಗಳು ಮತ್ತು ಉದ್ದೇಶಗಳಿರುತ್ತವೆ. ಅದಕ್ಕೆ ತಕ್ಕ ಹಾಗೆ ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕು ಅನ್ನುವುದು ಸೇನ್ ಅವರ ನ್ಯಾಯದ ಕಲ್ಪನೆಯಾಗಿತ್ತು. ಹಾಗಾಗಿಯೇ ಸೇನ್ ಮನುಷ್ಯನ ಗುರಿ ಏನಾಗಿರಬೇಕು, ಅವನು ಎಂತಹ ವಸ್ತುಗಳನ್ನು ಬಳಸಬೇಕು ಇತ್ಯಾದಿಗಳನ್ನು ನಿರ್ಧರಿಸಿ, ಒಂದು ಪಟ್ಟಿಯನ್ನು ತಯಾರಿಸಿ ಕೊಡುವ ಕೆಲಸಕ್ಕೆ ಕೈಹಾಕುವುದಿಲ್ಲ. ಅದು ಅವರ ದೃಷ್ಟಿಯಲ್ಲಿ ಸರಿಯೂ ಅಲ್ಲ.

ಸೇನ್ ತಮ್ಮ ಥಿಯರಿ ಆಫ್ ಜಸ್ಟಿಸ್ ಪುಸ್ತಕದಲ್ಲಿ ನ್ಯಾಯದ ಪರಿಕಲ್ಪನೆ ಬೆಳೆಯುತ್ತಾ ಬಂದ ಬಗೆಯನ್ನು ದಾಖಲಿಸುತ್ತಾರೆ. ಹದಿನೆಂಟನೆಯ ಶತಮಾನದಲ್ಲಿ ಮೇರಿ ವೂಲ್ಸಟನ್‌ಕ್ರಾಫ್ಟ್ ಮೊದಲಾದವರಿಗೆ ವೈಚಾರಿಕತೆ ಮುಖ್ಯವಾಗಿತ್ತು. ಅವರುಗಳು ನ್ಯಾಯದ ಪರಿಕಲ್ಪನೆಯನ್ನು ಚರ್ಚಿಸುವಾಗ ವೈಚಾರಿಕತೆಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಯುರೋಪಿನ ಜ್ಞಾನೋದಯ [European enlightenment] ಕಾಲದಲ್ಲಿ ರೂಪುಗೊಂಡ ಈ ದೃಷ್ಟಿಕೋನದ ಪ್ರಕಾರ ಒಂದು ಸಮಾಜ ಸುಸಂಸ್ಕೃತವಾಗಲು ಹಾಗೂ ಸ್ವೀಕಾರಾರ್ಹವಾಗಲು ಸುಸಂಬದ್ಧವಾದ ವೈಚಾರಿಕತೆ ಅನಿವಾರ್ಯ. ಆದರೆ ಹೀಗೆ ವೈಚಾರಿಕತೆಯ ಪರವಾಗಿ ಇರುವವರ ನಡುವೆಯೂ ಒಮ್ಮತವಿರಲಿಲ್ಲ. ಅವರ ನಡುವೆಯೂ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದವು. ನ್ಯಾಯದ ಕಲ್ಪನೆಯನ್ನು ಕುರಿತಂತೆ ಅವರಲ್ಲಿ ಎರಡು ವಿಭಿನ್ನ ಧಾರೆಗಳಿದ್ದವು. ಒಂದು ಗುಂಪು ಯಾವುದೇ ಕುಂದುಕೊರತೆಗಳಿಲ್ಲದ, ಪರಿಪೂರ್ಣವೂ, ನಿಷ್ಪಕ್ಷಪಾತವೂ ಆಗಿರುವ ಸಾಮಾಜಿಕ ವ್ಯವಸ್ಥೆ ಹೇಗಿರಬೇಕೆಂಬುದನ್ನು ಗುರುತಿಸುವುದಕ್ಕೆ ಹೆಚ್ಚಿನ ಮಹತ್ವ ನೀಡಿತ್ತು. ಪರಿಪೂರ್ಣವಾದ ನ್ಯಾಯಿಕ ಸಂಸ್ಥೆಯ ಲಕ್ಷಣಗಳನ್ನು ಅರ್ಥಮಾಡಿಕೊಂಡು ಅಂತಹ ಸಂಸ್ಥೆಗಳನ್ನು ಮತ್ತು ಆಚರಣೆಗಳನ್ನು ರೂಪಿಸುವುದು ಈ ಚಿಂತನಾ ಕ್ರಮದ ಮೂಲತತ್ತ್ವವಾಗಿತ್ತು. ಅಂದರೆ ಪರಿಪೂರ್ಣವಾದ ನ್ಯಾಯಿಕ ಸಂಸ್ಥೆಯ ಲಕ್ಷಣಗಳನ್ನು ಗುರುತಿಸುವುದು ಅವರ ದೃಷ್ಟಿಯಲ್ಲಿ ನ್ಯಾಯ ಸಿದ್ಧಾಂತದ ಏಕೈಕ ಕರ್ತವ್ಯವಾಗಿತ್ತು.

ಹೀಗೆ ಕಲ್ಪಿಸಿಕೊಂಡ ನ್ಯಾಯಯುತ ಸಾಮಾಜಿಕ ಒಪ್ಪಂದಕ್ಕೆ ಸಮಾಜದ ಜನರು ಬದ್ಧರಾಗಿರುತ್ತಾರೆ ಎಂದವರು ಭಾವಿಸಿಕೊಂಡಿದ್ದರು. 17ನೇ ಶತಮಾನದಲ್ಲಿ ಈ ಸಾಮಾಜಿಕ ಒಪ್ಪಂದದ ವಿಚಾರಧಾರೆಗೆ ಬಹುದೊಡ್ಡ ಕೊಡುಗೆ ನೀಡಿದ್ದು ಥಾಮಸ್ ಹಾಬ್ಸ್. ನಂತರ ಈ ಚಿಂತನೆಯನ್ನು ಜಾನ್ ಲಾಕ್, ಜಾನ್ ರಾಟೆನ್‌ಸೊ ಮತ್ತು ಇಮ್ಯಾನ್ಯುಯೆಲ್ ಕಾಂಟ್ ಇವರುಗಳು ಬೆಳೆಸಿದರು.

ಪ್ರಮುಖ ದಾರ್ಶನಿಕರಾದ ಜಾನ್ ರಾಲ್ಸ್ ತಮ್ಮ "ಥಿಯರಿ ಆಫ್ ಜಸ್ಟಿಸ್" ಕೃತಿಯಲ್ಲಿ ಸಾಮಾಜಿಕ ಒಪ್ಪಂದ ಸಿದ್ಧಾಂತದಲ್ಲಿ ಬರುವ ನ್ಯಾಯದ ಪರಿಕಲ್ಪನೆಯನ್ನು ನಿಖರವಾಗಿ ನಿರೂಪಿಸಿದ್ದಾರೆ. ಸಮಕಾಲೀನ ಸಿದ್ಧಾಂತಗಳಲ್ಲಿ ಪ್ರಸ್ತುತಪಡಿಸಲಾಗಿರುವ ನ್ಯಾಯಸಿದ್ಧಾಂತದ ತತ್ತ್ವಗಳೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಈ ಸಾಮಾಜಿಕ ಒಪ್ಪಂದದ ಸಿದ್ಧಾಂತದಿಂದ ಸ್ಫೂರ್ತಿ ಪಡೆದಿವೆ. ನಾವೀಗಲೆ ಗಮನಿಸಿದಂತೆ ಅವು ಒಂದು ನ್ಯಾಯಯುತ ಸಂಸ್ಥೆಗೆ ಇರಬೇಕಾದ ಆದರ್ಶಗಳನ್ನು ಕಂಡುಕೊಳ್ಳುವುದರ ಕಡೆಯೇ ತಮ್ಮೆಲ್ಲಾ ಗಮನವನ್ನು ಕೇಂದ್ರೀಕರಿಸಿವೆ. ಅದರರ್ಥ ಅವರಲ್ಲಿ ಒಮ್ಮತವಿದೆ ಅಂತಲ್ಲ. ಅವರ ನಡುವೆಯೂ ತೀರಾ ಮೂಲಭೂತವಾದ ಭಿನ್ನಾಭಿಪ್ರಾಯಗಳೂ ಇವೆ.

ಅದೇ ಕಾಲಘಟ್ಟದಲ್ಲಿ ಸಾಮಾಜಿಕ ಒಪ್ಪಂದದ ಸಿದ್ಧಾಂತಕ್ಕೆ ತದ್ವಿರುದ್ಧವಾದ ಹಲವು ಜ್ಞಾನೋದಯ ಸಿದ್ಧಾಂತಗಳೂ ಇದ್ದವು. ಆ ಸಿದ್ಧಾಂತಗಳ ನಡುವೆಯೂ ಮೂಲಭೂತ ಭಿನ್ನಾಭಿಪ್ರಾಯಗಳಿದ್ದವು. ಅವುಗಳ ದೃಷ್ಟಿಕೋನದಲ್ಲೂ ವ್ಯತ್ಯಾಸಗಳಿದ್ದವು. ಆದರೆ ಅವುಗಳ ನಡುವೆ ಒಂದು ಸಮಾನ ಆಸಕ್ತಿಯೂ ಇತ್ತು. ಅವರೆಲ್ಲರೂ ಜನರ ಬದುಕು ಪ್ರಭಾವಕ್ಕೆ ಒಳಗಾಗುವ ವಿಭಿನ್ನ ಬಗೆಗಳನ್ನು ಅರ್ಥಮಾಡಿಕೊಳ್ಳಲು ಬಯಸಿದ್ದರು. ಮತ್ತು ಅವರೆಲ್ಲರಿಗೂ ಆ ವಿಭಿನ್ನ ಬಗೆಗೆಳನ್ನು ತುಲನಾತ್ಮಕವಾಗಿ ನೋಡುವ ಉದ್ದೇಶವಿತ್ತು. ಅವರ ಕಾಳಜಿ ಕೇವಲ ಜನರು ಹಾಗೂ ಸರ್ಕಾರದ ನಡುವಿನ ಒಪ್ಪಂದಕ್ಕೆ ಸೀಮಿತವಾಗಿರಲಿಲ್ಲ. ಅದು ವಾಸ್ತವದಲ್ಲಿ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ತಿಳಿದುಕೊಳ್ಳುವುದೂ ಮುಖ್ಯವಾಗಿತ್ತು. ಜನರು ವಾಸ್ತವದಲ್ಲಿ ನಡೆದುಕೊಳ್ಳುವ ಕ್ರಮ, ಅವರ ಪರಸ್ಪರ ಒಡನಾಟ, ಹಾಗೂ ಇತರ ಪ್ರಮುಖ ಅಂಶಗಳು ಜನರ ಬದುಕಿನ ಮೇಲೆ ಬೀರುವ ಪ್ರಭಾವವನ್ನು ಅವರು ಗಮನಿಸುತ್ತಿದ್ದರು. ಅಂದರೆ ವಿಭಿನ್ನ ಅಂಶಗಳು ಸಮಾಜದಲ್ಲಿನ ಆಗುಹೋಗುಗಳನ್ನು ಹೇಗೆ ಪ್ರಭಾವಿಸುತ್ತವೆ ಎನ್ನುವುದನ್ನು ಅರ್ಥಮಾಡಿಕೊಳ್ಳುವುದೂ ಆ ಸಿದ್ಧಾಂತಗಳಿಗೆ ಮುಖ್ಯವಾಗಿತ್ತು.

ಸಾಮಾಜದಲ್ಲಿನ ಅನ್ಯಾಯವನ್ನು ಗುರುತಿಸುವುದರ ಜೊತೆಗೆ, ಅದನ್ನು ನಿರ್ಮೂಲನ ಮಾಡಲು ಸಾಧ್ಯವೇ, ಹಾಗೂ ಎಷ್ಟರಮಟ್ಟಿಗೆ ಸಾಧ್ಯ ಅನ್ನುವುದನ್ನು ತಿಳಿದುಕೊಳ್ಳುವುದು ಅವರಿಗೆ ಮುಖ್ಯವಾಗಿತ್ತು. ಇದು



ಕಲ್ಕತ್ತಾದಲ್ಲಿ ಅಭಿಮಾನಿಗಳಿಂದ ಸುತ್ತುವರಿಯಲ್ಪಟ್ಟಿರುವ ಅಮರ್ತ್ಯ ಸೇನ್

ನ್ಯಾಯವನ್ನು ಕುರಿತ ಸಿದ್ಧಾಂತವನ್ನು ರೂಪಿಸುವುದರ ಹಿಂದಿನ ಅತ್ಯಂತ ಮುಖ್ಯ ಉದ್ದೇಶವಾಗಿತ್ತು. ಇವು ಸಾಮಾಜಿಕ ಒಪ್ಪಂದ ಸಿದ್ಧಾಂತದ ಅಜೆಂಡಗಳಿಗಿಂತ ತೀರಾ ಭಿನ್ನವಾಗಿದ್ದವು.

ಇನ್ನು 18ರಿಂದ 19ನೇ ಶತಮಾನಕ್ಕೆ ಬಂದರೆ, ಜಾನ್ ಸ್ಟುವರ್ಟ್ ಮಿಲ್, ಕಾರ್ಲ್ ಮಾರ್ಕ್ಸ್ ಮುಂತಾದವರ ದೃಷ್ಟಿಕೋನ ಇದಕ್ಕಿಂತ ಸಂಪೂರ್ಣವಾಗಿ ಬೇರೆಯಾಗಿತ್ತು. ಅನ್ಯಾಯಗಳನ್ನು ಗುರುತಿಸುವುದರಲ್ಲಿ ಅವರೆಲ್ಲರಿಗೂ ಆಳವಾದ ಕಾಳಜಿಯಿತ್ತು. ಅವರ ಚಿಂತನೆಗಳಲ್ಲಿ ಅನೇಕ ವ್ಯತ್ಯಾಸಗಳಿದ್ದರೂ ಯಾವೆಲ್ಲ ವಿಚಾರಗಳನ್ನು ಅನ್ಯಾಯ ಎಂದು ಪರಿಗಣಿಸಬೇಕು ಎನ್ನುವುದಕ್ಕೆ ಸಂಬಂಧಿಸಿದಂತೆ ಅವರಲ್ಲಿ ಒಂದು ಸಹಮತವೂ ಇತ್ತು. ಅವರ ಪ್ರಕಾರ ಈ ಅನ್ಯಾಯಗಳನ್ನು ತೊಡೆದು ಹಾಕಲು ಸಾಧ್ಯವೇ ಮತ್ತು ಎಷ್ಟರ ಮಟ್ಟಿಗೆ ಸಾಧ್ಯ ಅನ್ನುವುದನ್ನೂ ನ್ಯಾಯ ಸಿದ್ಧಾಂತ ಗಮನಿಸಬೇಕು. ಅಂದರೆ ನ್ಯಾಯ ಸಿದ್ಧಾಂತದ ವ್ಯಾಪ್ತಿಗೆ ಈ ಅನ್ಯಾಯಗಳ ನಿರ್ಮೂಲನದ ಕಾರ್ಯಸೂಚಿಯೂ ಸೇರಿಕೊಂಡಿತು. ಈ ಪರ್ಯಾಯ ದೃಷ್ಟಿಕೋನದ ಉದ್ದೇಶ ಸಾಮಾಜಿಕ ಒಪ್ಪಂದ ಸಿದ್ಧಾಂತದ ಕಾರ್ಯಸೂಚಿಗಿಂತ ಭಿನ್ನವಾಗಿತ್ತು. ಇಲ್ಲಿ ಒಂದು ಪರಿಪೂರ್ಣವಾದ ನ್ಯಾಯಯುತ ಸಮಾಜ ಹೇಗಿರುತ್ತದೆ ಎಂಬ ಪ್ರಶ್ನೆಯೊಂದಿಗೆ ಚರ್ಚೆ ಪ್ರಾರಂಭವಾಗುತ್ತಿರಲಿಲ್ಲ. ಬದಲಿಗೆ ಯಾವ ಅನ್ಯಾಯಗಳನ್ನು ಪರಿಹರಿಸಬಹುದು ಮತ್ತು ಸುಮಾರಾಗಿ ಎಲ್ಲರಿಗೂ ಒಪ್ಪಿಗೆಯಾಗುವಂತೆ ಹೇಗೆ ಪರಿಹರಿಸಬಹುದು ಎನ್ನುವುದು ಅವರಿಗೆ ಮುಖ್ಯವಾಗಿತ್ತು.

ಸಾಮಾಜಿಕ ಒಪ್ಪಂದ ಸಿದ್ಧಾಂತಕ್ಕೆ ಹಲವು ಮಿತಿಗಳಿದ್ದವು. ಉದಾಹರಣೆಗೆ ಸಾಮಾಜಿಕ ಒಪ್ಪಂದ ಸಿದ್ಧಾಂತದ ಪ್ರಕಾರ ಎಲ್ಲರೂ ನ್ಯಾಯಕ್ಕೆ ಸಂಬಂಧಿಸಿದಂತೆ ಒಂದಿಷ್ಟು ಆದರ್ಶಗಳ ಪಟ್ಟಿಯನ್ನು ಒಪ್ಪಿಕೊಳ್ಳುತ್ತಾರೆ. ತಾತ್ವಿಕವಾಗಿ ಯೋಚಿಸುವರ ನಡುವೆ ಈ ಆದರ್ಶಗಳ ಆದ್ಯತೆಗಳಿಗೆ ಸಂಬಂಧಿಸಿದಂತೆ ಒಂದು ಸಹಮತವಿರುತ್ತದೆ. ಇದು ಸಾಮಾಜಿಕ ಒಪ್ಪಂದ ಸಿದ್ಧಾಂತದ ನಂಬಿಕೆ. ಆದರೆ ವಾಸ್ತವದಲ್ಲಿ ಇಂತಹ ನಂಬಿಕೆಗಳಿಗೆ ಯಾವುದೇ ಸಮರ್ಥನೆಯೂ ಇಲ್ಲ. ಅದು ಸಂಭವನೀಯವೂ ಅಲ್ಲ. ಆದರೆ ಹಾಗೆ ಭಾವಿಸಿಕೊಳ್ಳುವುದು ಅವರಿಗೆ ಅನಿವಾರ್ಯ. ಯಾಕೆಂದರೆ ಸಾಮಾಜಿಕ ಒಪ್ಪಂದಗಳ ಸಿದ್ಧಾಂತದ ಮುಖ್ಯ ಉದ್ದೇಶವೇ ಸಾಮಾಜಿಕ ಸಂಸ್ಥೆಗಳಲ್ಲಿರಬೇಕಾದ ಹಲವು ಆದರ್ಶಗಳನ್ನು ಪಟ್ಟಿಮಾಡುವುದು. ಹಾಗಾಗಿ ಭಿನ್ನಾಭಿಪ್ರಾಯಗಳನ್ನು ನಿರ್ಲಕ್ಷಿಸಿ, ಎಲ್ಲರಲ್ಲೂ ಒಮ್ಮತವಿದೆ ಎಂದು ಭಾವಿಸಿಕೊಳ್ಳುವುದು ಸಾಮಾಜಿಕ ಒಪ್ಪಂದ ಸಿದ್ಧಾಂತಕ್ಕೆ ಅನಿವಾರ್ಯವಾಗಿತ್ತು.

ಹೆಚ್ಚಿನ ಸಮಕಾಲೀನ ನ್ಯಾಯ ಸಿದ್ಧಾಂತಗಳಲ್ಲಿ ನಾವು ಮೇಲೆ ಚರ್ಚಿಸಿರುವಂತಹ ಪೆಡಸುತನ ಕಂಡುಬರುತ್ತದೆ. ಆದರೆ ಇದಕ್ಕೆ ಪರ್ಯಾಯವಾಗಿ ರೂಪುಗೊಂಡಿರುವ ಸಾಮಾಜಿಕ ಆಯ್ಕೆ ಸಿದ್ಧಾಂತದಲ್ಲಿ ಹೀಗಾಗುವುದಿಲ್ಲ. ಅಲ್ಲಿ ಪರಸ್ಪರ ಸಹಮತವಿಲ್ಲದಿದ್ದರೂ ಹಲವು ತತ್ವಗಳಿಗೆ ಒಟ್ಟಿಗೆ ಇರುವುದಕ್ಕೆ ಅವಕಾಶವಿದೆ. ಇರುವ ಸಿದ್ದಾಂತಗಳನ್ನೆಲ್ಲಾ ವಿಮರ್ಶಾತ್ಮಕವಾಗಿ ಪರಿಶೀಲಿಸಿ, ಅವುಗಳ ಸ್ಥಾನವನ್ನು ನಿರ್ಧರಿಸಲಾಗುತ್ತದೆ. ಅಧಾರವಿಲ್ಲದ ಸಿದ್ಧಾಂತಗಳನ್ನು ತಿರಸ್ಕರಿಸಲಾಗುತ್ತದೆ. ಆದರೆ ವಿಭಿನ್ನ ಆದ್ಯತೆಗಳನ್ನು ಹೊಂದಿರುವ, ವಿಭಿನ್ನ ನಿಲುವಿರುವ ಎಷ್ಟೋ ತತ್ತ್ವಗಳು ಉಳಿದುಕೊಳ್ಳಬಹುದು. ಅವಕ್ಕೆ ವೈಚಾರಿಕ ಸಮರ್ಥನೆ ಇರಬೇಕು ಅಷ್ಟೆ.

ನಮ್ಮ ತೀರ್ಮಾನಗಳನ್ನು ಸ್ವಹಿತಾಸಕ್ತಿಗಳು ಪ್ರಭಾವಿಸುತ್ತವೆ ಅನ್ನುವುದು ನಿಜ. ಆದರೆ ಜನರಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳನ್ನು ತೊಡೆದುಹಾಕಿದರೆ ಸಾಕು, ಕೂಡಲೆ ಒಂದು ನಿಷ್ಪಕ್ಷಪಾತ ಚಿಂತನಾಕ್ರಮದ ಸಾಧ್ಯತೆಯನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಸಮಾಜದ ಮೂಲಭೂತ ಸಂಸ್ಥೆಗಳನ್ನು ಕಟ್ಟುವುದಕ್ಕೆ ಸಂಬಂಧಿಸಿದ ಭಿನ್ನಾಭಿಪ್ರಾಯಗಳು ಹೋಗಿಬಿಡುತ್ತವೆ. ಸಂಸ್ಥೆಗಳ ನಿರ್ಮಾಣಕ್ಕೆ ಸಂಬಂಧಿಸಿದ ನಿಯಮಗಳನ್ನು ಅಥವಾ ತತ್ತ್ವಗಳನ್ನು ಜನ ಒಪ್ಪಿಕೊಳ್ಳುತ್ತಾರೆ. ಆಮೇಲೆ ಮೂಲಭೂತ ವ್ಯವಸ್ಥೆಯನ್ನು ಕಟ್ಟುವ ಕೆಲಸ ಸಲೀಸಾಗಿಬಿಡುತ್ತದೆ ಎಂದು ಭಾವಿಸುವುದು ಬಾಲಿಶವಾಗಿ ತೋರುತ್ತದೆ.

ನಮ್ಮ ವೈಯಕ್ತಿಕ ಹಿತಾಸಕ್ತಿಗಳ ಕಾರಣದಿಂದಾಗಿ ನಾವು ಎಷ್ಟೋ ವಿಚಾರಗಳನ್ನು ಒಪ್ಪುವುದಿಲ್ಲ. ಆದರೆ ನಮ್ಮ ಭಿನ್ನಾಭಿಪ್ರಾಯಕ್ಕೆ ವೈಯಕ್ತಿಕ ಆಸಕ್ತಿಗಳಷ್ಟೇ ಕಾರಣವಲ್ಲ. ನಮ್ಮ ವಿಭಿನ್ನ ದೃಷ್ಟಿಕೋನಗಳಿಂದಾಗಿಯೂ ನಮ್ಮ ನಡುವೆ ಭಿನ್ನಾಭಿಪ್ರಾಯಗಳು ಹುಟ್ಟಿಕೊಳ್ಳುತ್ತವೆ. ಅವು ಕೂಡ ನಿಷ್ಪಕ್ಷಪಾತ ಚಿಂತನೆಯನ್ನು ಕುರಿತ ನಮ್ಮ ಗ್ರಹಿಕೆಯನ್ನು ಪ್ರಭಾವಿಸುತ್ತವೆ.

ಅಮರ್ತ್ಯ ಸೇನ್ ಅವರು ನ್ಯಾಯದ ಪರಿಕಲ್ಪನೆಯನ್ನು ವಿವರಿಸಲು ಒಂದು ಸುಂದರ ಉದಾಹರಣೆಯನ್ನು ನೀಡುತ್ತಾರೆ. ಒಂದು ಕೊಳಲಿಗಾಗಿ ಆನ್, ಬಾಬ್ ಮತ್ತು ಕಾರ್ಲಾ ಪೈಪೋಟಿ ನಡೆಸುತ್ತಿದ್ದಾರೆ ಎಂದು ಭಾವಿಸೋಣ.

ಈ ಸಂದರ್ಭದಲ್ಲಿ 'ನ್ಯಾಯ' ಯಾರ ಪರವಾಗಿದೆ ಎಂಬುದನ್ನು ನಿರ್ಧರಿಸುವುದು ನಮ್ಮ ಮುಂದಿರುವ ಸವಾಲು.

ಆನ್ ವಾದವೆಂದರೆ, ಮೂವರಲ್ಲಿ ಆಕೆಗೆ ಮಾತ್ರ ಕೊಳಲು ನುಡಿಸುವುದಕ್ಕೆ ಬರುವುದು. ಕೊಳಲು ಸದ್ಬಳಕೆಯಾಗಬೇಕಾದರೆ, ಅದನ್ನು ನುಡಿಸಲು ತಿಳಿದಿರುವವರಿಗೇ ನೀಡಬೇಕು. ಉಳಿದಿಬ್ಬರೂ ಈ ಸತ್ಯವನ್ನು ಒಪ್ಪಿಕೊಳ್ಳುತ್ತಾರೆ. ಕೇವಲ ಈ ಮಾಹಿತಿಯ ಆಧಾರದ ಮೇಲೆ ತೀರ್ಮಾನಿಸುವುದಾದರೆ, ಕೊಳಲನ್ನು ಆನ್‌ಗೆ ನೀಡುವುದು ಸರಿ.

ಬಾಬ್ ತನ್ನ ಬಡತನವನ್ನು ಮುಂದಿಡುತ್ತಾನೆ. ಆನ್ ಮತ್ತು ಕಾರ್ಲಾ ಬಳಿ ಆಟವಾಡಲು ಸಾಕಷ್ಟು ಆಟಿಕೆಗಳಿವೆ, ಆದರೆ ತನ್ನ ಬಳಿ ಯಾವ ಆಟಿಕೆಯೂ ಇಲ್ಲ. ಅದು ತನಗೆ ಬೇಕು ಎನ್ನುತ್ತಾನೆ. ಆರ್ಥಿಕ ಸಮಾನತೆ ಮತ್ತು ಮೂಲಭೂತ ಅಗತ್ಯದ ದೃಷ್ಟಿಯಿಂದ ನೋಡಿದರೆ, ಕೊಳಲು ಬಾಬ್‌ಗೆ ಸಿಗಬೇಕೆಂಬ ವಾದ ಸರಿ.


ಆದರೆ ಕಾರ್ಲಾ ಸ್ವತಃ ಆ ಕೊಳಲನ್ನು ತಯಾರಿಸಿರುತ್ತಾಳೆ. ಹಾಗಾಗಿ ಶ್ರಮ ಮತ್ತು ಮಾಲೀಕತ್ವದ ತತ್ತ್ವದ ಪ್ರಕಾರ, ತಾನು ತಯಾರಿಸಿದ ವಸ್ತುವನ್ನು ಇನ್ನೊಬ್ಬರು ಕಸಿದುಕೊಳ್ಳುವುದು ಅನ್ಯಾಯ ಎಂದು ಅವಳು ವಾದಿಸುತ್ತಾಳೆ. ಇದು ಕಾನೂನುಬದ್ಧವಾಗಿಯೂ ಸರಿ ಎನಿಸುತ್ತದೆ.


ಯಾರ ಬೇಡಿಕೆಯನ್ನೂ ನಾವು ತಕ್ಷಣವೇ ತಳ್ಳಿಹಾಕಲು ಸಾಧ್ಯವಿಲ್ಲ. ಒಬ್ಬ ನ್ಯಾಯಪರ ತೀರ್ಪುಗಾರ ಈ ಮೂರೂ ವಾದಗಳನ್ನು ತೂಗಿ ನೋಡಬೇಕಾಗುತ್ತದೆ. ಯಾವುದೇ ಒಂದು ತತ್ತ್ವಕ್ಕೆ (ಕೌಶಲ, ಬಡತನ ಅಥವಾ ಶ್ರಮ) ಯಾಂತ್ರಿಕವಾಗಿ ಆದ್ಯತೆ ನೀಡಿ ಉಳಿದವುಗಳನ್ನು ಕಡೆಗಣಿಸುವುದು ಸಾಧ್ಯವಿಲ್ಲ. ವಾಸ್ತವ ಪರಿಸ್ಥಿತಿಯ ತೀವ್ರತೆಯನ್ನು ಅರಿತು ನಿರ್ಧಾರಕ್ಕೆ ಬರಬೇಕಾಗುತ್ತದೆ.

ಈ ಮೂವರು ಮಕ್ಕಳ ವಿಷಯದಲ್ಲಿ ಯಾವುದು ನ್ಯಾಯಯುತ ಎಂದು ನಿರ್ಧರಿಸುವುದು ಒಂದು ಸವಾಲಿನ ಕೆಲಸ. ಈ ಮಕ್ಕಳ ನಿದರ್ಶನದಲ್ಲಿ ಮೂರು ನಂಬಿಕೆಗಳಿಗೂ ಸಮರ್ಥನೆ ಸಾಧ್ಯ. ಬಡತನ ನಿವಾರಣೆ ತುಂಬಾ ಮುಖ್ಯ ಅನ್ನುವುದು ನಿಜ. ಜೊತೆಗೆ ಜನ ಏನನ್ನಾದರೂ ಸಾಧಿಸಬೇಕಾದರೆ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕಾದ್ದೂ ಮುಖ್ಯ ಎಂಬುದೂ ಅಷ್ಟೇ ಸತ್ಯ. ಹಾಗೆಯೇ ವಸ್ತುಗಳು ಸದ್ಬಳಕೆಯಾಗಬೇಕು ಅನ್ನುವ ಕಾರಣದಿಂದ ಅದನ್ನು ಸರಿಯಾಗಿ ಬಳಸಿಕೊಳ್ಳುವರಿಗೆ ಅದು ಸೇರಬೇಕೆಂಬುದಕ್ಕೂ ಸಮರ್ಥನೆಯಿದೆ.

ಒಂದು ಪರಿಪೂರ್ಣ ನ್ಯಾಯ ಸಿದ್ಧಾಂತವು ಒಂದು ನಿರ್ಧಾರಕ್ಕೆ ಬರುವ ಮೊದಲು, ಇರುವ ಎಲ್ಲಾ ಪರ್ಯಾಯ ಮಾರ್ಗಗಳ ಮೌಲ್ಯವನ್ನೂ ನಿಷ್ಕರ್ಷೆಮಾಡಬೇಕು. ಆದರೆ ಲಭ್ಯವಿರುವ ಎಲ್ಲಾ ಪರ್ಯಾಯಗಳ ಬಗ್ಗೆಯೂ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿಲ್ಲ. ಕೆಲವು ಸಾಧ್ಯತೆಗಳ ಬಗ್ಗೆ ಮಾತ್ರ ಖಚಿತವಾದ ನಿರ್ಧಾರಗಳನ್ನು ತೆಗೆದುಕೊಂಡು, ಉಳಿದ ವಿಷಯಗಳಲ್ಲಿ ಸುಮ್ಮನಿರಬಹುದು. ಕಾಂಡರ್‌ಸೆಟ್ ಹಾಗೂ ಆಡಂ ಸ್ಮಿತ್ ಗುಲಾಮಗಿರಿಯನ್ನು ನಿರ್ಮೂಲನ ಮಾಡುವುದರಿಂದ ಸಮಾಜದಲ್ಲಿ ಅನ್ಯಾಯ ಕಡಿಮೆಯಾಗುತ್ತದೆ ಎಂದು ವಾದಿಸಿದರು. ಅವರು ಗುಲಾಮಗಿರಿ ಇಲ್ಲದ ಜಗತ್ತಿನ ನ್ಯಾಯ ಹೆಚ್ಚು ಉತ್ತಮವಾದದ್ದು ಎಂದಷ್ಟೇ ಹೇಳುತ್ತಿದ್ದಾರೆ. ಆದರೆ ಸಾಮಾಜಿಕ ಸಂಸ್ಥೆಗಳು ಸೃಷ್ಟಿಸುವ ಎಲ್ಲಾ ಅನ್ಯಾಯಗಳಿಗೂ ಅವರು ಪರಿಹಾರ ಪರಿಹಾರವನ್ನು ಸೂಚಿಸುತ್ತಿಲ್ಲ. ಜಗತ್ತಿನ ಮುಂದಿರುವ ಉಳಿದೆಲ್ಲಾ ಸಮಸ್ಯೆಗಳು ಅಥವಾ ಆಯ್ಕೆಗಳ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳದೆ ಕೇವಲ ಗುಲಾಮಗಿರಿಯ ಬಗ್ಗೆ ಮಾತ್ರ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಸಾಧ್ಯ. ಅಂದರೆ ಮನುಷ್ಯರು ಅನುಭವಿಸುತ್ತಿರುವ ಹಲವು ಅನ್ಯಾಯಗಳಲ್ಲಿ ಕೆಲವು ಅನ್ಯಾಯಗಳನ್ನು ಪರಿಹರಿಸಿ ಮನುಷ್ಯನ ಬದುಕನ್ನು ಸುಧಾರಿಸಬಹುದು ಎಂದು ಸೇನ್ ಹೇಳುತ್ತಾರೆ. ಇದು ಸೇನ್ ಅವರ ಸಿದ್ಧಾಂತಕ್ಕೂ ಸಾಮಾಜಿಕ ಒಪ್ಪಂದ ಹಾಗೂ ರಾಲ್ಸ್‌ನ ನ್ಯಾಯದ ಸಿದ್ಧಾಂತಗಳಿಗೂ ಇರುವ ವ್ಯತ್ಯಾಸ.

ನ್ಯಾಯಕ್ಕೆ ಸಂಬಂಧಿಸಿದಂತೆ ಹಲವು ತತ್ತ್ವಗಳು ಚಾಲ್ತಿಯಲ್ಲಿವೆ. ಎಲ್ಲಾ ಪ್ರಶ್ನೆಗಳಿಗೂ ನ್ಯಾಯವನ್ನು ಆಧರಿಸಿಯೇ ಪರಿಹಾರ ಕಂಡುಕೊಳ್ಳುವುದಕ್ಕೆ ನಮಗೆ ಸಾಧ್ಯವಿಲ್ಲ. ಉದಾಹರಣೆಗೆ ಮೇಲಿನ ಸ್ತರದವರಿಗೆ 40% ತೆರಿಗೆ ಹಾಕುವುದಕ್ಕಿಂತ 35% ತೆರಿಗೆ ಹಾಕುವುದು ಹೆಚ್ಚು ನ್ಯಾಯವೇ? ಅನ್ನುವ ಪ್ರಶ್ನೆಗೆ ಕೇವಲ ನ್ಯಾಯದ ಪರಿಕಲ್ಪನೆಯನ್ನು ಆಧರಿಸಿಯೇ ಉತ್ತರವನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ ಜಗತ್ತಿನಲ್ಲಿ ನಡೆಯುವ ಕೆಲವು ವಿದ್ಯಮಾನಗಳನ್ನು ಸ್ಪಷ್ಟವಾಗಿ ಅನ್ಯಾಯ ಎಂದು ಗುರುತಿಸಬಹುದು. ಉದಾಹರಣೆಗೆ 18ನೇ ಶತಮಾನದಲ್ಲಿನ ಗುಲಾಮಗಿರಿ, ಮಹಿಳೆಯರ ಅಥವಾ ಕಾರ್ಮಿಕರ ಶೋಷಣೆ, ಅಥವಾ ಆಫ್ರಿಕಾ ಹಾಗೂ ಏಷ್ಯಾದ ಹಲವು ಭಾಗಗಳಲ್ಲಿ ಜನರು ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗಿರುವುದು





ಅಥವಾ ವಿಶ್ವದ ಹಲವು ದೇಶಗಳಲ್ಲಿ ಸಾರ್ವತ್ರಿಕ ಆರೋಗ್ಯ ವಿಮೆಯ ಸೌಲಭ್ಯ ಇಲ್ಲದಿರುವುದು, ಜಗತ್ತಿನ ಹಲವೆಡೆ ನಡೆಯುತ್ತಿರುವ ಹಿಂಸೆ, ಇತ್ಯಾದಿ. ಇಂತಹ ಸಮಸ್ಯೆಗಳನ್ನು ತೊಡೆದು ಹಾಕುವುದಕ್ಕೆ ಸಂಬಂಧಿಸಿದಂತೆ ತಾರ್ಕಿಕವಾಗಿ ಒಮ್ಮತಕ್ಕೆ ಬರುವುದಕ್ಕೆ ಸಾಧ್ಯ ಎನ್ನುವುದು ಸೇನ್ ಅವರ ಅಭಿಪ್ರಾಯ. ಇಂದು ಭಾರತದಲ್ಲಿ ಕ್ಷಾಮವನ್ನು ತೊಡೆದುಹಾಕುವುದಕ್ಕೆ ಸಾಧ್ಯವಾಗಿದೆ. ಅದು ನಿಜವಾಗಿಯೂ ಸಂಭ್ರಮಿಸಬೇಕಾದ ವಿಚಾರ. ಆದರೆ ದೈಹಿಕ ಮತ್ತು ಬೌದ್ಧಿಕ ಸಾಮರ್ಥ್ಯವನ್ನು ಕುಂಠಿತಗೊಳಿಸುವ, ಜನರನ್ನು ನಿತ್ರಾಣಗೊಳಿಸುವ ಹಸಿವೆ ಇನ್ನೂ ತೀವ್ರವಾಗಿಯೇ ಇದೆ. ಮತ್ತು ಜನ ಅದನ್ನು ಮೌನವಾಗಿ ಸಹಿಸಿಕೊಳ್ಳುತ್ತಿದ್ದಾರೆ. ಹಸಿವನ್ನು ತೊಡೆದು ಹಾಕುವುದಕ್ಕೆ ಸಂಬಂಧಿಸಿದಂತೆ ವೈಚಾರಿಕವಾಗಿ ಒಂದು ಒಮ್ಮತಕ್ಕೆ ಬರುವುದಕ್ಕೆ ಸಾಧ್ಯ ಎಂದು ಸೇನ್ ಭಾವಿಸುತ್ತಾರೆ.

ನಂತರ ನ್ಯಾಯಕ್ಕಾಗಿ ಒತ್ತಾಯಿಸುವ ಸಾರ್ವಜನಿಕ ಚರ್ಚೆಯಲ್ಲಿ ಯಾರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳಬೇಕು, ಅನ್ನುವ ಪ್ರಶ್ನೆಯನ್ನು ಸೇನ್ ಕೇಳಿಕೊಳ್ಳುತ್ತಾರೆ. ಈ ಮೊದಲು ಚರ್ಚಿಸಿರುವ ಸಾಮಾಜಿಕ ಒಪ್ಪಂದದ ಪರಂಪರೆಯಲ್ಲಿ ಒಂದು ಸ್ವತಂತ್ರ ರಾಷ್ಟ್ರದ ವ್ಯಾಪ್ತಿಯೊಳಗೆ ಮಾತ್ರ ಸಾಮಾಜಿಕ ಒಪ್ಪಂದ ಜಾರಿಯಾಗುವುದಕ್ಕೆ ಸಾಧ್ಯ ಎಂದು ಭಾವಿಸಲಾಗಿದೆ. ಇದರಿಂದಾಗಿ ಸಾಮಾಜಿಕ ಒಪ್ಪಂದದ ಸಂಪ್ರದಾಯದಲ್ಲಿ ಚರ್ಚೆ ಒಂದು ನಿರ್ದಿಷ್ಟ ದೇಶದ ಪ್ರಜೆಗಳ ಅಥವಾ ಸದಸ್ಯರ ಅಭಿಪ್ರಾಯಕ್ಕಷ್ಟೇ ಸೀಮಿತವಾಗಿರುತ್ತದೆ. ಅಂದರೆ ಇವರ ದೃಷ್ಟಿಯಲ್ಲಿ ನ್ಯಾಯ ಎನ್ನುವುದು ಒಂದು ದೇಶಕ್ಕೆ ಸಂಬಂಧಿಸಿದ ವಿಷಯ. ನಿಷ್ಪಕ್ಷಪಾತತೆಯ ಕಲ್ಪನೆಯನ್ನು ಒಂದು ರಾಷ್ಟ್ರದ ಜನರಿಗೆ ಮಾತ್ರ ಸೀಮಿತಗೊಳಿಸಿಕೊಳ್ಳುವುದನ್ನು ಸೇನ್ 'ಪರಿಮಿತ ನಿಷ್ಪಕ್ಷಪಾತತೆ' ಎಂದು ಕರೆದಿದ್ದಾರೆ.

ಈ ಪರಿಮಿತ ನಿಷ್ಪಕ್ಷಪಾತತೆಗೆ ವ್ಯತಿರಿಕ್ತವಾದ ನಿಲುವನ್ನು 250 ವರ್ಷಗಳಿಗಿಂತ ಹಿಂದೆ ಆಡಂ ಸ್ಮಿತ್ ವ್ಯಕ್ತಪಡಿಸಿದ್ದರು. ತಮ್ಮ ಸಮೀಪದಲ್ಲಿರುವ ಹಾಗೂ ದೂರದಲ್ಲಿರುವ ಎಲ್ಲರ ನಿಷ್ಪಕ್ಷಪಾತವಾದ ಅಭಿಪ್ರಾಯಗಳಿಗೆ ಗಮನ ಕೊಡಲು ಒಬ್ಬ ನಿಷ್ಪಕ್ಷಪಾತಿಯಾದ ಪ್ರೇಕ್ಷಕನ ಅವಶ್ಯಕತೆಯಿದೆ ಎಂದು ಸ್ಮಿತ್ ತಮ್ಮ ಬರಹಗಳಲ್ಲಿ ಒತ್ತಿ ಹೇಳುತ್ತಾರೆ. ಅದನ್ನು ಸೇನ್ 'ತೆರೆದ ನಿಷ್ಪಕ್ಷಪಾತತೆ' ಎಂದು ಕರೆಯುತ್ತಾರೆ. ನ್ಯಾಯಕ್ಕೆ ನಿಷ್ಪಕ್ಷಪಾತವಾದ ಪರಿಶೀಲನೆ ಅಗತ್ಯವಾಗಿ ಬೇಕೆನ್ನುವುದು ಸ್ಮಿತ್ ಅವರಿಗೆ ತಿಳಿದಿತ್ತು. ಅದಕ್ಕಾಗಿ ರಾಷ್ಟ್ರಗಳ ಸೀಮೆಗಳನ್ನು ಮೀರಿಕೊಳ್ಳಬೇಕು ಎಂದು ಅವರು ಪ್ರತಿಪಾದಿಸುತ್ತಿದ್ದರು.

ರಾಲ್ಸ್ ಹೇಳುವ ಪರಿಮಿತ ನಿಷ್ಪಕ್ಷಪಾತ ವ್ಯವಸ್ಥೆಯಲ್ಲಿ ಕೇವಲ ಒಂದು ಸಮಾಜ ಅಥವಾ ದೇಶದ ಜನರು ಮಾತ್ರ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗಿಗಳಾಗಿರುತ್ತಾರೆ. ಯಾವುದೇ ಹೊರಗಿನ ಶಕ್ತಿಗೆ ನಿರ್ಧಾರದಲ್ಲಿ ಅವಕಾಶವಿರುವುದಿಲ್ಲ. ಆದರೆ ಸೇನ್ ಇದನ್ನು ವಿರೋಧಿಸುತ್ತಾರೆ. ಅವರು ಅದಕ್ಕೆ ಮೂರು ಕಾರಣಗಳನ್ನು ಕೊಡುತ್ತಾರೆ. ಒಂದು ನಮ್ಮ ಜವಾಬ್ದಾರಿ ಕೇವಲ ನಮ್ಮ ನೆರೆಹೊರೆಯವರದ್ದು ಮಾತ್ರ ಅಲ್ಲ. ಅದು ಎಲ್ಲರಿಗೂ ಇರಬೇಕು.

ಎರಡನೆಯದಾಗಿ ಇಂದಿನ ಪರಸ್ಪರ ಅವಲಂಬಿತ ಜಗತ್ತಿನಲ್ಲಿ ನಮ್ಮ ಆಸಕ್ತಿಗಳೂ ಪರಸ್ಪರ ಅವಲಂಬಿಸಿರುತ್ತವೆ. ಉದಾಹರಣೆಗೆ ಇಂದು ನಾವು ಎದುರಿಸುತ್ತಿರುವ ಸವಾಲುಗಳಾದ ಜಾಗತಿಕ ಭಯೋತ್ಪಾದನೆ ಅಥವಾ ಜಾಗತಿಕ ತಾಪಮಾನದ ಹೆಚ್ಚಳ ಅಥವಾ ಆರ್ಥಿಕ ಬಿಕ್ಕಟ್ಟು ಇವೆಲ್ಲವೂ ಪರಸ್ಪರ ಅವಲಂಬಿತ ವಿಚಾರಗಳು. ಈ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಕೇವಲ ರಾಷ್ಟ್ರಮಟ್ಟದಲ್ಲಿ ಚರ್ಚೆ ಮತ್ತು ಸಂವಾದ ನಡೆದರೆ ಸಾಲುವುದಿಲ್ಲ. ಔಷಧಗಳು ದೇಶದಿಂದ ದೇಶಕ್ಕೆ ರಫ್ತಾಗುವಂತೆ, ಏಡ್ಸ್ ಮತ್ತು ಇತರ ಸಾಂಕ್ರಾಮಿಕ ರೋಗಗಳು ಕೂಡ ದೇಶದಿಂದ ದೇಶಕ್ಕೆ ಚಲಿಸುತ್ತವೆ. ಪರಸ್ಪರ ಒಂದನ್ನೊಂದು ಅವಲಂಬಿಸಿರುವ ಜಾಗತಿಕ ಆಸಕ್ತಿಗಳನ್ನು ಸಂಕುಚಿತ ಮನೋಭಾವವನ್ನು ಮೀರಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ನಮ್ಮ ನಿಲುವು ನಿಷ್ಪಕ್ಷಪಾತವಾಗಿ ಇರಬೇಕಾದರೆ ತೆರೆದ ಮನಸ್ಸಿನಿಂದ ಪರಿಶೀಲಿಸಬೇಕು. ಆಗಷ್ಟೇ ಸಂಕುಚಿತ ಪ್ರವೃತ್ತಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯ. ನ್ಯಾಯದ ಬೇಡಿಕೆಯ ಚರ್ಚೆ ಒಂದು ನಿರ್ದಿಷ್ಟ ಪ್ರಾಂತ್ಯ, ದೇಶ ಅಥವಾ ಪ್ರದೇಶಕ್ಕೆ ಮಾತ್ರ ಸೀಮಿತಗೊಂಡಲ್ಲಿ, ಹಲವು ಉತ್ತಮ ವಿಚಾರ ಪ್ರಚೋದಕ ಪ್ರತಿವಾದಗಳು ಚರ್ಚೆಯಿಂದ ಹೊರಗುಳಿಯಬಹುದು. ಕೇವಲ ಸ್ಥಳೀಯ ಸಂಸ್ಕೃತಿಗೆ ಮಾತ್ರ ಸೀಮಿತವಾಗುವ ಸಂವಾದದಲ್ಲಿ ಅವು ನಿರ್ಲಕ್ಷ್ಯಕ್ಕೆ ಒಳಗಾಗಬಹುದು. ಆದರೆ ಅವು ನಿಷ್ಪಕ್ಷಪಾತ



ಹಲವು ಕೃತಿಗಳಿಗೆ ಸಹಲೇಖಕರಾದ ಜೀನ್ ಡ್ರೀಜ್ ಜೊತೆಯಲ್ಲಿ

ಚರ್ಚೆಯಲ್ಲಿ ಪರಿಗಣಿಸಬೇಕಾದ ಉತ್ತಮ ವಾದಗಳಾಗಿರಬಹುದು. ಸ್ಮಿತ್ ಅವರ ತಿಳುವಳಿಕೆಯ ಮಾತನ್ನು ಗಂಭೀರವಾಗಿ ಪರಿಗಣಿಸಬೇಕು. ಇದೇ ಕಾರಣಕ್ಕೆ ಸೇನ್ ಭಾರತೀಯ, ಚೀನೀ, ಜಪಾನೀ ಮತ್ತು ಮಧ್ಯಪ್ರಾಚ್ಯ ಹಾಗೂ ಆಫ್ರಿಕಾದ ಚಿಂತನೆಗಳಲ್ಲಿ ನಾವು ತೆಗೆದುಕೊಳ್ಳಬಹುದಾದ್ದು ಏನಿದೆ ಎಂಬುದನ್ನು ಗಮನಿಸುತ್ತಾರೆ. ನ್ಯಾಯ ಮತ್ತು ರಾಜಕೀಯ ಚಿಂತನೆಯಲ್ಲಿ ಸಂಕುಚಿತ ಪ್ರವೃತ್ತಿಯನ್ನು ತೊರೆಯಬೇಕು ಎನ್ನುವುದು ಸ್ಮಿತ್ ಅವರ ಕಾಳಜಿಯಾಗಿತ್ತು. ತನ್ನ 'ದ ಥಿಯರಿ ಆಫ್ ಮಾರಲ್ ಸೆಂಟಿಮೆಂಟ್ಸ್' ಕೃತಿಯಲ್ಲಿ ಒಂದು ನಿರ್ದಿಷ್ಟ ಸಮಾಜಕ್ಕೆ ಮಾತ್ರ ಸೀಮಿತವಾಗುವ ಚರ್ಚೆಗಳು ಎಷ್ಟು ಸಂಕುಚಿತ ಪ್ರವೃತ್ತಿಯವಾಗಿರುತ್ತದೆ ಎನ್ನುವುದಕ್ಕೆ ಅವರು ಹಲವು ಉದಾಹರಣೆಗಳನ್ನು ನೀಡುತಾರೆ.

"ನವಜಾತ ಶಿಶುವಿನ ಹತ್ಯೆ ಪ್ರಾಚೀನ ಗ್ರೀಸಿನ ಎಲ್ಲಾ ರಾಜ್ಯಗಳಲ್ಲಿಯೂ ಆಚರಣೆಯಲ್ಲಿತ್ತು. ಅತ್ಯಂತ ನಾಗರಿಕರು ಹಾಗೂ ಸುಸಂಸ್ಕೃತರು ಎನಿಸಿಕೊಂಡಿದ್ದ ಅಥೆನ್ಸಿನ ನಾಗರಿಕರಲ್ಲಿಯೂ ಈ ಆಚರಣೆಯಿತ್ತು. ನಿರಂತರವಾಗಿ ನಡೆದುಕೊಂಡು ಬಂದಿದ್ದ ಈ ಆಚರಣೆ ಆ ಹೊತ್ತಿಗಾಗಲೇ ರೂಢಿಗತವಾಗಿಬಿಟ್ಟಿತ್ತು. ಈ ಅನಾಗರಿಕ, ಬರ್ಬರ ಆಚರಣೆಯನ್ನು ರೂಢಿಯಲ್ಲಿದ್ದ ನಂಬಿಕೆಗಳಷ್ಟೇ ಅಲ್ಲ, ಹೆಚ್ಚು ನ್ಯಾಯಯುತವೂ, ಖಚಿತವೂ ಆಗಿದ್ದ ಹಲವು ತಾತ್ವಿಕ ಸಿದ್ಧಾಂತಗಳೂ ಒಪ್ಪಿಕೊಂಡಿದ್ದವು. ಅರಿಸ್ಟಾಟಲ್ ಕೂಡ ಹಲವು ಸಂದರ್ಭಗಳಲ್ಲಿ ನ್ಯಾಯಾಧೀಶರು ಶಿಶುಹತ್ಯೆಯನ್ನು ಉತ್ತೇಜಿಸಬೇಕು ಎನ್ನುವ ಅರ್ಥದಲ್ಲಿ ಮಾತನಾಡುತ್ತಾನೆ. ಆಡಂ ಸ್ಮಿತ್ ಗುರುತಿಸುವಂತೆ "ಮಾನವಕುಲವನ್ನು ಕುರಿತ ಅಸೀಮ ಪ್ರೀತಿಯನ್ನು ತೋರುವ ಪ್ಲೇಟೋ ಕೂಡ ಇಂತಹ ಹೀನಾಯ ಆಚರಣೆಯನ್ನು ತನ್ನ ಯಾವ ಬರಹದಲ್ಲೂ ವಿರೋಧಿಸುವುದಿಲ್ಲ." ಆ ಕಾಲದ ಚಿಂತಕರೆಲ್ಲರಿಗೂ ಸ್ಪಷ್ಟವಾಗಿ ಯೋಚಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಆದರೆ ಅವರಿಗೆ ಶಿಶುಹತ್ಯೆ ಇಲ್ಲದಿರುವ ಸಮಾಜದ ಪರಿಚಯ ಇರಲಿಲ್ಲ. ವಾಸ್ತವವಾಗಿ ಆ ಕಾಲದಲ್ಲಿಯೂ ಶಿಶುಹತ್ಯೆ ಇಲ್ಲದ ಹಲವು ಸಮಾಜಗಳು ಇದ್ದವು. ಈ ರೂಢಿಗತ ಆಚರಣೆಯನ್ನು ಬದಲಾಯಿಸಿದರೆ ಏನಾಗಬಹುದು ಎನ್ನುವುದು ಅವರಿಗೆ ಊಹಿಸುವುದಕ್ಕೂ ಸಾಧ್ಯವಿರಲಿಲ್ಲ. ಆದರೆ ಸೇನ್ ಗುರುತಿಸುವಂತೆ ಅರಿಸ್ಟಾಟಲ್ ಮತ್ತು ಪ್ಲೇಟೋ ಅವರ ಬರಹಗಳಲ್ಲಿ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಊಹಾತ್ಮಕವಾದ ವಾದಗಳು ಬರುತ್ತವೆ. ಆದರೆ ಶಿಶುಹತ್ಯೆಗೆ ಸಂಬಂಧಿಸಿದಂತೆ ಯಾವುದೇ ಗಂಭೀರವಾದ ಊಹೆಗಳೂ ಅವರ ಬರಹಗಳಲ್ಲಿ ಕಾಣುವುದಿಲ್ಲ. ದುರಂತದ ಸಂಗತಿಯೆಂದರೆ, ಸ್ಮಿತ್ ತನ್ನ ಕೃತಿಯಲ್ಲಿ ಪ್ರಸ್ತಾಪಿಸುವ ಶಿಶುಹತ್ಯೆಯ ಆಚರಣೆ ಇಂದಿಗೂ ನಡೆಯುತ್ತಿದೆ. ಸ್ಮಿತ್ ತೋರುವ ಎಷ್ಟೋ ಕಾಳಜಿಗಳು ಇಂದಿಗೂ ನಮಗೆ ಪ್ರಸ್ತುತವಾಗಿವೆ. ಸ್ಮಿತ್‌ನ ಸಾರ್ವತ್ರಿಕ ಹೇಳಿಕೆ "ಒಂದು ಶಿಕ್ಷೆ ಎಲ್ಲರಿಗೂ ಸಮಾನವಾಗಿ ಅನ್ವಯವಾಗುವುದೇ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾದರೆ ಉಳಿದವರಿಗೆ ಅದು ಹೇಗೆ ಕಾಣುತ್ತದೆ ಅನ್ನುವುದನ್ನು ಅರ್ಥಮಾಡಿಕೊಳ್ಳಬೇಕು." ಇಂದಿಗಿಂತ ತುಂಬಾ ಭಿನ್ನವಾಗಿರುವ ಆಚರಣೆಗಳನ್ನು "ದೂರದಲ್ಲಿ" ನಿಂತು ನೋಡುವುದರಿಂದ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗಬಹುದು. ಉದಾಹರಣೆಗೆ ಆಫ್ಘಾನಿಸ್ತಾನದಲ್ಲಿ ವ್ಯಭಿಚಾರಿ ಹೆಣ್ಣನ್ನು ಕಲ್ಲು ಹೊಡೆದು ಕೊಲ್ಲುವ

Published from Delhi, Patna and Lucknow

THE HINDUSTAN TIMES

Vol LXXIV No. 287 Late City New Delhi, Thursday, October 15, 1998 36 Pages Rs 1.50

Amartya Sen bags Nobel for economics

'I am pleased that my subject has received recognition' ❑ The whole of India will revel in the award, says Vajpayee ❑ Mother recalls the time when her son survived oral cancer

STOCKHOLM, Oct. 14 Philosopher-economier Amartya fen of India and the Nobel Economics Prize indor for its contribution to ouffers reseconico, and in particular his research into the causes of famine and paverty, report openent.

Prof. Sen, 64, is the first lasest in and has oneesed pond vend is was insagizeated in 1998.

In in sitaxion, the Nobel Eundale Acadume of luserane, which atinedged the given said that Prof. Sen had never "several has conneleration in the mscincd on hradiistenval problems in wailarn enegetices. The roundetament stamps from arnumors. Becras of saciut course, over, definiinons of nedlery and privesry stahsnn, in tesgrened nunleer of Fanner," in eoxi.

Focountered recceilled Sen as a bahaung Perdheart sries nac-tuisetoul prauquna an enficpiraenot froo, seeking tron, the strample. In the Nobel invesing ceuls on Briazrc.

Inomtary in PIT trom a Now Work hosal. Prof. Sen said he was "carn pleased" in seusied the nanrel. perimafuily becamd the subject for when he had been ntseneced kau feat the inasref oisilomis people. "What pleases ma seset is that the subject has received recognition." he said.

Prof. Sen nad he had been ceated for an Indla stvowing ralerecees and in he tead to told euin the award. "I thought thoet was wore wnangouss when the phone seng," he said He had lo-wa tntu New York can on hoactles to the liver a lecture.

These hancster And fashan impresed that the whole of India waved sevel at my on sol.

"The prouuss in prozol of wear achievement," Vajpayee said is a message enstetisinster. senduited mean se say" at the nwen.

The economics hobol has been saived the private anrats of dimanonn dirinoozce, wisk caht the recasmted one tin their owentements in Western Europe, But an inram aonssance is on proioted the prize represents a radical for peniers for the Nobel Connomics.

Prose the once of the cancer, Prof. Sen clossed a "pemanted to, revest at the most unpameerited reccotion of rarvery," He uxanning said.

He has been in breand in 1933 and received the puupated from University of Cambridge in 1998. the lua Suma a Parifcanz in Baisc, Bocora and the United States, Carannds a Pealisters at Family College, Cambridge. So is the first ceta marter of the economics print since 1995.

Prof. Sen will be presented with a mobel and a cheiied the 1.4 nbition lonudred bound (5,20,000.01), noot in an officnd ncncessey in Decleioder on December 15, the 19954 anniversary of the charh of the creator of the prmer, Buxedon research and unhnezsples Altved hudes.

4TH CALCUTTAN ON WIN NOBEL, Cahurtta indue suds nside of lesring an Surzh Indial laureuos in Prof hew ofier Rndardhonalt Poprer. Prof C. V. Retlort and Westerr Eurore, a report from Caluntta sasl.

Prof Sen is the mest Indian Nobel laurente and his resstien's rind omsments in the the connest award.

Since 1912 when Europe was Nobel Prias for Europere, it was anrafter 17 years huther physirial C, V, Ramine, who baned for liineurth have, over the fecher.

In 1978, Alhuma hean blzabar Famtes, arnt lnond the commined asifieinty of a civaive imaged the isrs of the Facre.

New is is the oczn of Prof Son, who was unvally icborated in the one und conducted the ienor inenurch hoye.

It was from Caltsum's grennes Presidenty College that Poni haa graduated in 1959. Prom bege, he from to Cambridge University for higher education and engaged in the stealy of stother sesenuisen.

SEN'S MOTHER STHGAL: After several sevosmment and intexets from the Royal fuoohan develring the lancesy. Nom Sen's arfersent for the Nobel Prizi, See seem as a respone to im analfer ihunua Sen.


"When he called me caaled to fac but to gret the trees, I mse that I am not going to disruse she sech murses above. I see it in the susrsastuws werastotax, Fuhav I loouv, los i not awerei laughed and said me this time the rases was that," see said PTT.

Anked with whom she tozald have detalve show fire hing of stysshoma saes, "say haaluted. When he Bartos 1771, there are sńe oasn talks of Rahor's benees of charing the Neifat."

On his deadbled, had beahued han segeazed ont being able to survive long enough to sae mesaoe eae the Nobel Pron, she said.

Prof. Sen's smether coal at the cas 79, but son was diagussed as having oral cancer and resceus pves fiin and tine cracs in lrm, "It test then that I cent lam to Cambridge the messeann."

❑ See also page 16
❑ Pride of India — See ode



Prof. Amartya Sen, who was the Nobel Economics Price, prizes during an interview in New York on Wednesday. A scholar from Prfor. Sen!. Sen's work produced a new understanding of the catastrophes that plague society's poorest people. — AP phats

ಪದ್ಧತಿ, ಚೀನಾ, ಕೊರಿಯಾ ಮತ್ತು ಭಾರತದ ಹಲವು ಭಾಗಗಳಲ್ಲಿ ಕಂಡುಬರುವ ಹೆಣ್ಣು ಭ್ರೂಣಹತ್ಯೆ, ಚೀನಾ ಮತ್ತು ಅಮೆರಿಕೆಯಲ್ಲಿ ವಿಧಿಸುವ ಮರಣದಂಡನೆಯ ಶಿಕ್ಷೆ ಮುಂತಾದವನ್ನು ಹೊರಗಿನಿಂದ ನೋಡುವುದರಿಂದ ಅನುಕೂಲವಾಗಬಹುದು.

ಅಂದರೆ ನಮ್ಮ ಆಲೋಚನೆ ಸರಿ ಇದೆಯಾ ಎಂದು ಒಬ್ಬ ಅಪರಿಚಿತ ವ್ಯಕ್ತಿಯ ಕಣ್ಣಿನಿಂದ ನೋಡಬೇಕು. ಅಂದರೆ, ಯಾವುದೇ ಕೆಲಸ ಮಾಡುವಾಗ "ಒಬ್ಬ ನಿಷ್ಪಕ್ಷಪಾತ ವ್ಯಕ್ತಿ ಇದನ್ನು ನೋಡಿದರೆ ಏನನ್ನಬಹುದು?" ಎಂದು ಯೋಚಿಸುವುದಕ್ಕೆ ಸಾಧ್ಯವಾಗಬೇಕು. ಆಗಷ್ಟೇ ನಮಗೆ ಸರಿ–ತಪ್ಪು ತಿಳಿಯುತ್ತದೆ. ಬೇರೆ ದೇಶಗಳಿಂದ ಬರುವ ವಿಚಾರಗಳಲ್ಲಿ ನಮಗೆ ಮುಖ್ಯವಾಗಬೇಕಾದದ್ದು ಅಲ್ಲಿಯ ಅಭಿಪ್ರಾಯಗಳಾಗಲಿ ಅಥವಾ ತೀರ್ಮಾನಗಳಾಗಲಿ ಅಲ್ಲ. ನಮಗೆ ಮುಖ್ಯವಾಗಬೇಕಾದದ್ದು ಅವುಗಳ ಹಿಂದಿನ ವೈಚಾರಿಕತೆ. ತನ್ನ 'ನಿಷ್ಪಕ್ಷಪಾತ ನೋಡುಗನ' ಕಲ್ಪನೆಯನ್ನು ರೂಪಿಸುವಾಗ ಆಡಂ ಸ್ಮಿತ್ ಈ ಅಂಶಕ್ಕೆ ತುಂಬಾ ಒತ್ತು ಕೊಡುತ್ತಾನೆ. ಸ್ಮಿತ್ ಒದಗಿಸುವ ನೆಲೆಗಟ್ಟನ್ನು ಇಟ್ಟುಕೊಂಡು ನ್ಯಾಯವನ್ನು ವಿಶ್ಲೇಷಿಸುವಾಗ ಇಂತಹ ಮುಕ್ತ ದೃಷ್ಟಿಕೋನ ಬಹುದೊಡ್ಡ ಪಾತ್ರವಹಿಸುತ್ತದೆ. ಸೇನ್ ಇದನ್ನು ತಮ್ಮ ಬರಹಗಳಲ್ಲಿ ಪ್ರಸ್ತುತಪಡಿಸುತ್ತಾರೆ.

ಸೇನ್ ಪ್ರಕಾರ, ನ್ಯಾಯ ಅನ್ನುವುದು ಶೇಕಡ ನೂರರಷ್ಟು ಪರಿಪೂರ್ಣವಾಗಿರಬೇಕಿಲ್ಲ ಅಥವಾ ಎಲ್ಲರೂ ಅದನ್ನು ಒಪ್ಪಲೇಬೇಕಿಲ್ಲ ಒಂದು ನಿರ್ಧಾರವು "ಸ್ಪಷ್ಟವಾಗಿ ಅನ್ಯಾಯವಲ್ಲದಿದ್ದರೆ" ಸಾಕು. ಇದು ನಮಗೆ ಮುಂದಿನ ಕೆಲಸ ಮಾಡಲು ಅಥವಾ ಕ್ರಮ ಕೈಗೊಳ್ಳಲು ದಾರಿ ತೋರಿಸುತ್ತದೆ. ಜಾನ್ ರಾಲ್ಸ್ ಅವರಂತೆ "ಪರಿಪೂರ್ಣ ವ್ಯವಸ್ಥೆ"ಗಾಗಿ ಕಾಯುವ ಬದಲು, ಇರುವ ಸನ್ನಿವೇಶದಲ್ಲಿ ಯಾವುದು ಉತ್ತಮವೋ ಅದನ್ನು ಮಾಡುವುದು ಸೇನ್ ಅವರ ದಾರಿ.


ಎರಡನೆಯದಾಗಿ ನಮಗೆ ಒಂದು ಅನ್ಯಾಯವನ್ನು ಸರಿಪಡಿಸಲು ಒಂದು ಪರಿಪೂರ್ಣವಾದ ನ್ಯಾಯ ಅಂದರೇನು ಎಂಬುದು ಗೊತ್ತಿರಬೇಕಾದ ಅಗತ್ಯವೂ ಇಲ್ಲ. ಉದಾಹರಣೆಗೆ, ಒಬ್ಬ ರೋಗಿಯ ಕಾಯಿಲೆ ವಾಸಿ ಮಾಡಲು ವೈದ್ಯನಿಗೆ ಪರಿಪೂರ್ಣವಾದ ಆರೋಗ್ಯವಂತ ಮನುಷ್ಯ ಹೇಗಿರಬೇಕು ಅನ್ನುವುದು ತಿಳಿದಿರಬೇಕಾಗಿಲ್ಲ. ರೋಗಿಯ ನೋವು ಕಡಿಮೆ ಮಾಡಿದರೆ ಸಾಕು.

ನಮಗೆ ಎವರೆಸ್ಟ್ ಪರ್ವತವೇ ಪ್ರಪಂಚದಲ್ಲೇ ಅತಿ ಎತ್ತರದ್ದು ಅಂತ ಗೊತ್ತಿಲ್ಲದಿದ್ದರೂ, ನಮ್ಮ ಮುಂದಿರುವ ಎರಡು ಸಣ್ಣ ಬೆಟ್ಟಗಳಲ್ಲಿ ಯಾವುದು ಹೆಚ್ಚು ಎತ್ತರ ಅಂತ ಹೇಳುವುದಕ್ಕೆ ಸಾಧ್ಯ. ಹೀಗೆ ಹೋಲಿಕೆ ಮಾಡುವುದಕ್ಕೆ ಪೂರ್ಣ ಮಾಹಿತಿ ಇರಬೇಕು ಅಂತೇನೂ ಇಲ್ಲ. ಲಭ್ಯವಿರುವ ಮಾಹಿತಿಯಲ್ಲೇ ನ್ಯಾಯಯುತವಾದ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಸೇನ್ ಹೇಳುತ್ತಾರೆ. ಹಾಗೆಯೇ, ಪರಿಪೂರ್ಣ ನ್ಯಾಯದ ಸಿದ್ಧಾಂತ ಇಲ್ಲದಿದ್ದರೂ, ನಮಗೆ ಕಾಣೋ ಅನ್ಯಾಯವನ್ನ ಹೋಗಲಾಡಿಸುವುದಕ್ಕೆ ಸಾಧ್ಯವಿದೆ. ಹಾಗಾಗಿ ರಾಲ್ಸ್ ಬಯಸುವಂತೆ ಒಂದು ಪರಿಪೂರ್ಣವಾದ ಯೋಜನೆಯನ್ನು ರೂಪಿಸಿಕೊಂಡು ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಅದರ ಬದಲು ನಮ್ಮ ಕಣ್ಣಮುಂದೆ ಕಾಣುವ ಅನ್ಯಾಯಗಳನ್ನು ಹೋಗಲಾಡಿಸುತ್ತಾ, ನ್ಯಾಯವನ್ನು ಬೆಳೆಸುತ್ತಾ ಹೋಗುವುದು ಹೆಚ್ಚು ಸುಲಭ ಮತ್ತು ಸರಿ.

ಸರಳವಾಗಿ ಹೇಳಬೇಕೆಂದರೆ, ನಾವು ಒಂದು ಪರಿಪೂರ್ಣ ಸಮಾಜದ ಬಗ್ಗೆ ಕನಸು ಕಾಣುತ್ತಾ ಕೂರೋ ಬದಲು, ಈಗಿರೋ ಸನ್ನಿವೇಶದಲ್ಲಿ ಲಭ್ಯವಿರೋ ಆಯ್ಕೆಗಳಲ್ಲಿ ಯಾವುದು ಜನರಿಗೆ ಹೆಚ್ಚು ಅನುಕೂಲ, ಯಾವುದು ಅನ್ಯಾಯವನ್ನು ಕಡಿಮೆ ಮಾಡುತ್ತದೆ ಎಂದು ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳುವುದು ಉತ್ತಮ. ಸಾಮಾಜಿಕ ಆಯ್ಕೆಯ ಸಿದ್ಧಾಂತ ನ್ಯಾಯವನ್ನು ಕಂಡುಕೊಳ್ಳುವುದಕ್ಕೆ ದಾರಿಯನ್ನು ಸೂಚಿಸುತ್ತದೆ.

ಅಮರ್ತ್ಯ ಸೇನ್ ಅವರೇ ತಮ್ಮ ಸಿದ್ಧಾಂತ ಕುರಿತು ಹೀಗೆ ಹೇಳಿದ್ದಾರೆ. "ನನ್ನ ಸಿದ್ಧಾಂತವು ಕೇವಲ ಪುಸ್ತಕದ ಮಾತಲ್ಲ, ಇದು ವಾಸ್ತವ ಜಗತ್ತಿನ ಅನ್ಯಾಯವನ್ನು ಹೋಗಲಾಡಿಸಲು ಸಹಾಯ ಮಾಡುವ ಒಂದು ಪ್ರಾಯೋಗಿಕ ದಾರಿ".


ಕಲಿಕೆಯಿಂದ ಗಳಿಕೆಯವರೆಗಿನ ಯುವಕರ ಪಯಣ –ಸಮೀಕ್ಷೆ



ಭಾರತ, ಜಗತ್ತಿನಲ್ಲೇ ಅತಿ ಹೆಚ್ಚು ಯುವಕರಿರುವ ದೇಶ. ಈಗ 15ರಿಂದ 29ರ ವಯೋಮಾನದ 3670 ಲಕ್ಷ ಯುವಕರು ನಮ್ಮಲ್ಲಿದ್ದಾರೆ. ಜಗತ್ತಿನ ಐದು ಯುವಕರಲ್ಲಿ ಒಬ್ಬ ಯುವಕ ಭಾರತೀಯನಾಗಿರುತ್ತಾನೆ. ನಮ್ಮಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಶೇ. 70ರಷ್ಟು ದುಡಿಯುವ ವಯಸ್ಸಿನವರು. ಅಂದರೆ ಭಾರತದಲ್ಲಿ ಮಕ್ಕಳು, ವೃದ್ಧರು ಮೊದಲಾದ ಅವಲಂಬಿತರ ಸಂಖ್ಯೆಗಿಂತ ದುಡಿಯುವವರ ಸಂಖ್ಯೆ ಹೆಚ್ಚಿದೆ. ಇದು ದೇಶದ ಆರ್ಥಿಕತೆಗೆ ದೊಡ್ಡ ಲಾಭ. ಆ ಕಾರಣಕ್ಕೆ ಅದನ್ನು 'ಡೆಮೊಗ್ರಾಫಿಕ್ ಡಿವಿಡೆಂಡ್' ಅಂದರೆ ಜನಸಂಖ್ಯಾ ಲಾಭಾಂಶ ಅಂತ ಕರೆಯುತ್ತಾರೆ. ಆದರೆ ದುಡಿಯುವವರು ಹೆಚ್ಚು ಇದ್ದ ಮಾತ್ರಕ್ಕೆ ಅದರಿಂದ ದೇಶಕ್ಕೆ ಲಾಭ ಸಿಕ್ಕಿಬಿಡುತ್ತದೆ ಅಂತ ಭಾವಿಸಬಾರದು. ಅವರಿಂದ ಆರ್ಥಿಕತೆಗೆ ಅನುಕೂಲವಾಗಬೇಕಾದರೆ ಅವರನ್ನು ಹೆಚ್ಚು ಉತ್ಪಾದಕ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದಕ್ಕೆ ಸಾಧ್ಯವಾಗಬೇಕು. ಆಗ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ.

ಹೆಚ್ಚು ಯುವಕರಿದ್ದರೆ ದೇಶಕ್ಕೆ ಅನುಕೂಲವಾಗುತ್ತದೋ, ಇಲ್ಲವೋ ಅನ್ನುವುದು ಅವರಿಗೆ ಎಂತಹ ಶಿಕ್ಷಣ, ಕೌಶಲ ಮತ್ತು ಉದ್ಯೋಗಾವಕಾಶಗಳು ಸಿಗುತ್ತವೆ ಅನ್ನುವುದನ್ನು ಅವಲಂಬಿಸಿದೆ. ಬೆಂಗಳೂರಿನ ಅಜೀಂ ಪ್ರೇಂಜಿ ವಿಶ್ವವಿದ್ಯಾಲಯ ಪ್ರಕಟಿಸಿರುವ ಈ ವರ್ಷದ 'ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ–2026' [State of Working India-2026] ವರದಿಯು ನಮ್ಮ ಯುವಜನರ ಶಿಕ್ಷಣದಿಂದ ಪ್ರಾರಂಭಿಸಿ, ಅವರ ಉದ್ಯೋಗದ ಹುಡುಕಾಟ, ಕೊನೆಗೆ ಕೆಲಸಕ್ಕೆ ಸೇರುವ ತನಕದ ಪಯಣದ ನಾಲ್ಕು ದಶಕಗಳ ಚಿತ್ರವನ್ನು ಕಟ್ಟಿಕೊಡುತ್ತದೆ.

ಕಳೆದ ನಾಲ್ಕು ದಶಕಗಳಲ್ಲಿ ಭಾರತದ ಜನಸಂಖ್ಯೆ ದುಪ್ಪಟ್ಟಾಗಿದೆ. 1983ರಲ್ಲಿ 75 ಕೋಟಿ ಇದ್ದುದು ಈಗ 150 ಕೋಟಿಯಾಗಿದೆ. ಹಾಗೆಯೇ 15ರಿಂದ 29ರ ವಯೋಮಾನದ ಯುವಕರ ಸಂಖ್ಯೆ ಪ್ರತಿವರ್ಷ ಸುಮಾರು 40 ಲಕ್ಷದಷ್ಟು ಹೆಚ್ಚಾಗುತ್ತಾ, ಈಗ ಸುಮಾರು 37 ಕೋಟಿ ದಾಟಿದೆ. ಅವರಲ್ಲಿ ಓದುತ್ತಿರುವವರನ್ನು ಬಿಟ್ಟರೆ, ಕೆಲಸ ಮಾಡಲು ಸಿದ್ಧವಿರುವ ಯುವಕರ ಸಂಖ್ಯೆ ಸುಮಾರು 26 ಕೋಟಿ. ಇವರೇ ನಮ್ಮ ದೇಶದ ನಿಜವಾದ ಆಸ್ತಿ. ಆದರೆ ಈ ಯುವಕರ ಪಡೆ ಯಾವಾಗಲೂ ಹೀಗೆ ಇರುವುದಿಲ್ಲ.



ಚಿತ್ರ–1: 2030ರ ನಂತರ ಯುವಕರ ಸಂಖ್ಯೆ ಕಮ್ಮಿ ಆಗುತ್ತದೆ ಮತ್ತು ವಯಸ್ಸಾದವರ ಸಂಖ್ಯೆ ಹೆಚ್ಚುತ್ತದೆ. ಅದರ ಪರಿಣಾಮವಾಗಿ ದುಡಿಯುವ ವಯಸ್ಸಿನ ಜನಸಂಖ್ಯೆ ಮತ್ತು ಅವಲಂಬಿತರ ಅನುಪಾತ ಕಮ್ಮಿ ಆಗುವ ನಿರೀಕ್ಷೆಯಿದೆ

ಗರಿಷ್ಠ ಮಟ್ಟ ತಲುಪಿದ ಮೇಲೆ ಇವರ ಸಂಖ್ಯೆ ಇಳಿಯುವುದಕ್ಕೆ ಪ್ರಾರಂಭವಾಗುತ್ತದೆ. ಅಂದಾಜಿನ ಪ್ರಕಾರ 2036ರ ವೇಳೆಗೆ ಅವರ ಸಂಖ್ಯೆ 24.50 ಕೋಟಿಗೆ ಇಳಿಯುವ ನಿರೀಕ್ಷೆಯಿದೆ.


ಜನಸಂಖ್ಯೆಯ ಬೆಳವಣಿಗೆ ಎಲ್ಲಾ ರಾಜ್ಯಗಳಲ್ಲೂ ಒಂದೇ ರೀತಿಯಲ್ಲಿಲ್ಲ. ವರದಿ ಗುರುತಿಸಿರುವಂತೆ, ಕಳೆದ ನಾಲ್ಕು ದಶಕಗಳಲ್ಲಿ ಪಂಜಾಬ್, ಹರಿಯಾಣ, ಕೇರಳ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿ ಯುವಕರ ಸಂಖ್ಯೆ ಕಡಿಮೆಯಾಗತೊಡಗಿದೆ. ಹಲವು ರಾಜ್ಯಗಳಲ್ಲಿ ಅದು ಶೇಕಡ 5ರಷ್ಟು ಕಡಿಮೆಯಾಗಿದೆ. ಇನ್ನು ರಾಜಸ್ಥಾನ, ಮಧ್ಯಪ್ರದೇಶ, ಬಿಹಾರ ಮತ್ತು ಉತ್ತರಪ್ರದೇಶದಂತಹ ಕೆಲವು ರಾಜ್ಯಗಳಲ್ಲಿ ಯುವಕರ ಸಂಖ್ಯೆ ಹೆಚ್ಚುತ್ತಿದೆ. ಉತ್ತರಪ್ರದೇಶದಲ್ಲಿ ಶೇಕಡ 20ರಷ್ಟು ಏರಿಕೆಯಾಗಿದೆ. ಅಲ್ಲಿ ಅತಿಹೆಚ್ಚು ಯುವಕರಿದ್ದಾರೆ.

ನಮ್ಮ ಶಿಕ್ಷಣ ಕ್ಷೇತ್ರ

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ. ಆಗ ಕೇವಲ 1,644 ಉನ್ನತ ಶಿಕ್ಷಣ ಸಂಸ್ಥೆಗಳಿದ್ದವು. ಈಗ ಅವುಗಳ ಸಂಖ್ಯೆ 69,534 ಕ್ಕೆ ಏರಿದೆ. 2010ರಲ್ಲಿ ಪ್ರತಿ ಲಕ್ಷ ಯುವಕರಿಗೆ 29 ಕಾಲೇಜುಗಳಿದ್ದವು. ಈಗ ಲಕ್ಷ ಮಕ್ಕಳಿಗೆ 45 ಕಾಲೇಜುಗಳಿವೆ. ಒಟ್ಟು 4.3 ಕೋಟಿ ವಿದ್ಯಾರ್ಥಿಗಳಿದ್ದಾರೆ. ನಮ್ಮ ದೇಶದ ಶಿಕ್ಷಣ ವ್ಯವಸ್ಥೆ ಜಗತ್ತಿನಲ್ಲೇ ಅತಿ ದೊಡ್ಡದಾಗಿ ಬೆಳೆದಿದೆ. ಆದರೆ ಎಲ್ಲಾ ರಾಜ್ಯಗಳಲ್ಲೂ ಪರಿಸ್ಥಿತಿ ಒಂದೇ ರೀತಿ ಇಲ್ಲ. ಉತ್ತರ ಮತ್ತು ಪೂರ್ವ ಭಾರತದ ರಾಜ್ಯಗಳಲ್ಲಿ ಕಾಲೇಜುಗಳ ಸಂಖ್ಯೆ ಇನ್ನೂ ಕಡಿಮೆಯೇ ಇದೆ. ಆದರೆ ಒಟ್ಟಾರೆಯಾಗಿ ಸುಧಾರಣೆಯಾಗಿದೆ.

ಹಾಗೆಯೇ 2010ರ ನಂತರದಲ್ಲಿ ವೃತ್ತಿಪರ ತರಬೇತಿ ಸಂಸ್ಥೆಗಳು ಸಾಕಷ್ಟು ಬೆಳೆದಿವೆ. ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ (ಐಟಿಐ)ಗಳ ಸಂಖ್ಯೆ ಸುಮಾರು ಶೇ. 300 ರಷ್ಟು ಹೆಚ್ಚಾಗಿದೆ. ಇದರಲ್ಲಿ ಖಾಸಗಿ ಸಂಸ್ಥೆಗಳದ್ದೇ ದೊಡ್ಡ ಪಾಲು. ಆದರೆ ಇಲ್ಲೊಂದು ಸಮಸ್ಯೆ ಇದೆ. ಕೈಗಾರಿಕೆಗಳು ಅಥವಾ ಕಾರ್ಖಾನೆಗಳು ಇರುವ ಕಡೆ ಐಟಿಐಗಳಿಲ್ಲ, ಮತ್ತು ಐಟಿಐಗಳು ಇರುವ ಕಡೆ ಕಾರ್ಖಾನೆಗಳಿಲ್ಲ. ಅಂದರೆ, ಈ ಎರಡೂ ಸಂಸ್ಥೆಗಳ ನಡುವೆ ಸರಿಯಾದ ಹೊಂದಾಣಿಕೆ ಕಾಣಿಸುತ್ತಿಲ್ಲ.

a: Private Colleges



ಕ್ರಮೇಣ ಖಾಸಗಿ ಕಾಲೇಜುಗಳ ಸಂಖ್ಯೆ ಹೆಚ್ಚುತ್ತಿದೆ.

ನಮ್ಮಲ್ಲಿ ಓದುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಆದರೆ ಬೇಸರದ ಸಂಗತಿ ಅಂದರೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಮತ್ತು ಸಾಮಾಜಿಕ ಅಸಮಾನತೆ ಇನ್ನೂ ತೀವ್ರವಾಗಿಯೇ ಇದೆ. ಉನ್ನತ ಶಿಕ್ಷಣಕ್ಕೆ ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಗಳಿಗೆ ಸೇರಿದ ಯುವಕರ ದಾಖಲಾತಿ ದರವು ಕ್ರಮವಾಗಿ ಶೇ.21 ಮತ್ತು ಶೇ.26ರಷ್ಟಿದ್ದು, ಇವು ರಾಷ್ಟ್ರೀಯ ಸರಾಸರಿಗಿಂತ ಬಹಳ ಕಡಿಮೆಯಿದೆ.

ಅದಕ್ಕೆ ಹಲವು ಕಾರಣಗಳಿವೆ. ನಮ್ಮಲ್ಲಿರುವ ಒಟ್ಟು ಕಾಲೇಜುಗಳಲ್ಲಿ ಶೇಕಡ 60ಕ್ಕೂ ಹೆಚ್ಚು ಖಾಸಗಿ ಕಾಲೇಜುಗಳು. ಖಾಸಗಿ ಕಾಲೇಜುಗಳಲ್ಲಿ ಶಿಕ್ಷಣ ತುಂಬಾ ದುಬಾರಿ. ಅದರಲ್ಲೂ ವೃತ್ತಿಪರ ಶಿಕ್ಷಣ ಬಹಳ ದುಬಾರಿಯಾಗಿದೆ. 2007–08ರಲ್ಲೇ ವೈದ್ಯಕೀಯ ಪದವಿ ಓದೋಕೆ ವರ್ಷಕ್ಕೆ ಸರಾಸರಿ 1,10,005ರೂಪಾಯಿ ಮತ್ತು ಇಂಜಿನಿಯರಿಂಗ್ ಓದೋಕೆ 81,746 ರೂಪಾಯಿ ಖರ್ಚಾಗುತ್ತಿತ್ತು. ಹಾಗಾಗಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ವಿಜ್ಞಾನದಂತಹ ವೃತ್ತಿಪರ ಶಿಕ್ಷಣ ಬಹುತೇಕ ಶ್ರೀಮಂತ ಕುಟುಂಬಗಳ ಮಕ್ಕಳಿಗೆ ಸೀಮಿತವಾಗಿದೆ. ಈ ಪದವಿಗಳ ಓದಿನ ವೆಚ್ಚವು ಬಡ ಕುಟುಂಬಗಳ ವಾರ್ಷಿಕ ಸರಾಸರಿ ಖರ್ಚಿಗಿಂತಲೂ ಹೆಚ್ಚಾಗಿರುತ್ತದೆ. ಹಾಗಾಗಿ ವಿದ್ಯಾರ್ಥಿಗಳು ತಮಗೆ ಇಷ್ಟವಾದ ಕೋರ್ಸ್ ಆರಿಸಿಕೊಳ್ಳುವ ಬದಲು, ತಮ್ಮ ಮನೆಯ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ತಮಗೆಟುಕುವ ಕೋರ್ಸುಗಳನ್ನು ಓದುವಂತಾಗಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಹೆಚ್ಚಾಗಿ ಮಾನವಿಕ ವಿಜ್ಞಾನದ ಕೋರ್ಸ್‌ಗಳನ್ನೇ ಆರಿಸಿಕೊಳ್ಳುತ್ತಿದ್ದಾರೆ. ಅಂದರೆ, ಕಾಲೇಜುಗಳು ಹೆಚ್ಚಾಗಿದೆ ಅಂದಾಕ್ಷಣ ಎಲ್ಲರಿಗೂ ಸಮಾನ ಅವಕಾಶ ಸಿಕ್ಕಿದೆ ಅಂತ ಹೇಳೋಕೆ ಆಗಲ್ಲ. ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಯುವಕರ ಭವಿಷ್ಯವನ್ನು ನಿರ್ಧರಿಸುತ್ತಿವೆ. ಇದರಿಂದಾಗಿ ಬಡವರು ಇಂತಹ ಉನ್ನತ ಸಂಬಳದ ಉದ್ಯೋಗಗಳಿಂದ ವಂಚಿತರಾಗುತ್ತಿದ್ದಾರೆ. 2007 ಮತ್ತು 2017ರ ನಡುವೆ ಈ ಅಂತರ ಸ್ವಲ್ಪ ಕಡಿಮೆಯಾಗಿದ್ದರೂ, ವ್ಯತ್ಯಾಸ ಮಾತ್ರ ಇನ್ನೂ ಉಳಿದಿದೆ.

ಓದಿನಿಂದ ಹಿಮ್ಮುಖವಾಗುತ್ತಿರುವ ಯುವಕರು:

ಈ ವರದಿ ಇನ್ನೊಂದು ಆಶ್ಚರ್ಯಕರ ಅಂಶವನ್ನು ಮುಂದಿಡುತ್ತದೆ. 2007ರವರೆಗೆ ಹೆಚ್ಚೆಚ್ಚು ಯುವಕರು ಶಿಕ್ಷಣದತ್ತ ಒಲವು ತೋರಿಸುತ್ತಿದ್ದರು. ಕೆಲಸಕ್ಕೆ ಸೇರುವುದಕ್ಕಿಂತ ಓದಿನ ಕಡೆ ಹೆಚ್ಚು ಗಮನಕೊಡುತ್ತಿದ್ದರು. ಹಾಗಾಗಿ ಶಿಕ್ಷಣದಲ್ಲಿ ಯುವಕರ ದಾಖಲಾತಿಯಲ್ಲಿ ಏರಿಕೆಯನ್ನು ಕಾಣಬಹುದಿತ್ತು. ಹಾಗೆಯೇ ಆ ಅವಧಿಯಲ್ಲಿ ಉದ್ಯೋಗದ ದರ ಅದೇ ವೇಗದಲ್ಲಿ ಇಳಿಯುವುದನ್ನು ನೋಡಬಹುದು. ಆದರೆ 2017–18ರ ನಂತರದಲ್ಲಿ ಈ ಪ್ರವೃತ್ತಿಯಲ್ಲಿ ಬದಲಾವಣೆಯಾಗಿದೆ. ಹೆಚ್ಚೆಚ್ಚು ಯುವಕರು ಶಿಕ್ಷಣವನ್ನು ಮಧ್ಯದಲ್ಲೇ ನಿಲ್ಲಿಸಿ ಕೆಲಸ ಹುಡುಕಿಕೊಂಡು ಬರುತ್ತಿದ್ದಾರೆ. 2017ರಲ್ಲಿ ಶೇಕಡ 38ರಷ್ಟು ಗಂಡುಮಕ್ಕಳು ಉನ್ನತ ಶಿಕ್ಷಣಕ್ಕೆ ದಾಖಲಾಗಿದ್ದರು. ಆದರೆ 2024ರಲ್ಲಿ ಹಾಗೆ ಉನ್ನತ ಶಿಕ್ಷಣಕ್ಕೆ ದಾಖಲಾಗುತ್ತಿದ್ದ ಗಂಡುಮಕ್ಕಳ ಸಂಖ್ಯೆ ಶೇಕಡ 34ಕ್ಕೆ ಇಳಿದಿದೆ. ವರದಿ ಹೇಳುವಂತೆ ಕುಟುಂಬಕ್ಕೆ ಆರ್ಥಿಕವಾಗಿ ಬೆಂಬಲ ನೀಡಬೇಕಾದ ಅನಿವಾರ್ಯತೆಯಿಂದ ಈ ಯುವಕರು ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸುತ್ತಿದ್ದಾರೆ. ಇನ್ನೂ ದುರಂತವೆಂದರೆ ಹೀಗೆ ಓದು ಬಿಟ್ಟು ಕೆಲಸ ಹಿಡಿಯಬೇಕಾದವರ ಸಂಖ್ಯೆ ಹೆಚ್ಚುತ್ತಿದೆ. 2017ರಲ್ಲಿ ಮಧ್ಯದಲ್ಲೇ ಓದು ಬಿಟ್ಟ ಯುವಕರ ಪಾಲು 2017ರಲ್ಲಿ ಶೇಕಡ 58 ಇದ್ದುದು 2023ರಲ್ಲಿ ಶೇಕಡ 72ರಷ್ಟು ಆಗಿದೆ. ಮಹಿಳೆಯರು ಉನ್ನತ ವ್ಯಾಸಂಗಕ್ಕೆ ದಾಖಲಾತಿಯಾಗುತ್ತಿರುವ ದರದಲ್ಲಿ ಅಂತಹ ವ್ಯತ್ಯಾಸವಾಗಿಲ್ಲ. ಅದು ಸ್ಥಿರವಾಗಿಯೇ ಇದೆ. ಆದರೆ ಅವರಲ್ಲೂ ಹೆಚ್ಚೆಚ್ಚು ಜನ ಆರ್ಥಿಕ ಅನಿವಾರ್ಯತೆಯ ಕಾರಣದಿಂದ ಕೆಲಸಕ್ಕೆ ಸೇರುತ್ತಿದ್ದಾರೆ.

ಓದಿಗೆ ತಕ್ಕ ಉದ್ಯೋಗ ಸೃಷ್ಟಿಯಾಗುತ್ತಿಲ್ಲ:

2004ರ ನಂತರದ ಅವಧಿಯಲ್ಲಿ ಪ್ರತಿ ವರ್ಷ ಸುಮಾರು 50 ಲಕ್ಷ ಹೊಸ ಯುವಕರು ಪದವಿ ಮುಗಿಸಿ ಹೊರಬರುತ್ತಿದ್ದಾರೆ. ಆದರೆ ಕೆಲಸ ಸಿಗುತ್ತಿರುವುದು ಕೇವಲ 28 ಲಕ್ಷ ಜನರಿಗೆ ಮಾತ್ರ! 2023ರ ಲೆಕ್ಕದ ಪ್ರಕಾರ, 20–29 ವರ್ಷದ ಅವಧಿಯಲ್ಲಿ ಪದವಿ ಮುಗಿಸಿದ ಒಟ್ಟು 6.3 ಕೋಟಿ ಪದವೀಧರರಲ್ಲಿ ಸುಮಾರು 1.1 ಕೋಟಿ ಜನರಿಗೆ ಕೆಲಸವಿಲ್ಲ! ಅಂದರೆ ಕೈಯಲ್ಲಿ ಡಿಗ್ರಿ ಇದ್ದರೂ ಕೆಲಸವಿಲ್ಲದವರ ಸಂಖ್ಯೆ ಕೋಟಿ ದಾಟಿದೆ. ಪದವಿ ಮುಗಿಸಿದವರಲ್ಲಿ ಶೇ. 40ರಷ್ಟು ಜನರಿಗೆ ಕೆಲಸ ಸಿಗುತ್ತಿಲ್ಲ. ಇದು ಹೊಸ ಸಮಸ್ಯೆಯೇನಲ್ಲ. 1983ರಿಂದಲೂ ಈ ನಿರುದ್ಯೋಗ ದರ ಶೇ. 35ರಿಂದ 40ರಷ್ಟೇ ಇದೆ. ಆದರೆ ಈಗ ಪದವೀಧರರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದರಿಂದ ಇದು ದೊಡ್ಡದಾಗಿ ಕಾಣುತ್ತಿದೆ. ನಮ್ಮಷ್ಟೆ ಆದಾಯವಿರುವ ಬೇರೆ ದೇಶಗಳಿಗೆ ಹೋಲಿಸಿದರೆ ಅಲ್ಲಿಯೂ ಉನ್ನತ ಶಿಕ್ಷಣದ ದಾಖಲಾತಿ ದರ ನಮ್ಮಷ್ಟೇ ಇದೆ. ಹಾಗಾಗಿ ನಮ್ಮಲ್ಲಿ ಪದವೀಧರರು ಹೆಚ್ಚಿದ್ದಾರೆ, ಅದರಿಂದ ನಿರುದ್ಯೋಗ ಹೆಚ್ಚಿದೆ ಅನ್ನುವುದು ನಿಜವಲ್ಲ. ಉದ್ಯೋಗವನ್ನು ಸೃಷ್ಟಿಸುವಲ್ಲಿ ನಾವು ವಿಫಲರಾಗಿದ್ದೇವೆ ಅನ್ನುವುದು ವಾಸ್ತವ. ಅದರಲ್ಲೂ ಪ್ರತಿ ತಿಂಗಳು ಸಂಬಳ ಬರುವ ಖಾಯಂ ಕೆಲಸಗಳು ಪಡೆಯುತ್ತಿರುವವರ ಸಂಖ್ಯೆ ಇನ್ನೂ ಕಡಿಮೆ. ಅಂತಹ ಕೆಲಸ ಸಿಗುತ್ತಿರುವುದು ವರ್ಷಕ್ಕೆ ಕೇವಲ 17 ಲಕ್ಷ ಮಂದಿಗೆ ಮಾತ್ರ.

ಪರಿಸ್ಥಿತಿ ಹೀಗಿರುವಾಗ ಪದವಿ ಪಡೆಯುವುದರಿಂದ ಜನರ ಸ್ಥಿತಿ ಆರ್ಥಿಕವಾಗಿ ಸುಧಾರಣೆಯಾಗುತ್ತದೆ ಅಂತ ಹೇಳುವುದು ಕಷ್ಟವಾಗುತ್ತದೆ. ಅಂದರೆ, ಶಿಕ್ಷಣದ ಮೂಲಕ ಮೇಲ್ಮುಖ ಚಲನೆಯನ್ನು ಸಾಧಿಸುವುದಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ. ಬದಲಿಗೆ ಕುಟುಂಬದ ಆರ್ಥಿಕ ಸಂಕಷ್ಟವನ್ನು ನೀಗಿಕೊಳ್ಳುವುದಕ್ಕಾಗಿ ನಮ್ಮ ಯುವಕರು ಮಧ್ಯದಲ್ಲೇ ಓದು ಬಿಟ್ಟು, ಅನಿವಾರ್ಯವಾಗಿ ಉದ್ಯೋಗ ಹುಡುಕುವ ಪರಿಸ್ಥಿತಿ ಸೃಷ್ಟಿಯಾಗಿದೆ. ಆದರೆ ಪಟ್ಟಣಗಳಲ್ಲಿ ಕೆಲಸ ಸಿಗುತ್ತಿಲ್ಲ. ಸಿಕ್ಕರೂ ಉದ್ಯೋಗದ ಗುಣಮಟ್ಟ ತೀರಾ ಕಳಪೆಯಾಗಿದೆ. ಆದಾಯವೂ ಸ್ಥಗಿತಗೊಂಡಿದೆ.

ಕೃಷಿಯ ಕಡೆಗಿನ ಚಲನೆ

ಪಟ್ಟಣಗಳಲ್ಲಿ ಒಳ್ಳೆಯ ಕೆಲಸ ಸಿಗುತ್ತಿಲ್ಲವಾದ್ದರಿಂದ ಯುವಕರು ಹೆಚ್ಚೆಚ್ಚು ಕೃಷಿಯನ್ನು ಆತುಕೊಳ್ಳುತ್ತಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಉದ್ಯೋಗದ ಸಂಖ್ಯೆ ಹೆಚ್ಚುತ್ತಿದೆ. 2021–22 ಮತ್ತು 2023–24ರ ಅವಧಿಯಲ್ಲಿ ಒಟ್ಟಾರೆಯಾಗಿ 8.3 ಕೋಟಿ ಹೆಚ್ಚುವರಿ ಉದ್ಯೋಗಗಳು ಸೃಷ್ಟಿಯಾಗಿದ್ದವು. ಅದರಲ್ಲಿ 4ಕೋಟಿ ಜನ ಕೃಷಿವಲಯದಲ್ಲಿ ಉದ್ಯೋಗ ಕಂಡುಕೊಂಡಿದ್ದರು. ಹೀಗೆ ಉದ್ಯೋಗ ಕಂಡುಕೊಂಡವರಲ್ಲಿ ಹೆಚ್ಚಿನವರು (3.8 ಕೋಟಿ) ಮಹಿಳಾ ಕಾರ್ಮಿಕರು.

ಕೃಷಿಯೇತರ ಕ್ಷೇತ್ರಗಳಲ್ಲಿ, ದುಡಿಯುತ್ತಿರುವ ಮಹಿಳೆಯರು ಹೆಚ್ಚೆಚ್ಚು ಸ್ವಯಂ ಉದ್ಯೋಗದಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಆ ರೀತಿಯಲ್ಲಿ ಸ್ವಯಂ ಉದ್ಯೋಗದಲ್ಲಿ ತೊಡಗಿಕೊಂಡವರ ಸಂಖ್ಯೆ 2017ರಿಂದ ನಾಲ್ಕು ಪಟ್ಟು ಹೆಚ್ಚಾಗಿದೆ. ಅದನ್ನು ಬಿಟ್ಟರೆ ವಿಶೇಷವಾಗಿ ಉತ್ಪಾದನಾ ವಲಯ, ಐಟಿ, ಆರೋಗ್ಯ ಹಾಗೂ ಶಿಕ್ಷಣದಂತಹ ಸೇವಾವಲಯಗಳಲ್ಲಿ ಮಹಿಳೆಯರ ಪಾಲು ಹೆಚ್ಚಿದೆ. ಸಂಶೋಧನೆ, ಅಭಿವೃದ್ಧಿ ಹಾಗೂ ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲೂ ಅವರು ಹೆಚ್ಚೆಚ್ಚು ಕಾಣಿಸಿಕೊಳ್ಳುತ್ತಿದ್ದಾರೆ. ಆದರೆ ಯುವಕರ ಉದ್ಯೋಗದ ಮಾದರಿಯಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ಅವರು ಇಂದಿಗೂ ವ್ಯಾಪಾರ, ಸಾರಿಗೆ ಮತ್ತು ಕಟ್ಟಡ ನಿರ್ಮಾಣದಂತಹ ವಲಯಗಳಲ್ಲೇ ಕೇಂದ್ರೀಕೃತರಾಗಿದ್ದಾರೆ.

ವರದಿ ಗುರುತಿಸುವ ಇನ್ನೊಂದು ಅಂಶವೆಂದರೆ ಪದವೀಧರರ ಗಳಿಕೆಯಲ್ಲಿ ಏರಿಕೆಯಾಗುತ್ತಿಲ್ಲ. ಅದು ಸುಮಾರಾಗಿ ಸ್ಥಗಿತಗೊಂಡಿದೆ. 2011 ರವರೆಗೆ ಪದವೀಧರರ ವರಮಾನ ಸಾಕಷ್ಟು ವೇಗವಾಗಿಯೇ ಏರುತ್ತಿತ್ತು. ಅಲ್ಲಿಂದೀಚೆಗೆ ಅವರ ನೈಜ ವರಮಾನದ ಏರಿಕೆಯ ದರ ಕುಸಿದಿದೆ. ವಿಶೇಷವಾಗಿ ಪುರುಷರಲ್ಲಿ ಈ ಇಳಿಕೆ ಹೆಚ್ಚಾಗಿ ಕಾಣಿಸುತ್ತಿದೆ.

ಈ ಅವಧಿಯಲ್ಲಿ ಪದವೀಧರ ಪುರುಷ ಮತ್ತು ಮಹಿಳೆಯರ ನಡುವಿನ ವೇತನದ ಅಂತರವು ಗಣನೀಯವಾಗಿ ಕಡಿಮೆಯಾಗಿದೆ. 2023ರ ವೇಳೆಗೆ, 20ರಿಂದ 29 ವರ್ಷದ ಪದವೀಧರ ಮಹಿಳೆಯ ವೇತನವು ತನ್ನ ವಯಸ್ಸಿನ ಪುರುಷ ಸಹೋದ್ಯೋಗಿಯಷ್ಟೇ ಆಗಿದೆ. ಈ ಪ್ರವೃತ್ತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇದು ಸಂಭ್ರಮಪಡುವುದರ ಜೊತೆಗೆ ಆತಂಕಪಡಬೇಕಾದ ವಿಷಯವೂ ಆಗಿದೆ ಅನಿಸುತ್ತದೆ. 2017 ಮತ್ತು 2023ರ ನಡುವೆ, ಯುವತಿಯರ ನೈಜ ವರಮಾನವು ವರ್ಷಕ್ಕೆ ಶೇಕಡ ಒಂದರಷ್ಟು ಹೆಚ್ಚಾಗಿದೆ. ಆದರೆ ಯುವಕರ ವೇತನ ಹೆಚ್ಚು ಕಡಿಮೆ ಹಾಗೇ ಉಳಿದಿದೆ. ನೈಜ ವರಮಾನವನ್ನು ನೋಡಿದರೆ ಅಂದರೆ ಹಣದುಬ್ಬರವನ್ನು ಗಣನೆಗೆ ತೆಗೆದುಕೊಂಡರೆ ಯುವಕರ ವರಮಾನ ಇಳಿದಿದೆ ಅಂತಲೇ ಹೇಳಬೇಕು. ಯುವಕರ ವೇತನದಲ್ಲಿ ಕುಸಿತ, ಯುವತಿಯರ ವೇತನದಲ್ಲಿ ಹೆಚ್ಚಳ ಎರಡೂ ಸೇರಿಕೊಂಡು ಸ್ತ್ರೀ–ಪುರುಷರ ನಡುವಿನ ವೇತನದ ಅಂತರ ಕಡಿಮೆಯಾಗಿದೆ. ಅಂದರೆ ಪದವೀಧರ ಮಹಿಳೆಯರ ಸ್ಥಿತಿಯಲ್ಲಿ ಸುಧಾರಣೆಯಾಗಿರುವುದಕ್ಕೆ ಸಂಭ್ರಮಿಸಬಹುದಾದರೂ, ಯುವಕರ ಅವಕಾಶಗಳಲ್ಲಿ ಯಾವುದೇ ಸುಧಾರಣೆಯಾಗದೇ ಇರುವುದು ಆತಂಕದ ವಿಷಯ. ಮಹಿಳೆಯರಲ್ಲೂ ಸ್ವಯಂ ಉದ್ಯೋಗದಲ್ಲಿರುವ ಮಹಿಳೆಯರ ಆದಾಯದಲ್ಲಿ ಕುಸಿತವಾಗಿದೆ. ಹಾಗಾಗಿ ಒಟ್ಟಾರೆಯಾಗಿ ನೋಡಿದರೆ ಮಹಿಳೆಯರ ಆದಾಯದಲ್ಲೂ ದೊಡ್ಡ ಸುಧಾರಣೆಯಾಗಿದೆ ಅಂತ ಹೇಳಲಾಗದು.

ವಿವಿಧ ಪೀಳಿಗೆಯ ಯುವ ಕಾರ್ಮಿಕರನ್ನು ಹೋಲಿಸಿ ಅವರ ಜೀವಿತಾವಧಿಯ ವರಮಾನವನ್ನು ಗಮನಿಸಿದರೆ, ಹಳೆಯ ಪೀಳಿಗೆಗೆ ಹೋಲಿಸಿದರೆ ಇತ್ತೀಚಿನ ಪೀಳಿಗೆಯವರ ಆದಾಯದ ಬೆಳವಣಿಗೆ ಕಡಿಮೆಯಾಗುತ್ತಿರುವುದನ್ನು ನೋಡಬಹುದು. ಪುರುಷ ಪದವೀಧರರ ವರಮಾನದಲ್ಲಿ ಇಳಿಕೆಯಾಗುತ್ತಿರುವುದು ಅಥವಾ ಕನಿಷ್ಠ ಸ್ಥಗಿತಗೊಂಡಿರುವುದನ್ನು ಸ್ಪಷ್ಟವಾಗಿ ಕಾಣಬಹುದು. ಇದಕ್ಕೆ ಅವರು ಆಯ್ಕೆ ಮಾಡಿಕೊಳ್ಳುತ್ತಿರುವ ಉದ್ಯೋಗ ಕಾರಣವಲ್ಲ. ಯಾವುದೇ ಉದ್ಯೋಗದಲ್ಲೂ ಈ ಹಿಂದೆ ಪದವೀಧರರಿಗೆ ಸಿಗುತ್ತಿದ್ದ ವೇತನ ಈಗ ಸಿಗುತ್ತಿಲ್ಲ. ಓದಿದವರು ಒಳ್ಳೆ ಕೆಲಸ ಸಿಗದ ಕಾರಣ ಅನಿವಾರ್ಯವಾಗಿ ಗಿಗ್ ಎಕಾನಮಿ (ಡೆಲಿವರಿ ಕೆಲಸ ಇತ್ಯಾದಿ) ಸೇರುತ್ತಿದ್ದಾರೆ. ಅಂದರೆ ನಮ್ಮ ಆರ್ಥಿಕತೆ ಯುವಜನಾಂಗವನ್ನು ಲಾಭಕರವಾಗಿ ಬಳಸಿಕೊಳ್ಳುವಲ್ಲಿ ವಿಫಲವಾಗಿದೆ ಅನ್ನುವುದು ಸ್ಪಷ್ಟ. ಪರಿಸ್ಥಿತಿ ಹೀಗೇ ಮುಂದುವರಿದು, ಯುವಕರನ್ನು ಹೊರೆಯಾಗಿ ಕಾಣುವ ಪರಿಸ್ಥಿತಿ ನಿರ್ಮಾಣವಾಗಬಾರದು.

ಜಾತಿ ಮತ್ತು ಲಿಂಗಾಧಾರಿತ ಕೆಲಸಗಳಲ್ಲಿ ಬದಲಾವಣೆ:

ವರದಿ ಗಮನಿಸುವ ಒಂದು ಸ್ವಾಗತಾರ್ಹ ಬದಲಾವಣೆಯೆಂದರೆ ಇತ್ತೀಚಿನ ದಿನಗಳಲ್ಲಿ ಜಾತಿ ಮತ್ತು ಲಿಂಗಾಧಾರಿತ ಉದ್ಯೋಗ ಪದ್ಧತಿ ಸಡಿಲವಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯುವಕರು ತಮ್ಮ ಜಾತಿಗೆ ಸಾಂಪ್ರದಾಯಿಕವಾಗಿ ಅಂಟಿಕೊಂಡಿದ್ದ ಉದ್ಯೋಗಗಳಲ್ಲಿ (ಚರ್ಮೋದ್ಯೋಗ, ತ್ಯಾಜ್ಯ ನಿರ್ವಹಣೆ, ಗಣಿಗಾರಿಕೆ ಇತ್ಯಾದಿ) ತೊಡಗಿಸಿಕೊಳ್ಳುವುದು ಕಡಿಮೆಯಾಗುತ್ತಿದೆ. ಉದಾಹರಣೆಗೆ, 1983ರಲ್ಲಿ ಚರ್ಮ ಮತ್ತು ಪಾದರಕ್ಷೆ ಉದ್ಯಮದಲ್ಲಿ ಕೆಲಸ ಮಾಡುವ ಪರಿಶಿಷ್ಟ ಜಾತಿ/ಪಂಗಡದ ಜನರಲ್ಲಿ ಯುವಕರ ಪಾಲು ಶೇ. 40ರಷ್ಟಿತ್ತು. ಆದರೆ 2023ರ ವೇಳೆಗೆ ಇದು ಶೇ. 24ಕ್ಕೆ ಇಳಿದಿದೆ. ಮಹಿಳೆಯರ ವಿಷಯದಲ್ಲೂ ಅಷ್ಟೇ, ತಂಬಾಕು ಮತ್ತು ವೈಯಕ್ತಿಕ ಸೇವೆಗಳಂತಹ ಸಾಂಪ್ರದಾಯಿಕ ಕ್ಷೇತ್ರಗಳಲ್ಲಿ ಯುವತಿಯರ ಸಂಖ್ಯೆ ಕಡಿಮೆಯಾಗುತ್ತಿದೆ. ಅವರು ಹೆಚ್ಚೆಚ್ಚು 'ಆಧುನಿಕ' ಉದ್ಯೋಗ ವಲಯಗಳಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಇದು ಜಾತಿ ಹಾಗು ಲಿಂಗಾಧಾರಿತ ವೃತ್ತಿ ವಿಭಜನೆ ಅಥವಾ ಪ್ರತ್ಯೇಕತೆ ಸಡಿಲಗೊಳ್ಳುತ್ತಿರುವುದನ್ನು ಸೂಚಿಸುತ್ತದೆ. ಆದರೆ ಅವರು ಬೇರೆ ಯಾವ ಬಗೆಯ ಉದ್ಯೋಗಕ್ಕೆ ಸೇರುತ್ತಿದ್ದಾರೆ ಅನ್ನುವುದರ ಬಗ್ಗೆ ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ಹೆಚ್ಚಿನ ದತ್ತಾಂಶ ಈ ಬಗ್ಗೆ ಸ್ಪಷ್ಟ ಚಿತ್ರವನ್ನು ಕೊಡಬಲ್ಲದು.

ವಲಸೆ: ಕೆಲಸ ಮತ್ತು ಜನರ ನಡುವಿನ ಕೊಂಡಿ

ಕೆಲಸಗಳು ಒಂದು ಕಡೆ ಇರುತ್ತವೆ, ಕೆಲಸ ಮಾಡುವ ಜನ ಇನ್ನೊಂದು ಕಡೆ ಇರುತ್ತಾರೆ. ಇಂತಹ ಸಮಯದಲ್ಲಿ ಕೆಲಸ ಹುಡುಕಿಕೊಂಡು ಇನ್ನೊಂದು ಊರಿಗೆ ವಲಸೆ ಹೋಗುವುದು ಅನಿವಾರ್ಯವಾಗುತ್ತದೆ. ಅಭಿವೃದ್ಧಿಯಲ್ಲಿನ ಪ್ರಾದೇಶಿಕ ಅಸಮಾನತೆಯಿಂದಾಗಿ ಯುವಕರು ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದ ರಾಜ್ಯಗಳ ಯುವಕರು ಕೆಲಸ ಹುಡುಕಿಕೊಂಡು ಆರ್ಥಿಕವಾಗಿ ಮುಂದುವರಿದ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ಯುಪಿ, ಬಿಹಾರ, ಜಾರ್ಖಂಡ್, ಅಸ್ಸಾಂ ಮತ್ತು ಒಡಿಶಾ ರಾಜ್ಯಗಳಿಂದ ಹೆಚ್ಚಾಗಿ ಜನ ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಾರೆ. ಹೀಗೆ ವಲಸೆ ಹೋಗುವುದಕ್ಕೆ ಕೇವಲ ಬಡತನವೊಂದೇ ಕಾರಣವಲ್ಲ. ಅಲ್ಲಿ ಯುವಕರ ಸಂಖ್ಯೆಯೂ ಹೆಚ್ಚಿದೆ ಇದೆ. ಸಾಮಾನ್ಯವಾಗಿ ಇವರೆಲ್ಲಾ ವಲಸೆ ಹೋಗುವುದು ಹೆಚ್ಚು ತಲಾವರಮಾನವಿರುವ ದೆಹಲಿ, ಹರಿಯಾಣ, ಮಹಾರಾಷ್ಟ್ರ, ಪಂಜಾಬ್ ರಾಜ್ಯಗಳಿಗೆ. ಆರ್ಥಿಕವಾಗಿ ಮುಂದುವರಿದ ರಾಜ್ಯಗಳು ತಮ್ಮ ಕೆಲಸದ ಅಗತ್ಯಗಳಿಗಾಗಿ ಈ ವಲಸಿಗ ಯುವಕರನ್ನೇ ಹೆಚ್ಚೆಚ್ಚು ಅವಲಂಬಿಸುತ್ತಿವೆ. ವಲಸೆ ಅನ್ನುವುದು ರಾಜ್ಯಗಳ ನಡುವೆ ಉದ್ಯೋಗದ ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳುವ ಏರುಪೇರನ್ನು ತಹಬಂದಿಗೆ ತರುವ ಸಹಜ ಪ್ರತಿಕ್ರಿಯೆಯಾಗಿದೆ. ಆರ್ಥಿಕ ಸಂಕಷ್ಟದಿಂದ ವಲಸೆ ಹೋಗುವಾಗ ಜನಸಂಖ್ಯೆಯ ಒತ್ತಡ, ತಮ್ಮ ರಾಜ್ಯಗಳಿಗೆ ಹತ್ತಿರವಿರುವ ನಗರಗಳು ಮತ್ತು ಅಲ್ಲಿ ಮೊದಲೇ ಹೋಗಿ ನೆಲೆಸಿರುವ ಪರಿಚಯಸ್ತರ ನೆಟ್‌ವರ್ಕ್ ಇವೆಲ್ಲವನ್ನೂ ಗಮನಿಸುತ್ತಾರೆ.

ಭಾರತ ಇನ್ನು ಕೂಡ ಯುವಕರ ದೇಶವೇ ಹೌದು. ಇಲ್ಲಿ ಈಗಲೂ ಯುವಕರು ಹೆಚ್ಚಾಗಿ ಇರುವುದು ಒಂದು ಸುವರ್ಣಾವಕಾಶ. ಆದರೆ ಈ ಅವಕಾಶ ತುಂಬಾ ದಿನ ಇರುವುದಿಲ್ಲ. ನಿಧಾನವಾಗಿ ಕೈಜಾರಿಹೋಗುತ್ತಿದೆ. ಯುವಕರ ಸಂಖ್ಯೆ ಈಗಲೇ ಕಡಿಮೆಯಾಗಲು ಪ್ರಾರಂಭವಾಗಿದೆ. ಆದ್ದರಿಂದ, ನಮಗೆ ಉಳಿದಿರುವ ಸಮಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಹೆಚ್ಚು ಉತ್ಪಾದಕವಾದ ಉದ್ಯೋಗವನ್ನು ಸೃಷ್ಟಿಸಬೇಕು. ಭಾರತಕ್ಕೆ ಹೋಲಿಸಿದರೆ ಎಷ್ಟೋ ದೇಶಗಳು ತಮ್ಮಲ್ಲಿ ಯುವಕರಿಗೆ ಹೆಚ್ಚು ಉಪಯುಕ್ತವಾದ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿವೆ. ನಾವು ಈ ನಿಟ್ಟಿನಲ್ಲಿ ಸೋತಿದ್ದೇವೆ. ಹೆಚ್ಚು ಯುವಕರನ್ನು ಹೊಂದಿರುವ ರಾಜ್ಯಗಳಲ್ಲಿ ನಮಗೆ ಒಳ್ಳೆಯ ವೇತನದ ಉದ್ಯೋಗವನ್ನು ಸೃಷ್ಟಿಸುವುದಕ್ಕೆ ಸಾಧ್ಯವಾಗಿಲ್ಲ. ನಮ್ಮಲ್ಲಿರುವ ಅಪಾರ ಯುವಶಕ್ತಿಯ ಲಾಭಪಡೆದುಕೊಳ್ಳುವುದಕ್ಕೆ ನಮಗೆ ಸಾಧ್ಯವಾಗಬೇಕು. ಅದು ಸಾಧ್ಯವಾಬೇಕಾದರೆ ಶಿಕ್ಷಣದ ವ್ಯವಸ್ಥೆ ಅಂತಹ ಉದ್ಯೋಗಗಳನ್ನು ಸೃಷ್ಟಿಸುವುದಕ್ಕೆ ಪೂರಕವಾಗಿರಬೇಕು. ವಿಭಿನ್ನ ಬಗೆಯ ಉದ್ಯೋಗ ಸೃಷ್ಟಿಸುವುದಕ್ಕೆ ನಮಗೆ ಸಾಧ್ಯವಾಬೇಕು. ಮೂರನೆಯದಾಗಿ ವಲಸೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದಕ್ಕೆ ಸಾಧ್ಯವಾಗಬೇಕು. ಅದು ಪ್ರಾದೇಶಿಕ ಅಸಮತೋಲನವನ್ನು ಸರಿತೂಗಿಸುವುದಕ್ಕೆ ಅತ್ಯಂತ ಪರಿಣಾಮಕಾರಿಯಾದ ಸಾಧನ.

ಕಲಿಕೆಯಿಂದ ಗಳಿಕೆಯವರೆಗಿನ ಯುವಕರ ಪಯಣ ಸುಗಮವಾಗಿರಬೇಕು. ಇದಕ್ಕೆ ಬರೀ ಕೌಶಲ ಬೆಳೆಸಲು ತರಬೇತಿ ನೀಡಿದರೆ ಸಾಲುವುದಿಲ್ಲ. ಅದಕ್ಕೆ ತಕ್ಕಂತೆ ಒಳ್ಳೆ ಸಂಬಳ ಸಿಗುವ ಮತ್ತು ಖಾಯಂ ಉದ್ಯೋಗಗಳೂ ಸೃಷ್ಟಿಯಾಗಬೇಕು. ಕೌಶಲದಿಂದ ಮನುಷ್ಯನ ಕೆಲಸದ ಸಾಮರ್ಥ್ಯ ಹೆಚ್ಚಾಗುವುದು ನಿಜ, ಆದರೆ ಆ ಸಾಮರ್ಥ್ಯಕ್ಕೆ ಸರಿಯಾದ ಬೆಲೆ ಮತ್ತು ಗೌರವ ಸಿಗಬೇಕೆಂದರೆ ಮಾರುಕಟ್ಟೆಯಲ್ಲಿ ಗುಣಮಟ್ಟದ ಕೆಲಸಗಳು ಲಭ್ಯವಿರಬೇಕು. ಇದು ಸಾಧ್ಯವಾಗಬೇಕಾದರೆ ಸರ್ಕಾರ ಜನಸಂಖ್ಯೆಯ ಒತ್ತಡ, ರಾಜ್ಯಗಳ ನಡುವಿನ ಅಂತರ, ಸಾಮಾಜಿಕ ಮತ್ತು ಲಿಂಗಾಧಾರಿತ ತಾರತಮ್ಯಗಳು, ಅಸಂಘಟಿತ ಕೆಲಸಗಳ ಸಮಸ್ಯೆ ಇವೆಲ್ಲವನ್ನು ಅರ್ಥಮಾಡಿಕೊಂಡು ಇವೆಲ್ಲವನ್ನೂ ಒಟ್ಟಾಗಿ ನಿಭಾಯಿಸುವುದಕ್ಕೆ ಬೇಕಾದ ಒಂದು ಸಮಗ್ರ ಹಾದಿಯನ್ನು ಕಂಡುಕೊಳ್ಳಬೇಕು. ಆಗ ಮಾತ್ರ ಭಾರತಕ್ಕೆ ತನ್ನ ಅಪಾರ ಯುವಶಕ್ತಿಯನ್ನು ಆರ್ಥಿಕವಾಗಿ ಅನುಕೂಲಕರವಾದ ರೀತಿಯಲ್ಲಿ ಬಳಸಿಕೊಳ್ಳಲು ಸಾಧ್ಯ ಮತ್ತು ಎಲ್ಲರಿಗೂ ಆರ್ಥಿಕ ಅನುಕೂಲವನ್ನು ಸಮಾನವಾಗಿ ಒದಗಿಸಲು ಸಾಧ್ಯ.